ಸಂಪುಟ: 14 Volume | ಸಂಚಿಕೆ: 26 Issue | ಪುಟಗಳು 08 Pages | ಗುರುವಾರ 30 ಏಪ್ರಿಲ್ 2026 | ₹4 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ನಿಮ್ಮಷ್ಟಕ್ಕೆ ನೀವೇ ಬೆಳೆಯಬೇಕು.ಅದಕ್ಕಾಗಿ ಬೇರೊಬ್ಬ ಶಿಕ್ಷಕನಿರುವುದಿಲ್ಲ.
–ಸ್ವಾಮಿ ವಿವೇಕಾನಂದ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ಹಜ್ ಯಾತ್ರಿಗಳಿಗೆ ಸನ್ಮಾನ 6
ಗುರುವಂದನ ಸ್ನೇಹ ಸಮ್ಮಿಲನ 7
ಕ್ರಮಗಳೊಂದಿಗೆ ಉರ್ಸ್ ಶರೀಫ್‌ಗೆ ಸಿದ್ಧತೆ 8

## ಮಲ್ಲಮ್ಮ ನುಡಿ ಹುಬ್ಬಳ್ಳಿ ಆವೃತ್ತಿ ಇದೀಗ ಮಾರುಕಟ್ಟೆಗೆ... ಓದುಗರ ಗಮನಕ್ಕೆ

ಕಲಬುರಗಿ ಆವೃತ್ತಿ, ಜೊತೆಗೆ ಹುಬ್ಬಳ್ಳಿಯಿಂದ ಪ್ರಕಟವಾಗುತ್ತಿರುವ **"ಮಲ್ಲಮ್ಮ ನುಡಿ"** ಪತ್ರಿಕೆ ಇದೇ ಮೇ 1ರಿಂದ ಅಧಿಕೃತವಾಗಿ ಶ್ರೀ ರಮೇಶರೆಡ್ಡಿ ಸಂಪಾದಕರು, ಹಾಗೂ ಡಾ. ರವಿಂದ್ರ ಜಲರೆಡ್ಡಿ ರವರ ಪ್ರಧಾನ ಸಂಪಾದಕತ್ವ,ಆರಂಭವಾಗುತ್ತಿದೆ.

ಸಮಾಜದ ಧ್ವನಿಯಾಗಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವ ವೇದಿಕೆಯಾಗಿರುವ ಈ ಪತ್ರಿಕೆ ಸತ್ಯ, ನ್ಯಾಯ, ಜನಪರತೆ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ತನ್ನ ಧ್ಯೇಯವಾಗಿಸಿಕೊಂಡಿದೆ. ಗ್ರಾಮೀಣ ಸಮಸ್ಯೆಗಳು, ರೈತರ ಹಿತ, ಯುವಕರ ಭವಿಷ್ಯ, ಮಹಿಳಾ ಸಬಲೀಕರಣ, ಶಿಕ್ಷಣ, ಆರೋಗ್ಯ, ಸಾಮಾಜಿಕ ನ್ಯಾಯ ಹಾಗೂ ಜನಜಾಗೃತಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಜನರ ಮುಂದಿಡುವ ನಿಟ್ಟಿನಲ್ಲಿ **"ಮಲ್ಲಮ್ಮ ನುಡಿ"** ತನ್ನ ಸೇವೆಯನ್ನು ಪ್ರಾರಂಭಿಸುತ್ತಿದೆ. ಸಾರ್ವಜನಿಕರು, ಸಂಘ ಸಂಸ್ಥೆಗಳು, ಸಾಮಾಜಿಕ ಹೋರಾಟಗಾರರು ಹಾಗೂ ಜನಪ್ರತಿನಿಧಿಗಳು ತಮ್ಮ ಪ್ರದೇಶದ ಸಮಸ್ಯೆಗಳು, ಕಾರ್ಯಕ್ರಮಗಳು ಮತ್ತು ಜನಹಿತದ ಸುದ್ದಿಗಳನ್ನು ಪತ್ರಿಕೆಗೆ ಕಳುಹಿಸಿ ಸಹಕರಿಸಬೇಕು ಎಂದು ವಿನಂತಿಸಿಕೊಳ್ಳುತ್ತೇವೆ. **"ಮಲ್ಲಮ್ಮ ನುಡಿ"** ಪತ್ರಿಕೆಯನ್ನು ಓದಿ, ಬೆಂಬಲಿಸಿ, ಜನಪರ ಪತ್ರಿಕೋದ್ಯಮವನ್ನು ಬಲಪಡಿಸೋಣ. ಮೇ 1ರಿಂದ ನಿಮ್ಮ ಸೇವೆಗೆ– **ಮಲ್ಲಮ್ಮ ನುಡಿ**

–ಸಂಪಾದಕ ಮಂಡಳಿ



ಯಾದಗಿರಿ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಶ್ರೀಮತಿ ಉತ್ತರಾದೇವಿ ಮಠಪತಿ ರವರು ನಮ್ಮ ಮಲ್ಲಮ್ಮ ನುಡಿ ಪತ್ರಿಕೆಯ ಯುಗಾದಿ ವಿಶೇಷ ಸಂಚಿಕೆಯನ್ನು ಸ್ವೀಕರಿಸಿ ಮನಪೂರ್ವಕವಾಗಿ ಹಾರೈಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಮಲ್ಲಮ್ಮ ನುಡಿ ಪತ್ರಿಕೆಯ ಜಿಲ್ಲಾ ವರದಿಗಾರರಾದ ಡಿ.ಕೆ. ದೇವಿಂದ್ರ ಮತ್ತು ಅಂಬೇಡ್ಕರ್ ಸೇನೆಯ ಜಿಲ್ಲಾಧ್ಯಕ್ಷ ಭೀಮಾಶಂಕರ್ ಎಂ ಯರಗೋಳ ಇದ್ದರು.

## ರಾಗಾ ಹೋರಾಟಕ್ಕೆ ಈಶ್ವರ ಖಂಡ್ರೆ ಬೆಂಬಲ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಅಭಿವೃದ್ಧಿಯ ಹೆಸರಲ್ಲಿ ನಿಕೋಬಾರ್ ದ್ವೀಪದ ಲಕ್ಷಾಂತರ ವೃಕ್ಷಗಳಿಗೆ ಕೊಡಲಿ ಪೆಟ್ಟು ನೀಡಲು ಮುಂದಾಗಿರುವ ಕೇಂದ್ರ ಸರ್ಕಾರದ ವಿರುದ್ಧ ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧೀ ದ್ವನಿ ಎತ್ತಿದ್ದು, ಈ ಹೋರಾಟಕ್ಕೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರ ಉದ್ಯಮಪತಿಗಳಿಗ ಅನುಕೂಲ ಮಾಡಿಕೊಡಲು ಲಕ್ಷಾಂತರ ಗಿಡಗಳ ಮಾರಣ ಹೋಮ ಮಾಡಲು,ಜೀವವೈವಿಧ್ಯನಾಶಪಡಿಸಲು ಮುಂದಾಗಿರುವುದು ದುರ್ದೈವ. ಈ ನಿಟ್ಟಿನಲ್ಲಿ ರಾಹುಲ್ ಗಾಂಧೀ ಅವರ ಪ್ರಕೃತಿ,ಪರಿಸರದ ಕಾಳಜಿಗೆ ತಾವು ಬೆಂಬಲ ನೀಡುವುದಾಗಿ



ಹೇಳಿದ್ದಾರೆ. ಇಂದು ಇಡೀ ಮಾನವಕುಲ ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಕಾಲಘಟ್ಟದಲ್ಲಿದ್ದು, ಹೆಚ್ಚುತ್ತಿರುವ ಬಿಸಿ, ಋತುಮಾನಗಳ ವ್ಯತ್ಯಯದಿಂದ ನಲುಗಿ ಹೋಗಿದೆ. ಪ್ರಕೃತಿಯೂ ಉಳಿಯಬೇಕು, ಅಭಿವೃದ್ಧಿಯೂ ಆಗಬೇಕು, ಸುಸ್ಥಿರ ಅಭಿವೃದ್ಧಿ ಆಗಬೇಕು ಎಂದು ಈಶ್ವರ ಖಂಡ್ರೆ ಹೇಳಿದ್ದಾರೆ.

## ಅಭಿಮಾನೋತ್ಸವಕ್ಕೆ 10 ಲಕ್ಷ ಜನರ ನಿರೀಕ್ಷೆ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ**

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕಳೆದ 5 ದಶಕಗಳಿಂದ ಬಡವರು, ರೈತರ, ಶೋಷಿತರು, ಪೀಡಿತರ ಪರವಾಗಿ ಹೋರಾಟ ಮಾಡಿದವರು. ಇದು ಇಂದಿನ ಯುವಪೀಳಿಗೆ ಮತ್ತು ಎಲ್ಲ ರಾಜಕಾರಣಿಗಳಿಗೆ ಮಾದರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಇಂದು ಮಾತನಾಡಿದ ಅವರು, ಬಿಎಸ್‌ವೈ ಅಭಿಮಾನೋತ್ಸವದ ಮುಖೇನ ಮತ್ತೊಮ್ಮೆ ಆ ಹೋರಾಟದ ಕಿಚ್ಚು ರಾಜ್ಯದಲ್ಲಿ ಬರಬೇಕಿದೆ. ಪ್ರಾಮಾಣಿಕವಾಗಿ ಎಲ್ಲ ಸಮುದಾಯದ ಪರವಾಗಿ ಧ್ವನಿ ಎತ್ತುವ ಕೆಲಸ ಆಗಬೇಕಿದೆ ಎಂದು ನುಡಿದರು.



ಅವರು ಒಂದು ಸಮುದಾಯದ ನಾಯಕರಲ್ಲ. ನಾಡಿನ ಎಲ್ಲ ಸಮುದಾಯದವರು ಅವರನ್ನು ತಮ್ಮ ನಾಯಕರೆಂದು ಗುರುತಿಸಿದ್ದಾರೆ ಎಂದು ಹೇಳಿದರು. ಯಡಿಯೂರಪ್ಪನವರು ಪರಿಶ್ರಮದಿಂದ ರಾಜ್ಯದಲ್ಲಿ ಸಂಘಟನೆ ಮಾಡಿದವರು. ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಅವರು ಎಲ್ಲರಿಗೂ ಪ್ರೇರಣಾಶಕ್ತಿ ಎಂದು ವಿಶ್ಲೇಷಿಸಿದರು. ಯಡಿಯೂರಪ್ಪನವರ ಹೆಸರು ಕೇಳಿದರೆ ನಮ್ಮ ಕಾರ್ಯಕರ್ತರಲ್ಲಿ ರೋಮಾಂಚನ ಆಗುತ್ತದೆ ಎಂದರು.

# ಸಂಪುಟ ಹೈಗೂ ಸಂಕಟ

## ಪಂಚ ಚುನಾವಣಾ ಫಲಿತಾಂಶಕ್ಕೆ ದಿನಗಣನೆ | ಕಾಂಗ್ರೆಸ್ ಪಾಳಯದಲ್ಲಿ ಚಟುವಟಿಕೆ ಬಿರಿಸು

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ರಾಜ್ಯಪಂಚ ರಾಜ್ಯ ರಾಜಕೀಯದಲ್ಲಿ ಕುರ್ಚಿ ಕಲಹ ಜಾರಿಯಲ್ಲಿದೆ. ಪಂಚ ಚುನಾವಣಾ ಫಲಿತಾಂಶಕ್ಕೆ ದಿನಗಣನೆ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಪಾಳಯದಲ್ಲಿ ಚಟುವಟಿಕೆ ಗರಿಗೆದರಿದೆ. ಮುಖ್ಯಮಂತ್ರಿ ಬದಲಾವಣೆ ಹಾಗೂ ಸಚಿವ ಸಂಪುಟ ವಿಸ್ತರಣೆ ಸಂಬಂಧ ಎರಡು ಬಣಗಳ ನಾಯಕರು ಆಸೆಗಣ್ಣಿನಿಂದ ನಿರೀಕ್ಷೆಯಲ್ಲಿದ್ದಾರೆ. ಆದರೆ ಅನಿಶ್ಚಿತತೆ ಹೆಚ್ಚುತ್ತಿರುಜವುದರಿಂದ, ಎರಡು ಬಣಗಳು ನಿರ್ಣಾಯಕ ನಿರ್ಧಾರಕ್ಕಾಗಿ ಒತ್ತಡ ಹೆಚ್ಚುತ್ತಿರುವುದರಿಂದ ಕಾಂಗ್ರೆಸ್ ಹೈಕಮಾಂಡ್ ರಾಜಕೀಯ ಸಂಕಷ್ಟದಲ್ಲಿ ಸಿಲುಕಿರುವಂತೆ ಕಾಣುತ್ತಿದೆ.

**ಅಧಿಕಾರಕ್ಕಾಗಿ ತೀವ್ರ ಹೋರಾಟ:** ಪಕ್ಷದ ಹೈಕಮಾಂಡ್ ಮೇಲೆ ಒತ್ತಡ ಹೇರಲು ರಾಜ್ಯದ ಸಚಿವರು ಮತ್ತು ಶಾಸಕರ ಗುಂಪೊಂದು ನವದೆಹಲಿಗೆ ಬಂದಿಳಿದಿದೆ. ಕೇಂದ್ರ ನಾಯಕತ್ವವು ಎರಡೂ ಕಡೆಯಿಂದಲೂ ತೀವ್ರವಾದ ಲಾಬಿಯನ್ನು ಎದುರಿಸುತ್ತಿದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬೆಂಬಲಕ್ಕೆ ನಿಂತಿರುವ ನಾಯಕರು ಬದಲಾವಣೆಗಳ ಸೂಚನೆಗಳ ನಡುವೆ ಅಧಿಕಾರಕ್ಕಾಗಿ ತೀವ್ರ ಹೋರಾಟ ನಡೆಸುತ್ತಿದ್ದಾರೆ.

**ಆಡಳಿತದ ಮೇಲೆ ಪರಿಣಾಮ:** ಹೈಕಮಾಂಡ್ ಭೇಟಿ ಮಾಡಿದ ಹಿರಿಯ ನಾಯಕರು, ರಾಜಕೀಯ ಬಿಕ್ಕಟ್ಟನ್ನು ತ್ವರಿತವಾಗಿ ಪರಿಹರಿಸದಿದ್ದರೆ, ಅದು ಆಡಳಿತದ ಮೇಲೆ ಪರಿಣಾಮ ಬೀರುತ್ತದೆ ಮತ್ತು ಸಾರ್ವಜನಿಕ ವಿಶ್ವಾಸವನ್ನು ಕುಗ್ಗಿಸಬಹುದು ಎಂದು ಎಚ್ಚರಿಸಿದ್ದಾರೆ.









### ತಕ್ಷಣ ಮಧ್ಯಪ್ರವೇಶಿಸುವಂತೆ ಆಗ್ರಹ

ಸೋಮವಾರ ಮತ್ತು ಮಂಗಳವಾರ, ಸಚಿವ ಕೆ.ಎಚ್. ಮುನಿಯಪ್ಪ ಮತ್ತು ಸತೀಶ್ ಜಾರಕಿಹೊಳಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೆವಾಲಾ ಅವರಿಗೆ ಬದಲಾಗುತ್ತಿರುವ ಪರಿಸ್ಥಿತಿಯ ಬಗ್ಗೆ ವಿವರಿಸಿದ್ದಾರೆ, 2028 ರ ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ಪಕ್ಷಕ್ಕಾಗುವ ಹಾನಿಯನ್ನು ತಡೆಯಲು ತಕ್ಷಣ ಮಧ್ಯಪ್ರವೇಶಿಸುವಂತೆ ಒತ್ತಾಯಿಸಿದ್ದಾರೆ.

### ಗೊಂದಲ ಮತ್ತಷ್ಟು ಉಲ್ಬಣ

ಅಲ್ಪಸಂಖ್ಯಾತ ಸಮುದಾಯಗಳಿಗೆ ಧೈರ್ಯ ತುಂಬಲು ಜಾರಕಿಹೊಳಿ ವಿಶ್ವಾಸ ವರ್ಧನೆಯ ಕ್ರಮಗಳನ್ನು ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ, ಆತುರದ ನಿರ್ಧಾರಗಳು 2028 ಕ್ಕೆ ಮಾತ್ರವಲ್ಲದೆ ನಂತರದ ಲೋಕಸಭಾ ಚುನಾವಣೆಗೂ ಅಪಾಯ ಉಂಟು ಮಾಡಬಹುದು ಎಂದು ಎಚ್ಚರಿಸಿದ್ದಾರೆ. ದಲಿತ ಮುಖ್ಯಮಂತ್ರಿಗಾಗಿ ಹೊಸ ಕೂಗು ಶಾಸಕರ "ದೆಹಲಿ ಪರೇಡ್ ನಿಂದ ಈ ಗೊಂದಲ ಮತ್ತಷ್ಟು ಉಲ್ಬಣಗೊಂಡಿದೆ.

### ಕಾರ್ಯತಂತ್ರ ಕುರಿತು ಚರ್ಚೆ

ಈ ಬಿಕ್ಕಟ್ಟು ಬೇಗ ಬಗೆಹರಿದಷ್ಟೂ ರಾಜ್ಯಕ್ಕೆ ಉತ್ತಮ, ಸಿದ್ದರಾಮಯ್ಯ ಪಕ್ಷದ ನಿರ್ಧಾರಕ್ಕೆ ಬದ್ಧರಾಗಿರುತ್ತಾರೆ ಎಂದು ಅವರು ಹೇಳಿದರು, ದಲಿತ ಮುಖ್ಯಮಂತ್ರಿ ಬೇಡಿಕೆಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸಿದರು. ಈ ನಡುವೆ, ಸಂಸದ ಸುನೀಲ್ ಬೋಸ್ ಮನೆಯಲ್ಲಿ ಎಚ್.ಸಿ.ಮಹದೇವಪ್ಪ, ಹರಿಪ್ರಸಾದ್ ಮತ್ತಿತರರು ಭೋಜನಕೂಟದ ನೆಪದಲ್ಲಿ ಕಾರ್ಯತಂತ್ರಗಳ ಕುರಿತು ಚರ್ಚಿಸಿದ್ದಾರೆ.

### ಅಲ್ಪಸಂಖ್ಯಾತರ ಮತ ಕ್ರೋಢೀಕರಿಸುವುದು ಅಗತ್ಯ

ಅಹಿಂದ ಬಣದೊಂದಿಗೆ ಸಂಬಂಧ ಹೊಂದಿರುವ ನಾಯಕರು ಸಾಮಾಜಿಕ ಸಮ್ಮಿಶ್ರ ಚಲನಶೀಲತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ, ಅಲ್ಪಸಂಖ್ಯಾತ ನಾಯಕರನ್ನು ಒಳಗೊಂಡ ಸಾಂಸ್ಥಿಕ ಬದಲಾವಣೆಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ಮತಗಳನ್ನು ಕ್ರೋಢೀಕರಿಸುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ.

## ಟ್ಯಾಂಕರ್, ಕಾರು ನಡುವೆ ಡಿಕ್ಕಿ

**ಕಲಬುರಗಿ:** ಲಾರಿ ಟ್ಯಾಂಕರ್ ಮತ್ತು ಕಾರು ನಡುವೆ ಡಿಕ್ಕಿ ಸಂಭವಿಸಿರುವ ಘಟನೆ ಫರಹತಾಬಾದ ಬಳಿ ನಡೆದಿದೆ.ಅಪಘಾತದಲ್ಲಿ ಕಾರಿನ ಮುಂಭಾಗ ನಜ್ಜುಗುಜ್ಜಾಗಿದ್ದು, ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ. ಅಪಘಾತದಿಂದಾಗಿ ಕೆಲಕಾಲ ವಾಹನ ಸಂಚಾರಕ್ಕೆ ಅಡುಚಣೆಯುಂಟಾಗಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

## ನಾಯಕತ್ವ ಬದಲಾವಣೆ ಗೊಂದಲ ಬೇಡ

• **ಮಲ್ಲಮ್ಮ ನುಡಿ ವಾರ್ತೆ ನವದೆಹಲಿ**

ಕಾಂಗ್ರೆಸ್ ಹಿರಿಯ ನಾಯಕ ಹಾಗೂ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಚಿವ ಕೆ. ಹೆಚ್. ಮುನಿಯಪ್ಪ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸಂಘಟನೆ ಪ್ರಧಾನ ಕಾರ್ಯದರ್ಶಿ ಕೆ. ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿ, ರಾಜ್ಯದಲ್ಲಿ ಸಂಭವನೀಯ ನಾಯಕತ್ವ ಬದಲಾವಣೆಯ ಕುರಿತು ಉಂಟಾಗಿರುವ ಗೊಂದಲವನ್ನು ನಿವಾರಿಸುವಂತೆ ಮನವಿ ಮಾಡಿದ್ದಾರೆ.

ಭೇಟಿಯ ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಮುನಿಯಪ್ಪ, ಪಕ್ಷ ಮತ್ತು ರಾಜ್ಯ ಸರ್ಕಾರದ ಹಿತದೃಷ್ಟಿಯಿಂದ ಈ ವಿಷಯವನ್ನು ಶೀಘ್ರದಲ್ಲೇ ಸ್ಪಷ್ಟಪಡಿಸಲು ಉನ್ನತ ನಾಯಕತ್ವವನ್ನು ವಿನಂತಿಸಿಕೊಂಡಿದ್ದಾಗಿ ಹೇಳಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತಮ ಕೆಲಸ ಮಾಡುತ್ತಿದ್ದಾರೆ, ಆದರೂ ನಾಯಕತ್ವ ಬದಲಾವಣೆಯ ಕುರಿತು ಯಾವುದೇ ನಿರ್ಧಾರ ಪಕ್ಷದ ಉನ್ನತ ನಾಯಕತ್ವದ ಕೈಯಲ್ಲಿದೆ ಎಂದು ಹೇಳಿದರು. ಮುಂದಿನ ತಿಂಗಳಲ್ಲಿ ಕಾಂಗ್ರೆಸ್ ನಾಯಕತ್ವ ಈ ವಿಚಾರದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

## ಖರ್ಗೆ ಮುಖ್ಯಮಂತ್ರಿ ಆದರೆ ಓಕೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಅನುಭವ ಹೊಂದಿರುವ ಎಐಸಿಸಿ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯದ ಮುಖ್ಯಮಂತ್ರಿಯಾದರೆ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಎಲ್ಲರೂ ಸ್ವಾಗತಿಸುತ್ತಾರೆ ಎಂದು ಗೃಹ ಸಚಿವ ಜಿ ಪರಮೇಶ್ವರ ಹೇಳಿದ್ದಾರೆ..

ಮುಖ್ಯಮಂತ್ರಿ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ ಪಕ್ಷದೊಳಗಿನ ಆಂತರಿಕ ರಾಜಕೀಯ ಮತ್ತು ಗೊಂದಲಗಳ ಮಧ್ಯೆ, ರಾಜ್ಯದ ಜನರಿಗೆ ನೀಡಿದ "ಉತ್ತಮ ಆಡಳಿತ"ದ ಭರವಸೆಯನ್ನು ಈಡೇರಿಸುವುದು ಮುಖ್ಯ ಎಂದು ಅವರು ಪ್ರತಿಪಾದಿಸಿದ್ದಾರೆ.

ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಮತ್ತು ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆಗಳ ಜೊತೆಗೆ, ಮೇ 4 ರ ನಂತರ ನಾಯಕತ್ವ ಬದಲಾವಣೆ ಮತ್ತು ಸಚಿವ ಸಂಪುಟ ಪುನರ್ರಚನೆ ಕುರಿತು ಸಂಭಾವ್ಯ ನಿರ್ಧಾರದ ಬಗ್ಗೆ ಪಕ್ಷ ಮತ್ತು ರಾಜಕೀಯ ವಲಯಗಳಲ್ಲಿ ಹರಿದಾಡುತ್ತಿರುವ ಊಹಾಪೋಹಗಳ ನಡುವೆ ಅವರು ಈ ಹೇಳಿಕೆ ನೀಡಿದ್ದಾರೆ.

## ರಾಜ್ಯದೆಲ್ಲೆಡೆ ಬರಗಾಲದ ಸ್ಥಿತಿ..!

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ರಾಜ್ಯದೆಲ್ಲೆಡೆ ಬರಗಾಲದ ಸ್ಥಿತಿ ಕಂಡುಬರುತ್ತಿದೆ, ಆದರೆ ಸಚಿವರು ಅಧಿಕಾರಕ್ಕಾಗಿ ದೆಹಲಿ ಪ್ರವಾಸ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 10 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ.ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಕುಡಿಯುವ ನೀರಿಗೆ ಒಂದು ಪೈಸೆಯನ್ನೂ ಬಿಡುಗಡೆ ಮಾಡಿಲ್ಲ. ತೆಲಂಗಾಣ ಮತ್ತು ಹಿಮಾಚಲ ಪ್ರದೇಶದಲ್ಲಿ ನೌಕರರ ವೇತನವನ್ನು ಕಡಿತಗೊಳಿಸಲಾಗಿದೆ. ಕರ್ನಾಟಕ ಕೂಡ ಅದೇ ದಿಕ್ಕಿನಲ್ಲಿ ಸಾಗುವ ಲಕ್ಷಣಗಳನ್ನು ತೋರಿಸುತ್ತಿದೆ. ಸರ್ಕಾರವು ಕುಡಿಯುವ ನೀರಿಗಾಗಿ ಪ್ರತ್ಯೇಕವಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಬೇಕು ಎಂದಿದ್ದಾರೆ.



### ತಕ್ಷಣವೇ ಜಾನುವಾರುಗಳಿಗೆ ಮೇವು ಬೇಕು

ಈ ಹಣವನ್ನು ಬೋರ್‌ವೆಲ್ಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಟ್ಯಾಂಕರ್ಗಳ ಮೂಲಕ ನೀರು ಸರಬರಾಜು ಮಾಡಲು ಬಳಸಬೇಕು. ಗೋಶಾಲೆಗಳನ್ನು (ಜಾನುವಾರು ಆಶ್ರಯಗಳು) ತಕ್ಷಣವೇ ನಿರ್ಮಿಸಿ ಜಾನುವಾರುಗಳಿಗೆ ಮೇವು ಪೂರೈಸಬೇಕು. ಹವಾಮಾನ ಇಲಾಖೆಯ ವರದಿಯ ಪ್ರಕಾರ, ಈ ವರ್ಷ ಮಳೆಯ ಕೊರತೆ ಇರುತ್ತದೆ. ಸರ್ಕಾರವು ಈ ಕೆಲಸಗಳನ್ನು ಮಾಡಲು ಸಾಧ್ಯವಾಗದಿದ್ದರೆ, ಸಚಿವರು ದೆಹಲಿಯಲ್ಲಿಯೇ ಇರಬೇಕು. ಉಳಿದ ಎರಡು ವರ್ಷಗಳನ್ನು ಅವರು ದೆಹಲಿಯಲ್ಲಿ ಕಳೆದರೆ ರಾಜ್ಯದ ಅಭಿವೃದ್ಧಿ ಅಸಾಧ್ಯ ಎಂದು ಅಶೋಕ ವಿವರಿಸಿದ್ದಾರೆ.

## ಗುರುನಾನಕ್ ಆಸ್ಪತ್ರೆಯಲ್ಲಿ ಬೆಂಕಿ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಬೀದರ್‌ನ ಗುರುನಾನಕ್ ಆಸ್ಪತ್ರೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಹಲವಾರು ರೋಗಿಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯಲ್ಲಿ ಯಾವುದೇ ಸಾವು ನೋವುಗಳು ವರದಿಯಾಗಿಲ್ಲ. ಆಸ್ಪತ್ರೆಯ ಎಲ್ಲಾ ರೋಗಿಗಳು ಮತ್ತು ಸಿಬ್ಬಂದಿ ಸುರಕ್ಷಿತರಾಗಿದ್ದಾರೆ ಎಂದು ಬೀದರ್ ಉಪ ಆಯುಕ್ತೆ ಶಿಲ್ಪಾ ಶರ್ಮಾ ಪಿಟಿಐ ಸುದ್ದಿಸಂಸ್ಥೆಗೆ ಹೇಳಿದ್ದಾರೆ.

ಆಸ್ಪತ್ರೆ ಕಟ್ಟಡದ ಕಚೇರಿ ವಿಭಾಗದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ದಟ್ಟವಾದ ಹೊಗೆ ಹರಡಿತ್ತು. ಪ್ರಾಥಮಿಕ ತನಿಖೆಯನ್ನು ಉಲ್ಲೇಖಿಸಿ, ಶಾರ್ಟ್ ಸರ್ಕ್ಯೂಟ್ ಬೆಂಕಿಗೆ ಕಾರಣ ಎಂದು ಶಂಕಿಸಲಾಗಿದೆ.




### ಸುರಕ್ಷಿತವಾಗಿ ಸ್ಥಳಾಂತರ

ನಿಖರವಾದ ಕಾರಣ ಇನ್ನೂ ತಿಳಿದುಬಂದಿಲ್ಲ. ಎಲ್ಲಾ ರೋಗಿಗಳನ್ನು ಆಂಬ್ಯುಲೆನ್ಸ್ ಮೂಲಕ ಸರ್ಕಾರಿ ಆಸ್ಪತ್ರೆ ಮತ್ತು ಇತರ ಸೌಲಭ್ಯಗಳಿಗೆ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ವಿವರಿಸಿದ್ದಾರೆ.ಬೆಂಕಿಯನ್ನು ನಂದಿಸಲು ಎರಡು ಅಗ್ನಿಶಾಮಕ ದಳಗಳು ಮತ್ತು 20 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯಿಂದ ಭಾರತ ಇಂದು ಸದೃಢವಾಗಿದೆ: ಎಚ್‌ಡಿ ಕುಮಾರಸ್ವಾಮಿ, ಕೇಂದ್ರ ಸಚಿವ**

# ನಾಳೆ ಭಗವಾನ್ ಬುದ್ಧರ ಜಯಂತ್ಯುತ್ಸವ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ, ಬೀದರ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ: 01–05–2026 ರಂದು ಸಾಯಂಕಾಲ 6 ಗಂಟೆಗೆ ಪೂಜ್ಯ ಶ್ರೀ ಡಾ.ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಶ್ರೀ ಭಗವಾನ್ ಬುದ್ದರ ಜಯಂತ್ಯುತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮ ಉದ್ಘಾಟನೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಮಾಡಲಿದ್ದಾರೆ.

ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸದಸ್ಯರಾದ ಸಾಗರ ಈಶ್ವರ ಖಂಡ್ರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷ ಮಾಲಾ ನಾರಾಯಣರಾವ್, ಔರಾದ(ಬಿ) ಶಾಸಕ ಪ್ರಭು ಬಿ.ಚವ್ಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ದು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ್, ಶಶೀಲ ಜಿ.ನಮೋಶಿ, ಭೀಮರಾವ ಪಾಟೀಲ್, ಡಾ.ಎಂ.ಜಿ.ಮೂಳೆ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ (ಕಾಡಾ) ಭೀಮರಾಯನಗುಡಿ ಕಲಬುರಗಿಯ ಅಧ್ಯಕ್ಷ ಬಾಬು ಹೊನ್ನನಾಯ್ಕ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಅವರುಗಳು ಭಾಗವಹಿಸಲಿದ್ದಾರೆ. ಹಾಗೂ ಪೂಜ್ಯ ಭಂತೆ ಭದಂತ ಧಮ್ಮನಾಗ ಮಹಾಥೇರೊ, ಅಧ್ಯಕ್ಷರು, ಶರಣ ಬಹುದೇಶಿಯ ಸೇವಾಭಾವಿ ಸಂಸ್ಥಾ ಹಾಗೂ ಸಂಸ್ಥಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಮೆಮೊರಿಯಲ್ ಪಬ್ಲಿಕ್ ಶಾಲೆ ಹತ್ಯಾಳ ಇವರು ಅತಿಥಿ ಉಪನ್ಯಾಸವನ್ನು ನೀಡಲಿದ್ದಾರೆ.

# ಇಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯನ್ನು ಏಪ್ರಿಲ್ 30 ರಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಅವರು ಸಭೆಯ ಅಧ್ಯಕ್ಷತೆ ವಹಿಸುವರು. ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಕಡ್ಡಾಯವಾಗಿ ಸಭೆಗೆ ಹಾಜರಾಗಬೇಕು. ಸಮಿತಿಯ ಉಪಾಧ್ಯಕ್ಷರು, ಸದಸ್ಯರು ಸಭೆಯಲ್ಲಿ ಪಾಲ್ಗೊಳ್ಳುವಂತೆ ಕೊಪ್ಪಳ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಗೀತಕ್ಕೆ ಮನಸ್ಸು ಅರಳಿಸುವ ಶಕ್ತಿ : ಚನ್ನಶೆಟ್ಟಿ



• ಮಲ್ಲಮ್ಮ ನುಡಿ ವಾರ್ತೆ, ಬೀದರ

ಸಂಗೀತವು ಮಾನವನ ಮನಸ್ಸನ್ನು ಅರಳಿಸುವ ಅಪೂರ್ವ ಶಕ್ತಿ ಹೊಂದಿದೆ ಎಂದು ಅಭಿಪ್ರಾಯಪಟ್ಟರು. ಗಾಯನದಲ್ಲಿ ಸ್ವರ, ತಾಳ ಮತ್ತು ಧ್ವನಿ ಇವುಗಳೆಲ್ಲವೂ ಸಂಗೀತದ ಮೂಲಾಧಾರವಾಗಿದ್ದು, ಅವುಗಳ ಮೇಲೆ ನಿಖರವಾದ ಹಿಡಿತ ಸಾಧಿಸಿದಾಗ ಮಾತ್ರ ಒಬ್ಬ ಕಲಾವಿದ ಶ್ರೇಷ್ಠತೆಯ ಮಟ್ಟಕ್ಕೆ ಏರಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು. ಸಂಗೀತವು ಕೇವಲ ಮನರಂಜನೆ ಮಾತ್ರವಲ್ಲ, ಅದು ವ್ಯಕ್ತಿಯ ಆಂತರಿಕ ಭಾವನೆಗಳನ್ನು ವ್ಯಕ್ತಪಡಿಸುವ ಸಾಂಸ್ಕೃತಿಕ ಮಾಧ್ಯಮವಾಗಿದ್ದು, ನಿರಂತರ ಅಭ್ಯಾಸ ಮತ್ತು ನಿಷ್ಠೆಯಿಂದಲೇ ಕಲಾವಿದನು ತನ್ನ ಪ್ರತಿಭೆಯನ್ನು ಮೆರೆದಿಡಬಹುದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸುರೇಶ ಚನ್ನಶೆಟ್ಟಿ ಅವರು ತಿಳಿಸಿದ್ದಾರೆ.

ಅವರು ಸೋಮವಾರ ನಡೆದ ಶ್ರೀ ರೇವಣ ಸಿದ್ದೇಶ್ವರ ಕಲಾ ಸಾಂಸ್ಕೃತಿಕ ಸೇವಾ ಸಂಘ ಬಾವಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ತಾಲೂಕು ಮಟ್ಟದ ಸಂಗೀತೋತ್ಸವ ಕಾರ್ಯಕ್ರಮ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಬೀದರ್ ತಾಲ್ಲೂಕಿನ ಶಮಶೀರನಗರದ ಶ್ರೀ ಸಿಂದಗೇರಿ ನಂದಿ ಬಸವಣ್ಣ ದೇವಾಲಯದ ಆವರಣದಲ್ಲಿ ಏರ್ಪಡಿಸಿದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಪರಮ ಪೂಜ್ಯ ಶ್ರೀ ಭದ್ರೇಶ್ವರ ಸಂಸ್ಥಾನದ ಶ್ರೀ ಭದ್ರಯ್ಯ ಸ್ವಾಮೀಜಿ ಅವರು ಜಾನಪದ ಗೀತೆಗಳು ಜನಮನಕ್ಕೆ ಹತ್ತಿರವಾಗಿದ್ದು, ಮನಸ್ಸಿಗೆ ಶಾಂತಿ ಮತ್ತು ಹಿತವನ್ನು ನೀಡುವ ಶಕ್ತಿಯನ್ನು ಹೊಂದಿವೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹಾಗೂ ವಿವಿಧ ಸಂಘ ಸಂಸ್ಥೆಗಳು ಜಾನಪದ ಸಂಗೀತವನ್ನು ಗ್ರಾಮೀಣ ಮಟ್ಟದಲ್ಲಿ ಪ್ರಸಾರ ಮಾಡುವ ಕಾರ್ಯವನ್ನು ಕೈಗೊಂಡಿರುವುದು ಸಂತೋಷಕರ ಸಂಗತಿಯಾಗಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ರೇವಣ ಸಿದ್ದೇಶ್ವರ ಕಲಾ ಸಾಂಸ್ಕೃತಿಕ ಸೇವಾ ಸಂಘ ಬಾವಗಿಯ ಅಧ್ಯಕ್ಷರಾದ ಶಾಂತಕುಮಾರ್ ಸ್ವಾಮಿ ಅವರು ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸುವಲ್ಲಿ ಜಾನಪದ ಸಂಗೀತದ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಯುವ ಪೀಳಿಗೆ ಅದನ್ನು ಅಳವಡಿಸಿಕೊಂಡು ಮುಂದಿನ ಪೀಳಿಗೆಗಳಿಗೆ ಸಾಗಿಸುವ ಜವಾಬ್ದಾರಿ ಹೊತ್ತುಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಕನ್ನಡ ಸೇನೆ ಜಿಲ್ಲಾ ಅಧ್ಯಕ್ಷರಾದ ಸುಭಾಷ್ ಕೆನಾಡೆ, ನಾಗಯ್ಯ ಸ್ವಾಮಿ, ಸಂಗಮೇಶ ಹಜರಗಿ, ಚನಮಲಯ್ಯ ಸ್ವಾಮಿ, ವೀರಶೆಟೀ ಪಾಟಿಲ್, ಶಿವರಾಜ್ ಪಾಟೀಲ್, ಸೋಮನಾಥ್ ಮೈಲುರ, ಓಂಕಾರ ಉಪ್ಪೆ, ದೊಳಪ್ಪ ತೊರಣ, ಭಿಮಶೆಟ್ಟೀ ಹೂಗಾರ, ಸಿದ್ದಾರೋಡ ಭಾಲ್ಕೆ, ಇತರರು ವೇದಿಕೆ ಮೇಲಿದ್ದರು.

ಈ ಸಂಗೀತೋತ್ಸವದಲ್ಲಿ ಭಾಗವಹಿಸಿದ ಕಲಾವಿದರಾದ ಅಶ್ವಿನಿ ಆರ್ ಬಂಪಳ್ಳಿ, ಮಲ್ಲಿಕಾರ್ಜುನ ಸ್ವಾಮಿ, ನಾಗಯ್ಯ ಮರಪಳ್ಳಿ, ಮಲ್ಲಿಕಾರ್ಜುನ ನಾಗಮಾರಪಳ್ಳಿ, ಪವನ್ ಸ್ವಾಮಿ, ವಿಶ್ವನಾಥ್ ಸ್ವಾಮಿ, ಸಂಜುಕುಮಾರ್ ಖಾಸಂಪುರ, ಶಿವಲಿಲಾ ಎಸ್ ಸ್ವಾಮಿ, ಮಾನಂದಯ್ಯ ಸ್ವಾಮಿ, ಅಶ್ವಿನಿ ಬಿ ಸ್ವಾಮಿ, ನಾಗರಾಜ್ ಬುಳ್ಳಾ ಮುಂತಾದವರು ಭಾಗವಹಿಸಿ ತಮ್ಮ ಜಾನಪದ ಸಂಗೀತ, ಕಾರ್ಯಕ್ರಮ ನಡೆಸಿಕೊಟ್ಟರು.

ಪ್ರಾರಂಭದಲ್ಲಿ ಕಾರ್ಯಕ್ರಮವು ಯೊಗೆಂದ್ರ ಯದಲಾಪುರೆ, ನಿರೂಪಿಸಿ ವಂದಿಸಿದರು, ಅದೇ ಸಂದರ್ಭದಲ್ಲಿ ಕಲಾವಿದರು ಗ್ರಾಮಸ್ಥರು ಮಹಿಳೆಯರು, ಮಕ್ಕಳು ಅನೇಕರು ಉಪಸ್ಥಿತರಿದ್ದರು.

# ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ರಾಜಕಾರಣಕ್ಕೆ ಬರುವವರು ಬಡವರ ಸೇವೆಗಾಗಿ ಬರಬೇಕು

ರಾಜಕಾರಣವು ಅಧಿಕಾರ, ಹುದ್ದೆ ಮತ್ತು ವೈಭವಕ್ಕಾಗಿ ಅಲ್ಲ; ಅದು ಜನಸೇವೆಗಾಗಿ ಇರುವ ಪವಿತ್ರ ಕ್ಷೇತ್ರವಾಗಿದೆ. ವಿಶೇಷವಾಗಿ ಬಡವರು, ರೈತರು, ಕಾರ್ಮಿಕರು, ಹಿಂದುಳಿದ ವರ್ಗದವರು ಹಾಗೂ ಸಾಮಾನ್ಯ ಜನರ ಬದುಕನ್ನು ಸುಧಾರಿಸುವ ಉದ್ದೇಶದಿಂದ ರಾಜಕಾರಣಕ್ಕೆ ಬರಬೇಕು. ಆದರೆ ಇಂದಿನ ದಿನಗಳಲ್ಲಿ ಕೆಲವರು ಸ್ವಾರ್ಥ, ಹಣ ಮತ್ತು ಪ್ರಭಾವಕ್ಕಾಗಿ ರಾಜಕೀಯ ಪ್ರವೇಶಿಸುತ್ತಿರುವುದು ವಿಷಾದನೀಯ.

ಬಡವರ ಸಂಕಷ್ಟವನ್ನು ಅರಿತು, ಅವರ ಸಮಸ್ಯೆಗಳಿಗೆ ಸ್ಪಂದಿಸುವ ಮನಸ್ಸು ರಾಜಕಾರಣಿಗಳಿಗೆ ಅಗತ್ಯ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು, ರಸ್ತೆ, ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದಂತಹ ಮೂಲಭೂತ ಸೌಲಭ್ಯಗಳ ಕೊರತೆ ಇನ್ನೂ ಕಂಡುಬರುತ್ತಿದೆ. ಇವುಗಳನ್ನು ಪರಿಹರಿಸುವುದು ಜನಪ್ರತಿನಿಧಿಗಳ ಮೊದಲ ಕರ್ತವ್ಯವಾಗಬೇಕು.

ರಾಜಕಾರಣಕ್ಕೆ ಬರುವವರು ಜನರ ವಿಶ್ವಾಸವನ್ನು ಗಳಿಸಬೇಕು. ಚುನಾವಣೆಯ ಸಮಯದಲ್ಲಿ ಮಾತ್ರ ಜನರ ಮನೆಬಾಗಿಲಿಗೆ ಬಂದು, ನಂತರ ಅವರನ್ನು ಮರೆತರೆ ಅದು ನಿಜವಾದ ನಾಯಕತ್ವವಲ್ಲ. ಬಡವರ ನೋವು, ರೈತರ ಕಷ್ಟ, ಯುವಕರ ನಿರುದ್ಯೋಗ ಇವೆಲ್ಲವನ್ನೂ ತಮ್ಮ ಸಮಸ್ಯೆಯಂತೆ ಕಂಡು ಪರಿಹಾರ ಕಂಡುಕೊಳ್ಳುವವರು ಮಾತ್ರ ನಿಜವಾದ ನಾಯಕರು. ಮಹಾತ್ಮ ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್, ಬಸವಣ್ಣರಂತಹ ಮಹನೀಯರು ಸಮಾಜದ ಒಳಿತಿಗಾಗಿ ಬದುಕಿದರು. ಅವರ ಆದರ್ಶಗಳನ್ನು ಅನುಸರಿಸುವ ರಾಜಕಾರಣಿಗಳು ಇಂದು ಅಗತ್ಯವಿದ್ದಾರೆ. ಸೇವಾ ಮನೋಭಾವ, ಪ್ರಾಮಾಣಿಕತೆ ಮತ್ತು ಜನಪರ ಚಿಂತನೆ ಇದ್ದಾಗ ಮಾತ್ರ ರಾಜಕೀಯಕ್ಕೆ ಗೌರವ ಸಿಗುತ್ತದೆ. ಹೀಗಾಗಿ ರಾಜಕಾರಣಕ್ಕೆ ಬರುವವರು ಬಡವರ ಸೇವೆಗಾಗಿ ಬರಬೇಕು. ಅಧಿಕಾರಕ್ಕಾಗಿ ಅಲ್ಲ, ಸಮಾಜದ ಒಳಿತಿಗಾಗಿ ಕೆಲಸ ಮಾಡಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಜನಸೇವೆ ಎಂಬ ಧ್ಯೇಯವೇ ರಾಜಕೀಯದ ನಿಜವಾದ ಅರ್ಥವಾಗಬೇಕು.

# ಸೇವಾ ನಿವೃತ್ತ ಯೋಧ ಹೊಂಡಾಳೆ ಅವರಿಗೆ ಅಭಿನಂದನಾ ಸಮಾರಂಭ

• ಮಲ್ಲಮ್ಮ ನುಡಿ ವಾರ್ತೆ, ಕಮಲನಗರ




ದೇಶದ ಗಡಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ತಾಲೂಕಿನ ಡೋಣಗಾಂವ (ಎಂ) ಗ್ರಾಮದ ಯೋಧ ಶ್ರೀ ಮಲ್ಲಿಕಾರ್ಜುನ ವೈಜಿನಾಥ ಹೊಂಡಾಳೆ ಅವರಿಗೆ ಗ್ರಾಮಸ್ಥರು ಮತ್ತು ಹೊಂಡಾಳೆ ಪರಿವಾರದ ವತಿಯಿಂದ ಅದ್ದೂರಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಸದರಿ ಕಾರ್ಯಕ್ರಮ ಶನಿವಾರ ಸಂಜೆ 6:00 ಗಂಟೆಗೆ ಗ್ರಾಮದ ಹನುಮಾನ ದೇವಾಲಯದ ಪಿ.ಕೆ.ಪಿ.ಎಸ್ ಆವರಣದಲ್ಲಿ ನಡೆಯಲಿದೆ, ದಿವ್ಯ ಸಾನ್ನಿಧ್ಯವನ್ನು ಡೋಣಗಾಂವ ಹಾವಗಿಸ್ವಾಮಿ ಮಠದ ಶ್ರೀ 108 ಪ.ಪೂ. ಡಾ. ಶಂಭುಲಿಂಗ ಶಿವಾಚಾರ್ಯರು ವಹಿಸಲಿದ್ದಾರೆ. ಹಾವಗಿಲಿಂಗೇಶ್ವರ ಶಿವಾಚಾರ್ಯರು ಕಾರ್ಯಕ್ರಮದ ಘನ ನೇತೃತ್ವ ವಹಿಸಲಿದ್ದಾರೆ.

ಕಾರ್ಯಕ್ರಮವನ್ನು ಮಾಜಿ ಸಚಿವರು ಹಾಗೂ ಶಾಸಕ ಪ್ರಭು ಬಿ. ಚವ್ಹಾಣ ಉದ್ಘಾಟಿಸಲಿದ್ದು, ಮಾಜಿ ಸಂಸದ ನರಸಿಂಗರಾವ್ ಸೂರ್ಯವಂಶಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವ ಸಂಜಯ ಬನಸೋಡೆ, ತಹಶೀಲ್ದಾರ್ ಅಮಿತ ಕುಲಕರ್ಣಿ, ಇಒ ಹನುಮಂತರಾಯ ಕೌಟಗೆ, ಎಡಿ ಶಿವಕುಮಾರ್ ಘಾಟೆ, ಡಾ. ಮಾಧವರಾವ್ ಬಿ. ಹೊಂಡಾಳೆ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಗ್ರಾಮದ ಹೆಮ್ಮೆಯ ಪುತ್ರನಿಗೆ ಗೌರವ ಸಲ್ಲಿಸುವ ಈ ಸಮಾರಂಭಕ್ಕೆ ತಾಲೂಕಿನ ಸಾರ್ವಜನಿಕರು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಹೊಂಡಾಲೆ ಪರಿವಾರ ಹಾಗೂ ಡೋಣಗಾಂವ ಗ್ರಾಮಸ್ಥರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

> ತನ್ನ ಬದುಕಿನ ಶ್ರೇಷ್ಠ ಸಮಯವನ್ನು ದೇಶಸೇವೆಗಾಗಿ ಮುಡುಪಾಗಿಟ್ಟು ನಿವೃತ್ತರಾದ ಯೋಧನನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ಈ ನಿಟ್ಟಿನಲ್ಲಿ ಇಡೀ ಗ್ರಾಮವೇ ಒಂದಾಗಿ ಈ ಸಮಾರಂಭ ಆಯೋಜಿಸಿದೆ
>
> **ಶಾಲಿವಾನ ಗಂದಗೆ, ಗ್ರಾಮದ ಹಿರಿಯರು, ಡೋಣಗಾಂವ (ಎಮ್)**

# ತ್ಯಾಗಮೂರ್ತಿ ಪರಮಪೂಜ್ಯ ಬಸವಲಿಂಗ ಪಟ್ಟದ್ದೇವರು




• ಮಲ್ಲಮ್ಮ ನುಡಿ ವಾರ್ತೆ. ಭಾಲ್ಕಿ

ಅಕ್ಷರದ ಸಂತ, ಮಾತೃ ಹೃದಯಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಜೀವನ ಮತ್ತು ಸಾಧನೆ ಪ್ರತಿಯೊಬ್ಬರಿಗೂ ಮಾದರಿಯಾಗಿದೆ.

ಸಾರ್ಥಕ 75 ವಸಂತಗಳನ್ನು ಪೂರೈಸಿದ ಪರಮ ಪೂಜ್ಯರ ಅಮೃತ ಮಹೋತ್ಸವ ಪಟ್ಟಣದಲ್ಲಿ ಅಸಂಖ್ಯಾತ ಭಕ್ತರ ಮಧ್ಯೆ ಈಚೆಗೆ ಶ್ರದ್ಧೆ, ಭಕ್ತಿಯಿಂದ ನೆರವೇರಿತು.

ಈ ಸಂದರ್ಭದಲ್ಲಿ ಪರಮ ಪೂಜ್ಯರ ಕುರಿತು ಹತ್ತಾರು ಗ್ರಂಥಗಳು ಲೋಕಾರ್ಪಣೆಗೊಂಡವು. ಅದರಲ್ಲಿ ತ್ಯಾಗಮೂರ್ತಿ ಪರಮಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರು ಕವನ ಸಂಕಲನ ಕೂಡ ಬಿಡುಗೊಂಡಿದ್ದು ವಿಶೇಷ. ಕರಡ್ಯಾಳ ಚನ್ನಬಸವೇಶ್ವರ ಗುರುಕುಲದಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಹೇಶ್ ಬನ್ನಾಳೆ ಸಂಪಾದಕತ್ವದಲ್ಲಿ ಹೊರ ತಂದಿರುವ ಕವನ ಸಂಕಲನ ಓದುಗರ ಗಮನ ಸೆಳೆದಿದೆ.

ಬಸವಧರ್ಮ ಪ್ರಸಾರ ಸಂಸ್ಥೆ ಹಿರೇಮಠ ಸಂಸ್ಥಾನ ಭಾಲ್ಕಿ ಪ್ರಕಾಶನದಿಂದ ಪ್ರಕಟಗೊಂಡಿರುವ ಈ ಕವನ ಸಂಕಲನಕ್ಕೆ 66 ಯುವ ಬರಹಗಾರರು ಪರಮ ಪೂಜ್ಯರ ಕುರಿತು ಕವನಗಳನ್ನು ಬರೆದಿದ್ದಾರೆ.

ಅದರಲ್ಲಿ ಪರಮ ಪೂಜ್ಯರು ಕಟ್ಟಿದ ವಿದ್ಯಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರು, ಸಿಬ್ಬಂದಿಗಳು ಸೇರಿ ಕವನ ರಚಿಸಿರುವುದು ಮತ್ತೊಂದು ವಿಶೇಷ.

> ಈ ಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಸಾಮಾಜಿಕವಾಗಿ ಅದ್ಭುತವಾಗಿ ಸೇವೆಗೈಯುತ್ತಿದ್ದಾರೆ. ಕವನ ಸಂಕಲನದ ಮೂಲಕ ಪರಮ ಪೂಜ್ಯರ ಸಾಧನೆಯನ್ನು ಪರಿಚಯಿಸುವ ಒಂದು ವಿಭಿನ್ನ ಪ್ರಯತ್ನ ಮಾಡಲಾಗಿದೆ.
>
> **ಮಹೇಶ್ ಬನ್ನಾಳೆ ಯುವ ಸಾಹಿತಿಗಳು ಕೋನಮೇಳಕುಂದಾ.**

ಡಾ.ಬಸವಲಿಂಗ ಪಟ್ಟದ್ದೇವರ ಸಾನ್ನಿಧ್ಯದಲ್ಲಿ ಹಿರಿಯ ಸಾಹಿತಿ ಗೋ.ರು.ಚನ್ನಬಸಪ್ಪ ಅವರು ತ್ಯಾಗಮೂರ್ತಿ ಪರಮಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರು ಕವನ ಸಂಕಲನ ಬಿಡುಗಡೆಗೊಳಿಸಿದರು.

ಈ ಗ್ರಂಥಕ್ಕೆ ಗುರುಬಸವ ಪಟ್ಟದ್ದೇವರು, ರಾಜ್ಯ ಮಕ್ಕಳ ರಕ್ಷಣಾ ಆಯೋಗದ ನಿಕಟಪೂರ್ವ ಅಧ್ಯಕ್ಷ ಶಶಿಧರ ಕೋಸಂಬೆ, ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯ ಬಸವರಾಜ ಮೊಳಕೀರೆ ಸಂದೇಶ ನೀಡಿದ್ದು, ಹಿರಿಯ ಸಾಹಿತಿ ವೀರಶೆಟ್ಟಿ ಬಾವುಗೆ ಅವರು ಮುನ್ನುಡಿ ಮತ್ತು ಹಿರಿಯ ಸಾಹಿತಿ ಗಣಪತಿ ಬಾವುಗೆ ಬೆನ್ನುಡಿ ಬರೆದಿದ್ದಾರೆ.

ಕುಸುಮಕುಮಾರಿ ಮೋಹನ ರೆಡ್ಡಿ, ಸುರೇಖಾ ಗಣಪತಿ ಮಾವಿನ ಹಳ್ಳಿ ಮತ್ತು ಅನ್ನಪೂರ್ಣ ಶರಣಗೌಡ ಬಿರಾದಾರ್ ಗ್ರಂಥ ದಾಸೋಹಿಗಳಾಗಿದ್ದಾರೆ.

## ಶರಣನಗರ ಜಾತ್ರಾ ಮಹೋತ್ಸವ

# ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

## ಆರೋಗ್ಯ ತಪಾಸಣೆ ಶಿಬಿರ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ತಾಲ್ಲೂಕಿನ ಮುಡಬಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಶರಣಗರ ಗ್ರಾಮದ ಶ್ರೀ ರಾಚೋಟೇಶ್ವರ ಜಾತ್ರಾ ಮಹೋತ್ಸವ ದಿನಾಂಕ–1– ರಿಂದ 2 ದಿವಸಗಳ ಕಾಲ ಅತಿ ವಿಜೃಂಭಣೆಯಿಂದ ಜರುಗಲಿದೆ, ಜಾತ್ರಾ ಮಹೋತ್ಸವ ಅಂಗವಾಗಿ ದಿನಾಂಕ–1 ರಂದು ಬೆಳಗ್ಗೆ–9ಗಂಟೆಗೆ ಶ್ರೀ ರಾಚೋಟೇಶ್ವರ ಉದ್ಭವ ಮೂರ್ತಿಯ ಎಣ್ಣೆ ಹಚ್ಚುವ ಕಾರ್ಯಕ್ರಮ ಸಂಗೀತ, ರುದ್ರಾಭಿಷೇಕ, ಮಹಾ ಮಂಗಳಾರತಿ ಅಗ್ನಿ ಪೂಜೆ, 101 ಮುತ್ತೈದೆಯರ ಉಡಿ ತುಂಬುವವುದು, ಸಾಯಂಕಾಲ–2..30 ಗಂಟೆಗೆ ಧರ್ಮ ಸಭೆ ಕಾರ್ಯಕ್ರಮ ಜರುಗಲಿವೆ.

ದಿನಾಂಕ–2 ರಂದು ಬೆಳಗ್ಗೆ–5 ಗಂಟೆಗೆ ಶ್ರೀ ರಾಚೋಟೇಶ್ವರ ಉದ್ಭವ ಮೂರ್ತಿಯ ರುದ್ರಾಭೀಷೇಕ ಸಂಗೀತ, ಮಧ್ಯಾಹ್ನ– 1 ಗಂಟೆಗೆ ಮಹಪ್ರಸಾದ ಸಾಯಂಕಾಲ 5 ಗಂಟೆಗೆ ಸನ್ಮಾನ ಸಮಾರಂಭ ಹಾಗೂ 5.20 ಕ್ಕೆ ಪಲ್ಲಕ್ಕಿ ಉತ್ಸವ, ಪುರವಂತರ ಸೇವೆ, ಮದ್ದು ಸುಡುವುದು ಹಾಗೂ ಸಾಂಸ್ಕೃತಿ ಕಾರ್ಯಕ್ರಮ ನಡೆಯಲಿವೆ.

ಜಾತ್ರಾ ಮಹೋತ್ಸವ ಅಂಗವಾಗಿ ದೇವಸ್ಥಾನದ ಹತ್ತಿರ ಉಚಿತ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲಾಗಿದೆ ಮತ್ತು ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಸಾರ್ವಜನಿಕರು ಮತ್ತು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜಾತ್ರಾ ಮಹೋತ್ಸವ ಮತ್ತು ಆರೋಗ್ಯ ತಪಾಸಣೆ ಶಿಬಿರವನ್ನು ಯಶಸ್ವಿಗೊಳಿಸಬೇಕು ಎಂದು ಶ್ರೀ ರಾಚೋಟೇಶ್ವರ ದೇವಸ್ಥಾನ ಪಂಚ ಕಮಿಟಿ ಹಾಗೂ ಸಮಸ್ತ ಸದ್ಭಕ್ತ ಮಂಡಳಿ ತಿಳಿಸಿದೆ.

# ವಿಶ್ವ ಜಲ ದಿನ ಕಾರ್ಯಕ್ರಮ




• ಮಲ್ಲಮ್ಮ ನುಡಿ ವಾರ್ತೆ, ಬೀದರ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಬೀದರ ವಾಟರ್ ಫಾರ್ ವಾಯ್ಸಲೆಸ್ಸ್ ಎ[illegible]ಜಿಓ ರವರ ಸಂಯುಕ್ತಾಶ್ರಯದಲ್ಲಿ ಬುಧುವಾರ ವಾಟರ್ ಫಾರ್ ವಾಯ್ಸಲೆಸ್ಸ್ ಕುರಿತು ವಿಶ್ವ ಜಲ ದಿನ ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿ ನಡೆಸಲಾಯಿತು.

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರ ಎಸ್.ಬಿ.ರಹಮಾನ ರವರು ಸಸಿಗೆ ನೀರು ಎರೆವುದರ ಮೂಲಕ ಉದ್ಘಾಟಿಸಿ ನೀರಿನ ಮಹತ್ವ ಕುರಿತು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೋಡೆ ಅವರು ನೀರು ಜನರಿಗೆ ಪ್ರಾಣಿಪಕ್ಷಿಗಳಿಗೆ ಎಷ್ಟು ಮುಖ್ಯ ಎಂದು ತಿಳಿಸಿದರು.

ಅತಿಥಿ ಉಪನ್ಯಾಸಕರಾಗಿ ಸುಪ್ರಿಯಾ ಎಚ್.ಬಿ., ವೇಣುಗೊಪಾಲ ರೆಡ್ಡಿ, ಚಂದ್ರಕಲಾ ರವರು ವಾಟರ್ ಫಾರ್ ವಾಯ್ಸಲೆಸ್ಸ್ ಎ[illegible]ಜಿಓ ಕಡೆಯಿಂದ ಪ್ರಾಣಿ ಪಕ್ಷಿಗಳಿಗೆ ನೀರಿನ ಮಹತ್ವ ಎಷ್ಟಿದೆ ನೀರು ಇಲ್ಲದಿರುವುದರಿಂದ ಇಲ್ಲಿವರೆಗೆ ಎಷ್ಟು ಪ್ರಾಣಿಪಕ್ಷಿಗಳ ಸಾವು ಸಂಭವಿಸುತ್ತಿವೆ ಎಂದು ತಿಳಿಸಿದ್ದರು, ಎಲ್ಲರು ತಮ್ಮ ಮನೆಯ ಅಂಗಳಗಳಲ್ಲಿ ನೀರನ್ನು ತುಂಬಿಟ್ಟು ಪ್ರಾಣಿ ಪಕ್ಷಿಗಳಿಗೆ ಆಸರೆಯಾಗಲು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಸನ್ಮುಖಯ್ಯಾ ಬಿ .ಸ್ವಾಮಿ, ಜಿಲ್ಲಾ ನ್ಯಾಯಾಂಗ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಎಲ್ಲಾ ಸಿಬ್ಬಂದಿ ವರ್ಗದವರು ಸೇರಿದಂತೆ ಇತರರು ಹಾಜರಿದ್ದರು.

# ವಿದ್ಯಾರ್ಥಿಗಳ ಸಾಧನೆಗೆ ರಘೋಜಿ ಹರ್ಷ



• ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ

2025–26ನೇ ಸಾಲಿನ ಕನ್ನಿಕಾ ಪರಮೇಶ್ವರಿ ಶಿಕ್ಷಣ ಸಂಸ್ಥೇಯ ಅಡಿಯಲ್ಲಿ ನಡೆಯುತ್ತಿರುವ ನಗರೇಶ್ವರ ಪ್ರೌಢ ಶಾಲೆಯ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಫಲಿತಾಂಶ ತಂದು ತಾಲ್ಲೂಕಿಗೆ ಹಾಗೂ ಶಾಲೆಗೆ ಕೀರ್ತಿ ತಂದಿದ್ದಾರೆ.

ಒಟ್ಟು ವಿದ್ಯಾರ್ಥಿಗಳು 32 ಉತ್ತೀರ್ಣರಾದ ವಿದ್ಯಾರ್ಥಿಗಳು 28 ಎ.ಶ್ರೇಣಿ 07, ಬಿ.ಪ್ಲಸ್ ಶ್ರೇಣಿ 07, ಬಿ.ಶ್ರೇಣಿ 04, ಸಿ ಪ್ಲಸ್ ಶ್ರೇಣಿ 10 ಈ ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ನಾಗರಾಜ ರಘೋಜಿ, ಉಪಾಧ್ಯಕ್ಷರಾದ ದತ್ತಕುಮಾರ ಆರ್.ಚಿದ್ರಿ, ಕಾರ್ಯದರ್ಶಿಗಳಾದ ಬಾಲಚಂದ್ರ ಆರ್.ಜಾಜಿ, ಸಹ ಕಾರ್ಯದರ್ಶಿಗಳಾದ ಲಕ್ಷ್ಮಣ ವ್ಹಿ.ಹಣಕುಣಿ, ಖಾಜಾಂಚಿಯಾದ ಜಯಪಾಲ ಜಿ.ಗುಪ್ತಾ ಹಾಗೂ ಆಡಳಿತ ಮಂಡಳಿಯವರು ಹಾಗೂ ಶಾಲೆಯ ಮುಖ್ಯಗುರುಗಳು, ಶಿಕ್ಷಕಿಯರು ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.




ಬಸವಕಲ್ಯಾಣ: ಭಾಲ್ಕಿಯಲ್ಲಿ ಚನ್ನಬಸವ ಆಶ್ರಮ ದಲ್ಲಿ ನಡೆದ ಬಸವಲಿಂಗ ಪಟ್ಟದೇವರ ಅಮೃತ ಮಹೋತ್ಸವ ದ ಸಮಾರೋಪ ಸಮಾರಂಭದಲ್ಲಿ ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದೇವರನ್ನು ಸತ್ಕರಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಗೋಕರ್ಣದ ಪ್ರವಾಸಿ ತಾಣದ ರಸ್ತೆಯಲ್ಲಿ ಕಂಡುಬಂದ ಚಿರತೆ ಪ್ರತ್ಯಕ್ಷ, ಆತಂಕದಲ್ಲಿ ಪ್ರವಾಸಿಗರು



**ಗೋಕರ್ಣ** :ಬೇಸಿಗೆ ರಜೆ ಆರಂಭಗೊಂಡಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಗೋಕರ್ಣಕ್ಕೆ ಆಗಮಿಸುತ್ತಿದ್ದಾರೆ. ಆದರೆ ಓಂ ಬೀಚಿಗೆ ತೆರಳುವ ಸ್ಥಳದಲ್ಲಿ ಚಿರತೆಯೊಂದು ಕಾಣಿಸಿಕೊಂಡಿದ್ದು ಇದರಿಂದಾಗಿ ಪ್ರವಾಸಿಗರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಕೆಲ ತಿಂಗಳ ಹಿಂದೆ ಹಿರೇಗುತ್ತಿಯಲ್ಲಿ ಚಿರತೆಯೊಂದು ಕಾಣಿಸಿಕೊಂಡಿದ್ದರಿಂದಾಗಿ ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಯಿತು. ಆದರೆ ಈಗ ಪ್ರವಾಸಿ ತಾಣದಲ್ಲಿ ಚಿರತೆ ಕಾಣಿಸಿಕೊಂಡಿದ್ದರಿಂದ ಸಹಜವಾಗಿಯೇ ಪ್ರವಾಸಿಗರಲ್ಲಿ ಆತಂಕಕ್ಕೆ ಕಾರಣವಾಗಿದೆ. ಪ್ರವಾಸಿಗರು ಚಾರಣವನ್ನು ಮಾಡುತ್ತಿದ್ದರು. ಕತ್ತಲೆಯಾಗುವವರೆಗೂ ಕಾಡು ಮೇಡುಗಳಲ್ಲಿ ಅಲೆದಾಡುತ್ತಿದ್ದರು. ಆದರೆ ಸಂಜೆಯ ಸಮಯದಲ್ಲಿಯೇ ರಸ್ತೆಯಲ್ಲಿಯೇ ಕಾಣಿಸಿಕೊಂಡಿದ್ದರಿಂದಾಗಿ ಚಾರಣ ಪ್ರೀಯರಿಗೆ ಈಗ ಶಾಕ್ ನೀಡಿದಂತಾಗಿದೆ. ಮೇ ತಿಂಗಳು ಗೋಕರ್ಣದ ಎಲ್ಲೆಡೆಯು ಪ್ರವಾಸಿಗರು ಕಂಡು ಬರುತ್ತಾರೆ. ಶಾಲೆ ಕಾಲೇಜುಗಳಲ್ಲಿ ರಜೆ ಇರುವುದರಿಂದಾಗಿ ಸಹಜವಾಗಿಯೇ ಅವರು ಪ್ರವಾಸಿ ತಾಣಗಳಿಗೆ ಭೇಟಿ ನೀಡುತ್ತಾರೆ. ಅದರಲ್ಲಿ ಗೋಕರ್ಣವೂ ಕೂಡ ಪ್ರಮುಖವಾದದ್ದು. ಹೀಗಾಗಿ ಗೋಕರ್ಣದಲ್ಲಿ ಈಗ ಪ್ರವಾಸೋಧ್ಯಮ ಮತ್ತೆ ಗರಿಗೆದರಿದೆ. ಆದರೆ ಇಲ್ಲಿಯ ಬಹುತೇಕ ಸುಂದರ ಬೀಚ್‌ಗಳನ್ನು ನೋಡಬೇಕೆಂದರೆ ಕಾಡು ರಸ್ತೆಯಲ್ಲಿ ಸಂಚರಿಸಬೇಕಾಗಿದೆ. ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಾಡಿಗೆಯ ದ್ವಿಚಕ್ರ ವಾಹನವನ್ನು ಪ್ರವಾಸಿಗರು ಬಾಡಿಗೆಗೆ ಪಡೆಯುತ್ತಾರೆ. ಹೀಗಾಗಿ ಬೈಕ್‌ನಲ್ಲಿ ಸಂಚರಿಸುವುದರಿಂದ ಸಹಜವಾಗಿ ಎಲ್ಲಿ ಚಿರತೆ ಎದುರಾಗಲಿದೆಯೋ ಎಂಬ ಭಯ ಸಹಜವಾಗಿಯೇ ಕಾಡತೊಡಗಿದೆ. ಹೀಗಾಗಿ ಅರಣ್ಯ ಇಲಾಖೆಯವರು ಚಿರತೆಯನ್ನು ಸೆರೆ ಹಿಡಿಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಸ್ಥಳಿಯರು ಆಗ್ರಹಿಸಿದ್ದಾರೆ.

# ಕುರಿಗಾಹಿಗಾರರಿಗೆ ಪರಿಹಾರ ಮಂಜೂರು



• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್

ತಾಲೂಕಿನ ಬೂದುರು ಗ್ರಾಮಗಳಲ್ಲಿ ಸಿಡಿಲು ಬಡಿದು 66 ಕುರಿಗಳ ಸಾವು ಸಂಭವಿಸಿದ ಹಿನ್ನೆಲೆಯಲ್ಲಿ ಶಾಸಕ ಶರಣಗೌಡ ಕಂದಕೂರು ಭೇಟಿ ನೀಡಿ ಸಾಂತ್ವನ ಹೇಳಿದರು.

ಏಪ್ರಿಲ್ 27, 2026 ರಂದು ಸಂಜೆ ಗುಡುಗು ಸಿಡಿಲು ಸಹಿತ ಮಳೆಯ ವೇಳೆ ಈ ದುರ್ಘಟನೆ ಸಂಭವಿಸಿದ್ದು, ಹಲವು ಕುರಿಗಳು ಮೃತಪಟ್ಟಿದ್ದವು.

ಸರಕಾರ ಆದೇಶದ ಪ್ರಕಾರ, ತಾಲೂಕಿನ ನಾಲ್ವರು ಕುರಿಗಾಹಿಗಳಿಗೆ ಪರಿಹಾರ ಮಂಜೂರು ಮಾಡಲಾಗಿದೆ, ಒಟ್ಟು 66 ಕುರಿಗಳ ಸಾವಿಗೆ ಪರಿಹಾರ ನೇರವಾಗಿ ಬ್ಯಾಂಕ್ ಖಾತೆಗೆ ವರ್ಗಾಯಿಸುವದಾಗಿ ತಿಳಿಸಿದರು.

ಸಂಬಂಧಿತ ಕುರಿಗಾಹಿಗಳ ವಿವರ ಹೀಗಿದೆ:ಶ್ರೀ ಅಯ್ಯಪ್ಪ ತಂದೆ ಅಶೋಕ 22 ಕುರಿಗಳು 88,000.ಸಾಬಣ್ಣ ತಂದೆ ಮಲ್ಲಪ್ಪ 14 ಕುರಿಗಳು 56,000.

ಬಸಣ್ಣ ತಂದೆ ದೇವರಾಜ 16 ಕುರಿಗಳು 64,000.

ನಾಗಣ್ಣ ತಂದೆ ಹನಮಂತ 14 ಕುರಿಗಳು 56,000.

ಒಟ್ಟಾರೆ ಮೃತಪಟ್ಟ ಕುರಿಗಳ ಸಂಖ್ಯೆಗೆ ಅನುಗುಣವಾಗಿ ಸರ್ಕಾರ ನಿಗದಿಪಡಿಸಿದ ದರದಲ್ಲಿ ಪರಿಹಾರ ಮೊತ್ತ ಕುರಿಗಾಹಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಹಶೀಲ್ದಾರ್ ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ ತಿಳಿಸಿದರು.

# ಮೇ 1 ಕ್ಕೆ ಬುದ್ಧ ಜಯಂತಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲಬುರಗಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಇವುಗಳ ಸಂಯುಕ್ತಾಶ್ರಯದಲ್ಲಿ ಬುದ್ಧ ಜಯಂತಿ ಆಚರಣೆ ಕಾರ್ಯಕ್ರಮವನ್ನು ಮೇ 1 ರಂದು ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಕಲಬುರಗಿ ಜಗತ್ ವೃತ್ತದ ಬಿ. ಶ್ಯಾಮಸುಂದರ ರಸ್ತೆಯ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಎದುರುಗಡೆಯಿರುವ ಲುಂಬಿನಿ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೀದರ ಅಣದೂರ ವೈಶಾಲಿ ಬುದ್ಧ ವಿಹಾರದ ಪೂಜ್ಯ ಭಂತೆ ವರಜ್ಯೋತಿ ದಿವ್ಯಸಾನಿಧ್ಯವಹಿಸುವರು. ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಗೌರವ ಉಪಸ್ಥಿತಿವಹಿಸುವರು. ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು. ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ಆರ್. ದೊಡ್ಡಮನಿ, ಬೀದರ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರುಗಳಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಜಾಧವ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ತಳವಾರ ಸಾಬಣ್ಣ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಅಬ್ದುಲ್ ರಶೀದ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರಪಾಲಿಕೆ ಮಹಾಪೌರ ವರ್ಷಾ ರಾಜೀವ ಜಾನೆ ಅವರು ಅತಿಥಿಗಳಾಗಿ ಪಾಲ್ಗೊಳ್ಳುವರು.

ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲಬುರಗಿ ಈಶಾನ್ಯ ವಲಯದ ಶಾಂತನು ಸಿನ್ಹಾ, ಕಲಬುರಗಿ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕಲಬುರಗಿ ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್ ಹಾಗೂ ಕಲಬುರಗಿ ಸಮಾಜದ ಮುಖಂಡರಾದ ಎ.ಬಿ. ಹೊಸಮನಿ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

# ಸಂಚಾರ ನಿರ್ವಹಣಾ ಕೇಂದ್ರಕ್ಕೆ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲಬುರಗಿ ನಗರ ಪೊಲೀಸ್, ಜಿಲ್ಲಾಡಳಿತ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಇವರ ಸಂಯುಕ್ತಾಶ್ರಯದಲ್ಲಿ, 2024-25 ಮತ್ತು 2025-26ನೇ ಸಾಲಿನ ಅನುದಾನದಡಿ ಕಲಬುರಗಿ ನಗರದ ಪೊಲೀಸ್ ಆಯುಕ್ತಾಲಯದಲ್ಲಿ ನೂತನ ವಾಹನಗಳ ಹಸ್ತಾಂತರ ಹಾಗೂ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸಿಸ್ಟಮ್ (ಖಖಿಒಖ) ಸಂಚಾರ ನಿರ್ವಹಣಾ ಕೇಂದ್ರದ ಉದ್ಘಾಟನಾ ಕಾರ್ಯಕ್ರಮ ಇಂದು ನೆರವೇರಿತು.

ಕಾರ್ಯಕ್ರಮವನ್ನು ಗೃಹ ಸಚಿವರಾದ ಜಿ. ಪರಮೇಶ್ವರ ಅವರು ಹಸಿರು ಧ್ವಜ ತೋರಿಸುವ ಮೂಲಕ ಚಾಲನೆ ನೀಡಿದರು.

ಕಾನೂನು ಸುವ್ಯವಸ್ಥೆ ಹಾಗೂ ಸಂಚಾರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ, ಸಂಚಾರ ನಿರ್ವಹಣೆ ಮತ್ತು ಅಪರಾಧ ತಡೆಗಟ್ಟಲು 36 ಹೊಸ ಬೈಕ್‌ಗಳು, 3 ಪಿಕಪ್ ವ್ಯಾನ್‌ಗಳು ಹಾಗೂ 3 ಬೊಲೆರೊ ಜೀಪ್‌ಗಳನ್ನು ಒಳಗೊಂಡಂತೆ ಒಟ್ಟು ಸುಮಾರು 725 ಲಕ್ಷ ರೂ ಮೊತ್ತದ ವಾಹನಗಳನ್ನು ಸಚಿವರು ಪೊಲೀಸ್ ಇಲಾಖೆಗೆ ಹಸ್ತಾಂತರಿಸಿದರು. ಇದೇ ಸಂದರ್ಭದಲ್ಲಿ ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ಅಧ್ಯಕ್ಷೆ ಹಾಗೂ ಉತ್ತರ ಕ್ಷೇತ್ರದ ಶಾಸಕಿ ಕನೀಜ್ ಫಾತೀಮಾ, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಬಿ.ಜಿ. ಪಾಟೀಲ, ತಿಪ್ಪಣ್ಣಪ್ಪ ಕಮಕನೂರ, ಡಾ. ತಳವಾರ ಸಾಬಣ್ಣ, ಜಗದೇವ ಗುತ್ತೇದಾರ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರು, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಬೂಬ್ ಚಿಸ್ತಿ ಸಾಹೇಬ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರ ಪಾಲಿಕೆಯ ಮಹಾಪೌರ ವರ್ಷಾ ರಾಜೀವ ಜಾನೆ ಸೇರಿದಂತೆ

ಬೆಂಗಳೂರು ಪೊಲೀಸ್ ಮಹಾನಿರ್ದೇಶಕ ಹಾಗೂ ಮಹಾನಿರೀಕ್ಷಕರಾದ ಡಾ. ಎಂ.ಎ. ಸಲೀಂ, ಕಲಬುರಗಿ ಪೊಲೀಸ್ ಮಹಾನಿರ್ದೇಶಕ ಶಾಂತನು ಸಿನ್ಹಾ, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ ಸಿಂಗ್ ಮೀನಾ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಪೊಲೀಸ್ ಆಯುಕ್ತ ಡಾ. ಶರಣಬಸಪ್ಪ ಎಸ್.ಡಿ. ಹಾಗೂ ಉಪ ಪೊಲೀಸ್ ಆಯುಕ್ತ ಪ್ರವೀಣ ಹೆಚ್. ನಾಯಕ್ ಸೇರಿದಂತೆ ಹಲವಾರು ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಆರೋಗ್ಯ ರಕ್ಷಣೆಗೆ ತುರ್ತು ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಮನವಿ

• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ



ಪ್ರಸ್ತುತ ವಿಜಯಪುರ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ 42ಲಿಅ ರಿಂದ 44ಲಿಅ ವರೆಗೆ ಏರಿಕೆಯಾಗುತ್ತಿದ್ದು, ಭಾರತೀಯ ಹವಾಮಾನ ಇಲಾಖೆಯು 'ಊಜಚಿಣ ಘಚಿತಜ' ಎಚ್ಚರಿಕೆ ನೀಡಿದೆ. ಹೀಗಾಗಿ ತಾಲೂಕಿನ ಮನಗೂಳಿ ಪಟ್ಟಣದಲ್ಲಿ ಬಹುತೇಕ ಜನರು ಕೃಷಿ ಕೂಲಿ, ಕಟ್ಟಡ ಕಾರ್ಮಿಕರು, ಬೀದಿ ವ್ಯಾಪಾರಿಗಳಾಗಿದ್ದು, ಮಧ್ಯಾಹ್ನದ ವೇಳೆಯೂ ಅನಿವಾರ್ಯವಾಗಿ ಬಿಸಿಲಿನಲ್ಲಿ ಕೆಲಸ ಮಾಡುವಂತಾಗಿದೆ.

ಬಿಸಿಲಾಘಾತ, ನಿರ್ಜಲೀಕರಣದಿಂದ ಸಾರ್ವಜನಿಕರ ಆರೋಗ್ಯಕ್ಕೆ ಧಕ್ಕೆಯಾಗುವ ಸಾಧ್ಯತೆ ಇರುವುದರಿಂದ, *ಕರ್ನಾಟಕ ಪೌರಾಡಳಿತ ಕಾಯ್ದೆ 1964 ರ ಕಲಂ 87(1)(ಜ)* ರನ್ವಯ ಸಾರ್ವಜನಿಕ ಆರೋಗ್ಯ ಕಾಪಾಡುವುದು ಪಟ್ಟಣ ಪಂಚಾಯತಿಯ ಪ್ರಮುಖ ಕರ್ತವ್ಯವಾಗಿರುತ್ತದೆ.

ಪಟ್ಟಣದ ಪ್ರಮುಖ ಸ್ಥಳಗಳಾದ ಬಸ್ ನಿಲ್ದಾಣ, ಮಾರುಕಟ್ಟೆ, ಆಸ್ಪತ್ರೆ ಹತ್ತಿರ ಬಿಸಿಲಿನ ತಾಪದಿಂದ ರಕ್ಷಣೆ ಕುರಿತು ಧ್ವನಿವರ್ಧಕ ಮೂಲಕ ಹಾಗೂ ಕರಪತ್ರಗಳ ಮೂಲಕ ಜಾಗೃತಿ ಮೂಡಿಸಬೇಕು.

4-5 ಪ್ರಮುಖ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ಕುಡಿಯುವ ನೀರಿನ ತೊಟ್ಟಿ/ಮಡಕೆಗಳನ್ನು ಇಟ್ಟು, ಸಾರ್ವಜನಿಕರಿಗೆ ಉಚಿತವಾಗಿ ನೀರು ಒದಗಿಸಬೇಕು.

ಪೌರ ಕಾರ್ಮಿಕರು, ಕೂಲಿ ಕಾರ್ಮಿಕರಿಗೆ ಪಟ್ಟಣ ಪಂಚಾಯತಿ ವತಿಯಿಂದ ಮಧ್ಯಾಹ್ನದ ವೇಳೆ ಮಜ್ಜಿಗೆ ಅಥವಾ ಔಖಖ ದ್ರಾವಣ ವಿತರಿಸಲು ಕ್ರಮ ಕೈಗೊಳ್ಳಬೇಕು.

ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬಿಸಿಲಾಘಾತಕ್ಕೆ ತುರ್ತು ಚಿಕಿತ್ಸೆಗೆ ಬೇಕಾದ ಔಷಧ, ಔಖಖ ಪೊಟ್ಟಣಗಳನ್ನು ದಾಸ್ತಾನು ಇಡಲು ಆರೋಗ್ಯ ಇಲಾಖೆಗೆ ಸೂಚಿಸಬೇಕು.

ಪೌರ ಕಾರ್ಮಿಕರು ಹಾಗೂ ಕಾಮಗಾರಿ ಕಾರ್ಮಿಕರ ಕೆಲಸದ ಅವಧಿಯನ್ನು ಮಧ್ಯಾಹ್ನ 12 ರಿಂದ 3 ರವರೆಗೆ ವಿನಾಯಿತಿ ನೀಡಿ, ಬೆಳಿಗ್ಗೆ ಬೇಗ ಅಥವಾ ಸಂಜೆ ಕೆಲಸ ಮಾಡಲು ಸೂಚಿಸಬೇಕು.

ಮೇಲ್ಕಂಡ ಕ್ರಮಗಳನ್ನು ಕೂಡಲೇ ಜಾರಿಗೊಳಿಸಿ, ಸಾರ್ವಜನಿಕರ ಜೀವ ರಕ್ಷಣೆಗೆ ಮುಂದಾಗಬೇಕೆಂದು ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡಬೇಕೆಂದು ಪಟ್ಟಣ ಪಂಚಾಯತ್ ಸದಸ್ಯ ಭಾಗ್ಯರಾಜ ಶ್ರೀಶೈಲ ಸೊನ್ನದ ವಿನಂತಿಸಿಕೊಂಡು ಮುಖ್ಯ ಅಧಿಕಾರಿ ನಿಖಿಲೇಶ್ ಪಾಟೀಲ ಅವರಿಗೆ ಮನವಿ ಸಲ್ಲಿಸಿದರು.

# ಇಂದು ಅಂಕೋಲಾದಲ್ಲಿ ಸಂಭ್ರಮದ ಬಂಡಿಹಬ್ಬ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:

ಪಟ್ಟಣದ ಶಕ್ತಿ ದೇವತೆಯೆಂದೇ ಶ್ರೀ ಶಾಂತಾದುರ್ಗಾದೇವಿಯ ಬಂಡಿಹಬ್ಬವು ಇಂದು ಏ. 30 ರಂದು ನಡೆಯಲಿದೆ. ಒಟ್ಟು 12 ದಿನಗಳವರೆಗೆ ನಡೆಯಲಿರುವ ಈ ಬಂಡಿಹಬ್ಬವು ಅಕ್ಷಯ ತದಿಗೆಯೆಂದು ಚಾಲನೆ ನೀಡಲಾಗುತ್ತದೆ. ಪ್ರತಿ ದಿನ ಕಳಸ ದೇವಸ್ಥಾನದಿಂದ ಸಿದ್ಧಗೊಂಡ ದೇವಿಯ ಕಳಸವು ಶ್ರೀ ಶಾಂತಾದುರ್ಗಾ ದೇವಸ್ಥಾನಕ್ಕೆ ಆಗಮಿಸುತ್ತಿದೆ.

ದೇವರು ಬರುವದಾರಿಯಲ್ಲಿ ತಳಿರು-ತೋರಣ ಹಾಕಿ ಭಕ್ತರು ದೇವಿಗೆ ಪೂಜೆ ಸಲ್ಲಿಸುತ್ತಾರೆ. ಕುಂಬಾರಕೇರಿಯ ಕಳಸ ದೇವಸ್ಥಾನದಲ್ಲಿ ಸಿದ್ಧಗೊಳ್ಳುವ ಕಳಸವು ನಂತರ ಗುನಗರು ಅದನ್ನು ಹೊತ್ತು ವಿವಿಧ ವಾದ್ಯಗಳೊಂದಿಗೆ ಆಗಮಿಸುತ್ತದೆ. ಹಾಗೆ ಪ್ರತಿ ದಿನ ರಾತ್ರಿ ಆಡುಕಟ್ಟೆಯ ಬಳಿ ದೇವಿಯ ಮುಖವಾಡವನ್ನು ಆಡಿಸಲಾಗುತ್ತದೆ. ಇದನ್ನು ನೋಡಲು ವಿವಿಧ ಭಾಗಗಳಿಂದ ನೂರಾರು ಭಕ್ತರು ಇಲ್ಲಿಗೆ ಆಗಮಿಸುತ್ತಾರೆ.

ಇಂದು ಏ.30 ರಂದು ನಡೆಯುವ ಬಂಡಿಹಬ್ಬವು ವಿಶೇಷವಾದದ್ದು. ಕಳಸ ದೇವಸ್ಥಾನದಿಂದ ಶ್ರೀ ಶಾಂತಾದುರ್ಗಾ ದೇವಸ್ಥಾನಕ್ಕೆ ತೆರಳಿ ನಂತರ ಬಲಿಯ ಮಕ್ಕಳು ಆಗಮಿಸುತ್ತಾರೆ. ನಂತರ ದೇವಿಯ ಕಳಸವು ಆಡುಕಟ್ಟೆಗೆ ಆಗಮಿಸಿ ಅಲ್ಲಿ ಸಿದ್ಧಪಡಿಸಲಾದ ರಾಟಿಯಲ್ಲಿ ದೇವರು ಆಸೀನವಾಗಿ ಒಂದು ಸುತ್ತನ್ನು ಹಾಕುತ್ತದೆ. ಈ ಸಂದರ್ಭದಲ್ಲಿ ನೆರೆದ ಸಾವಿರಾರು ಭಕ್ತರು ಚಪ್ಪಾಳೆಗಳನ್ನು ಹೊಡೆಯುವ ಮೂಲಕ ಸಂಭ್ರಮಿಸುತ್ತಾರೆ. ಹಬ್ಬದ ವಿಶೇಷವಾಗಿ ಸಿಹಿ ತಿನಿಸುಗಳು ಪಟ್ಟಣದ ವಿವಿಧ ಭಾಗಗಳಲ್ಲಿ ಕಂಡುಬರುತ್ತದೆ. ಮೇ.1 ರಂದು ಮರು ಬಂಡಿಹಬ್ಬ ನಡೆಯಲಿದೆ. ಭಕ್ತರು ತಮ್ಮ ಹರಕೆಯನ್ನು ತೀರಿಸುತ್ತಾರೆ.

# ಕಾಣೆಯಾದ ಮಹಿಳೆಯರ ಪತ್ತೆಗೆ ಪೋಲಿಸ್ ಮನವಿ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಅಫಜಲಪುರದ 32 ವರ್ಷದ ಮಹಿಳೆಯಾದ ಮಹಾದೇವಿ ಗಂಡ ಭೀಮಾಶಂಕರ ಬೊಮನಳ್ಳಿ ಅವರು ದಿನಾಂಕ: 10-01-2024 ರಂದು ಮಧ್ಯಾಹ್ನ 2 ಗಂಟೆಗೆ ಅಫಜಲಪುರದಿಂದ ಕಾಣೆಯಾಗಿರುತ್ತಾರೆ ಎಂದು ಅಫಜಲಪುರ ವೃತ್ತದ ಆರಕ್ಷಕ ವೃತ್ತ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅದೇ ರೀತಿ ಅಫಜಲಪುರ ತಾಲೂಕಿನ ಹೈದ್ರಾ ತಾಂಡಾದ 32 ವರ್ಷದ ಮಹಿಳೆಯಾದ ವೈಶಾಲಿ ಗಂಡ ರಮೇಶ ಜಾಧವ ಅವರು ದಿನಾಂಕ: 08-10-2024 ರಂದು ಅಫಜಲಪುರ ತಾಲೂಕಿನ ಹೈದ್ರಾ ತಾಂಡಾದಿಂದ ಕಾಣೆಯಾಗಿರುತ್ತಾರೆ.

ಈ ಮಹಿಳೆಯರ ಬಗ್ಗೆ ಸುಳಿವು ಸಿಕ್ಕಲ್ಲಿ ಅಫಜಲಪುರ ವೃತ್ತದ ಸಿ.ಪಿ.ಐ. ಇವರ ಮೊಬೈಲ್ ಸಂಖ್ಯೆ-9480803538, ಅಫಜಲಪುರ ಪೊಲೀಸ್ ಠಾಣೆಯ ಪಿ.ಎಸ್.ಐ.-9480803567, ದೇವಲಗಾಣಗಾಪುರ ಪೊಲೀಸ್ ಠಾಣೆಯ ಪಿ.ಎಸ್.ಐ.-9480803568 ಹಾಗೂ ಕಲಬುರಗಿ ಕಂಟ್ರೋಲ್ ರೂಮ್ ನಂಬರ್ 08472-279180ಗೆ ಸಂಪರ್ಕಿಸಲು ಕೋರಲಾಗಿದೆ.

# ಹೀಟ್ ಸ್ಟ್ರೋಕ್: ಕಟ್ಟಡ ಕಾರ್ಮಿಕರಿಗೆ ಮುನ್ನೆಚ್ಚರಿಕೆ ಕ್ರಮಗಳು

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಭಾರತೀಯ ಹವಾಮಾನ ಇಲಾಖೆಯ ಮುನ್ನೆಚ್ಚರಿಕೆಯಂತೆ ಕಲಬುರಗಿ ಜಿಲ್ಲೆಯಾದ್ಯಂತ ಕೆಲವು ಭಾಗಗಳಲ್ಲಿ ಕಳೆದ ಮೂರು ದಿನಗಳಿಂದ ಹೆಚ್ಚಿನ (45) ತಾಪಮಾನ ದಾಖಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಹೀಟ್ ವೇವ್ (ಶಾಖದ ಹೊಡೆತ) ಹೀಟ್ ವೇವ್ ಸ್ಟ್ರೋಕ್‌ದಿಂದಾಗಿ ಸಾರ್ವಜನಿಕರು/ಕಟ್ಟಡ ಕಾರ್ಮಿಕರು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದ್ದು, ಕಾರ್ಮಿಕರು ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಕಲಬುರಗಿ ಜಿಲ್ಲಾ ಕಾರ್ಮಿಕ ಅಧಿಕಾರಿ ಎಸ್.ಆರ್.ಹಳಿಮನಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಮಿಕರ ಸುರಕ್ಷತೆಗಾಗಿ ಅಗತ್ಯ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು. ಕಾರ್ಮಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಮಾಡಬೇಕು. ಪ್ರತಿ ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡವುದು ಗುತ್ತಿಗೆದಾರರು, ಮಾಲೀಕರ ಜವಾಬ್ದಾರಿಯಾಗಿದ್ದು, ಈ ಬಗ್ಗೆ ಸೂಕ್ತ ಕ್ರಮವಹಿಸಬೇಕು. ಈ ಕುರಿತು ಯಾವುದೇ ಅಹಿತಕರ ಘಟನೆಗಳು ನಡೆದಲ್ಲಿ ಸಂಬಂಧಿಸಿದ ಗುತ್ತಿಗೆದಾರರು, ಮಾಲೀಕರುಗಳೇ ನೇರ ಹೊಣೆಗಾರರಾಗಿರುತ್ತಾರೆ ಹಾಗೂ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಬೇಕು. ನಿಯೋಜಕರಿಗೆ ಸೂಚನೆ: ಮಧ್ಯಾಹ್ನ 12 ರಿಂದ 3 ಗಂಟೆಯವರೆಗೆ ಹೊರಾಂಗಣ ಕೆಲಸಗಳನ್ನು ತಪ್ಪಿಸಬೇಕು. ಕೆಲಸದ ಸ್ಥಳದಲ್ಲಿ ತಂಪಾದ ಕುಡಿಯುವ ನೀರನ್ನು ಸಾಕಷ್ಟು ಒದಗಿಸಬೇಕು. ಪ್ರತಿ 1 ಗಂಟೆಯಲ್ಲಿ 10 ರಿಂದ 15 ನಿಮಿಷ ವಿಶ್ರಾಂತಿ ನೀಡಬೇಕು. ನೆರಳು ಇರುವ ವಿಶ್ರಾಂತಿ ಸ್ಥಳವನ್ನು ಕಲ್ಪಿಸಬೇಕು. ಹಗುರವಾದ ಬಿಳಿ ಅಥವಾ ಬೆಳಕು ಬಣ್ಣದ ಬಟ್ಟೆಗಳನ್ನು ಧರಿಸಲು ಸಲಹೆ ನೀಡಬೇಕು. ಟೋಪಿ, ಗಾಗಲ್‌ಗಳನ್ನು ಬಳಸಬೇಕು, ಸನ್‌ಸ್ಕ್ರೀನ್ ಬಳಕೆ ಪ್ರೋತ್ಸಾಹಿಸಬೇಕು. ತಲೆ ಸುತ್ತು, ವಾಂತಿ, ಹೆಚ್ಚು ಬೆವರು, ದೇಹದ ತಾಪಮಾನ ಹೆಚ್ಚಳವು ಹೀಟ್ ಸ್ಟ್ರೋಕ್ ಲಕ್ಷಣಗಳಾಗಿವೆ. ಈ ಲಕ್ಷಣಗಳು ಕಂಡುಬಂದರೆ ತಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಬೇಕು. ಓ.ಆರ್.ಎಸ್. ದ್ರಾವಣ ಅಥವಾ ನೀರು ನೀಡಬೇಕು. ತಂಪಾದ ಸ್ಥಳದಲ್ಲಿ ವಿಶ್ರಾಂತಿ ಕಲ್ಪಿಸಬೇಕು. ಕಾರ್ಮಿಕರಿಗೆ ಉಷ್ಣತೆಯ ಅಲೆ ಬಗ್ಗೆ ಅರಿವು ಮೂಡಿಸಬೇಕು. ಸುರಕ್ಷತಾ ತರಬೇತಿ ಕಾರ್ಯಕ್ರಮಗಳನ್ನು ನಡೆಸಬೇಕು.

# ಡಿಪ್ಲೋಮಾ ಇನ್ ಟೂಲ್ ಆಂಡ್ ಡೈ ಮೇಕಿಂಗ್ ಕೋರ್ಸಿನ ಪ್ರವೇಶಾತಿ ಆರಂಭ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲಬುರಗಿಯ ಕರ್ನಾಟಕ ಜರ್ಮನ್ ತಾಂತ್ರಿಕ ಸಂಸ್ಥೆ (ಕೆ.ಜಿ.ಟಿ.ಟಿ.ಐ.) ಯಲ್ಲಿ 2026-27ನೇ ಸಾಲಿನ ಡಿಪ್ಲೋಮಾ ಇನ್ ಟೂಲ್ ಆಂಡ್ ಡೈಮೇಕಿಂಗ್ (ಡಿ.ಟಿ.ಡಿ.ಎಮ್.) ಕೋರ್ಸಿಗೆ ಪ್ರವೇಶಾತಿ ಪ್ರಾರಂಭವಾಗಿದ್ದು, ಇದಕ್ಕಾಗಿ ಆಸಕ್ತಿಯುಳ್ಳ ಎಸ್.ಎಸ್.ಎಲ್.ಸಿ. ಪಾಸಾದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಕರ್ನಾಟಕ ಜರ್ಮನ್ ತಾಂತ್ರಿಕ ಸಂಸ್ಥೆಯ ನಿರ್ದೇಶಕರು ತಿಳಿಸಿದ್ದಾರೆ.

ಈ ಕೋರ್ಸ್‌ನ ಅವಧಿ 4 ವರ್ಷ ಇದ್ದು, 3 ವರ್ಷ ಸಾಂಸ್ಥಿಕ ತರಬೇತಿ ಇರುತ್ತದೆ. ಅಂತಿಮ ವರ್ಷದಲ್ಲಿ ಕಡ್ಡಾಯವಾಗಿ ಸ್ಟೈಫಂಡ್ (Stipend) ಸಹಿತ ಕೈಗಾರಿಕಾ ತರಬೇತಿ ಒಳಗೊಂಡಿರುತ್ತದೆ. ಈ ಕೋರ್ಸ್ ಎಐಸಿಟಿಇ ಯಿಂದ ಅನುಮೋದನೆ ದೊರೆತಿದ್ದು, ತಾಂತ್ರಿಕ ಶಿಕ್ಷಣ ಇಲಾಖೆ ನೀಡುವ ಡಿಪ್ಲೋಮಾ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಕೋರ್ಸ್‌ಗೆ ತತ್ಸಮಾನವಾಗಿದೆ.

ಈ ಸಂಸ್ಥೆಯಲ್ಲಿ ಸುಸಜ್ಜಿತ ಯಂತ್ರೋಪಕರಣಗಳು, ಅನುಭವಿ ಸಿಬ್ಬಂದಿ, ಮಹಿಳಾ ಮತ್ತು ಪುರುಷರಿಗಾಗಿ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿದ್ದು, ಕೋರ್ಸ್ ಮುಗಿದ ನಂತರ ಆಟೋಮೊಬೈಲ್, ಏರೋಸ್ಪೇಸ್, ಪ್ರೆಸ್‌ಟೂಲ್ ಕ್ಷೇತ್ರಗಳ ಕಂಪನಿಗಳಲ್ಲಿ ಉದ್ಯೋಗಾವಕಾಶ ದೊರೆಯಲಿದೆ. ಕೆ.ಜಿ.ಟಿ.ಟಿ.ಐ. ಯಿಂದ ಕ್ಯಾಂಪಸ್ ಪ್ಲೇಸ್ಮೆಂಟ್ ನೆರವು ನೀಡಲಾಗುತ್ತದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು ತಿತಿತಿ.ಇರಣಣು.ಭಿಟಟ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಅಥವಾ ಸಂಸ್ಥೆಯ ಕಚೇರಿಯಲ್ಲಿ ಖುದ್ದಾಗಿ ಅರ್ಜಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಅರ್ಜಿ ಸಲ್ಲಿಸಲು 2026ರ ಮೇ 25 ರಂದು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8884886172/ 9902345676/ 8660171836 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಐಟಿಐ ವಿವಿಧ ವೃತ್ತಿಗಳಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲಬುರಗಿ (ಮಹಿಳಾ) ಸರ್ಕಾರಿ ತರಬೇತಿ ಸಂಸ್ಥೆಯಲ್ಲಿ ಆಗಸ್ಟ್-2026ನೇ ಶೈಕ್ಷಣಿಕ ಸಾಲಿಗೆ ಈ ಕೆಳಕಂಡ ಐಟಿಐ ವಿವಿಧ ವೃತ್ತಿಗಳಿಗೆ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಿದ್ದು, ಇದಕ್ಕಾಗಿ 10 ನೇ ಪಾಸಾದ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಕಲಬುರಗಿ (ಮಹಿಳಾ) ಸರ್ಕಾರಿ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಎರಡು ವರ್ಷದ ಎಲೆಕ್ಟ್ರೀಷಿಯನ್, ಫಿಟ್ಟರ್ (ಪಿಪಿಪಿ ಕೋಟಾದಡಿ), ಎಲೆಕ್ಟ್ರಾನಿಕ್ ಮೆಕ್ಯಾನಿಕ, ಮೆಕ್ಯಾನಿಕ್ ಎಲೆಕ್ಟ್ರಿಕ್ ವಹಿಕಲ್, ಅಡ್ವಾನ್ಸಡ್ ಸಿಎನ್‌ಸಿ ಮಸಿನಿಂಗ್ ಟೆಕ್ನಿಷಿಯನ್, ಬೇಸಿಕ್ ಡಿಸೈನರ್ ಆಂಡ್ ವರ್ಚ್ಯವಲ್ ವೆರಿಫೈರ್ (ಫಿನಿಟ್ ಎಲೆಮೆಂಟ್ ಮೆಥೆಡ್) (ಪಿಪಿಪಿ ಮತ್ತು ಸಿ.ಟಿ.ಎಸ್) ಹಾಗೂ ಒಂದು ವರ್ಷದ ಕಂಪ್ಯೂಟರ್ ಹಾರ್ಡ್‌ವೇರ್ ಅಂಡ್ ನೆಟವರ್ಕ್ ಮೆಂಟೆನೆನ್ಸ್ (ಪಿಪಿಪಿ ಕೋಟಾದಡಿ), ಕೋಪಾ, ಡ್ರೇಸ್ ಮೇಕಿಂಗ್ (ಪಿಪಿಪಿ ಮತ್ತು ಸಿ.ಟಿ.ಎಸ್) ಮತ್ತು ಸರ್ಕಾರಿ ಕೋಟಾದಡಿ, ಇಂಡಸ್ಟ್ರಿಯಲ್ ರೋಬೋಟಿಕ್ಸ್ ಅಂಡ್ ಡಿಜಿಟಲ್ ಮ್ಯಾನಿಫ್ಯಾಕ್ಚರಿಂಗ್ ಟೆಕ್ನಿಷಿಯನ್ (ಪಿಪಿಪಿ ಮತ್ತು ಸಿ.ಟಿ.ಎಸ್), ಆರ್ಟಿಜನ್ ಯುಸಿಂಗ್ ಅಡ್ವಾನ್ಸಡ್‌ಟೂಲ್ (ಪಿಪಿಪಿ ಮತ್ತು ಸಿ.ಟಿ.ಎಸ್), ಮ್ಯಾನಿಫ್ಯಾಕ್ಚರಿಂಗ್ ಪ್ರೋಸಸ್ ಕಂಟ್ರೋಲ್ ಅಂಡ್ ಅಟೋಮೇಶನ್ ವೃತ್ತಿಗಳಿಗೆ ಪ್ರವೇಶ ಪಡೆಯಬಹುದಾಗಿದೆ. ಡ್ರೇಸ್ ಮೇಕಿಂಗ್ ವೃತ್ತಿಗೆ 8 ನೇ ಪಾಸಾದ /10 ನೇ ಫೇಲಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಸರ್ಕಾರಿ ಸೀಟುಗಳ ಮೀಸಲಾತಿ ಆಧಾರದ ಮೇಲೆ ಪ್ರವೇಶಕ್ಕಾಗಿ ತಿತಿತಿ. ಛಿಣಜ.ಇಚಿಡಿಟಚಿಣಚಿಕಚಿ.ರಠತ.ಎಟ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ 2026ರ ಮೇ 8 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಅಭ್ಯರ್ಥಿಗಳು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, (ಮಹಿಳಾ) ಎಂ.ಎಸ್‌ಕೆ. ಮಿಲ್ ರಸ್ತೆ, ಕಲಬುರಗಿ ಇಲ್ಲಿ ಉಚಿತವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

# ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಆದೇಶ ಜಾರಿಗೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

ಯಾದಗಿರಿ ಜಿಲ್ಲೆಯಲ್ಲಿ 2026ರ ಏಪ್ರಿಲ್ 30 ರಿಂದ ಮೇ 13ರ ವರೆಗೆ ನಡೆಯಲಿರುವ ದ್ವಿತೀಯ ಪಿ.ಯು.ಸಿ ಪರೀಕ್ಷೆ-2ನ್ನು ನಡೆಸಲಾಗುತ್ತಿದ್ದು, ಈ ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿಗೊಳಿಸಿ ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ ದಂಡ ಪ್ರಕ್ರಿಯೆ ಸಂಹಿತೆ ಬಿ.ಎನ್.ಎಸ್.ಎಸ್ 2023ರ ಕಲಂ 163 ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 2026ರ ಏಪ್ರಿಲ್ 30 ರಿಂದ ಮೇ 13ರ ವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯ ವರೆಗೆ ದ್ವಿತೀಯ ಪಿ.ಯು.ಸಿ ಪರೀಕ್ಷೆ-2ನ್ನು ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನ 3 ಪರೀಕ್ಷಾ ಕೇಂದ್ರಗಳು, ಶಹಾಪೂರ ತಾಲೂಕಿನ 2 ಪರೀಕ್ಷಾ ಕೇಂದ್ರಗಳು, ಸುರಪುರ ತಾಲೂಕಿನ 2 ಪರೀಕ್ಷಾ ಕೇಂದ್ರಗಳು, ಗುರುಮಠಕಲ್ ತಾಲೂಕಿನ 1 ಪರೀಕ್ಷಾ ಕೇಂದ್ರ ಮತ್ತು ಹುಣಸಗಿ ತಾಲೂಕಿನ 1 ಪರೀಕ್ಷಾ ಕೇಂದ್ರ ಯಾದಗಿರಿ ಜಿಲ್ಲೆಯಾದ್ಯಂತ ಒಟ್ಟು 9 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತಿದ್ದು, ಈ ಪರೀಕ್ಷೆಗಳು ಸುಸೂತ್ರವಾಗಿ ನಡೆಸುವ ಹಿತದೃಷ್ಟಿಯಿಂದ, ಪರೀಕ್ಷಾ ಕೇಂದ್ರದ ಸುತ್ತಮುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಜಾರಿಗೊಳಿಸಿ ಹಾಗೂ ಪುಸ್ತಕ ಮಳಿಗೆಗಳನ್ನು ಮುಚ್ಚಲು ಈ ಕೆಳಕಾಣಿಸಿದ ಷರತ್ತಿಗೊಳಪಟ್ಟು ಆದೇಶಿಸಿದೆ.

ಷರತ್ತುಗಳು : ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ, ಮೊಬೈಲ್, ಪೇಜರ್, ಜೆರಾಕ್ಸ್, ಟೈಪಿಂಗ್, ಪುಸ್ತಕ ಮಳಿಗೆಗಳು ಮುಂತಾದವುಗಳನ್ನು ನಿಷೇಧಿಸಲಾಗಿದೆ. ಈ ಪರೀಕ್ಷಾ ಕೇಂದ್ರಗಳಲ್ಲಿ ನಿಗದಿಪಡಿಸಿದ ಅಧಿಕಾರಿಗಳನ್ನು, ಶಿಕ್ಷಕರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವದನ್ನು ನಿಷೇಧಿಸಲಾಗಿದೆ. 200 ಮೀಟರ್ ಪರೀಕ್ಷಾ ಕೇಂದ್ರಗಳ ಸುತ್ತಲೂ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವದನ್ನು ನಿಷೇಧಿಸಿದೆ. ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಈ ಆದೇಶ ಅನ್ವಯವಾಗುವುದಿಲ್ಲ. ಜವಹಾರ ಪದವಿ ಪೂರ್ವ ಕಾಲೇಜು ಯಾದಗಿರಿ ಪರೀಕ್ಷಾ ಕೇಂದ್ರವು ಬಾಲಾಜಿ ಕಲ್ಯಾಣ ಮಂಟಪಕ್ಕೆ ಹೊಂದಿಕೊಂಡಿದ್ದು, 2026ರ ಏಪ್ರಿಲ್ 30 ರಿಂದ ಮೇ 13ರ ವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯ ವರೆಗೆ ಯಾವುದೇ ತರಹದ ಸಭೆ ಸಮಾರಂಭಗಳನ್ನು ಮತ್ತು ಧ್ವನಿವರ್ಧಕಗಳನ್ನು ನಿಷೇಧಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರೀಕ್ಷಾ ಕೇಂದ್ರಗಳಿಗೆ ಜಾಗೃತದಳ ನೇಮಿಸಿ ಆದೇಶಕ್ಕೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

2026ರ ಏಪ್ರಿಲ್ 30 ರಿಂದ 13ರ ವರೆಗೆ ನಡೆಯಲಿರುವ ದ್ವಿತೀಯ ಪಿ.ಯು.ಸಿ ಪರೀಕ್ಷೆ-2 ನಡೆಸಲಾಗುತ್ತಿದ್ದು, ಈ ಪರೀಕ್ಷಾ ಕೇಂದ್ರಗಳಿಗೆ ಜಾಗೃತದಳ ಎಂದು ನೇಮಿಸಿ ಆದೇಶವನ್ನು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ.

2026ರ ಏಪ್ರಿಲ್ 30 ರಿಂದ 13ರ ವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯ ವರೆಗೆ ದ್ವಿತೀಯ ಪಿ.ಯು.ಸಿ ಪರೀಕ್ಷೇ-2ನ್ನು ನಡೆಸಲಾಗುತ್ತಿದ್ದು, ಈ ಪರೀಕ್ಷೆಯು ಸುಸೂತ್ರವಾಗಿ ನಡೆಸುವ ಹಿತದೃಷ್ಟಿಯಿಂದ ಈ ಕೆಳಕಂಡ ಕೋಷ್ಠಕ 2 ಮತ್ತು 4 ರಲ್ಲಿ ಹೆಸರು ಮತ್ತು ಪದನಾಮ ನಮೂದಿಸಿರುವ ಅಧಿಕಾರಿಗಳನ್ನು ಈ ಪರೀಕ್ಷಾ ಕೇಂದ್ರಗಳ ಜಾಗೃತದಳ ಎಂದು ನೇಮಕ ಮಾಡಿ ಆದೇಶಿಸಿದೆ.

ಯಾದಗಿರಿ ತಾಲ್ಲೂಕು ಯಾದಗಿರಿ ಜವಾಹರ ಪದವಿ ಪೂರ್ವ ಕಾಲೇಜು ಪರೀಕ್ಷೆ ಕೇಂದ್ರಕ್ಕೆ ಯಾದಗಿರಿ ತಾಲ್ಲೂಕಾ ಆರೋಗ್ಯ ಅಧಿಕಾರಿ ಶ್ರೀ ಹಣಮಂತರೆಡ್ಡಿ ಮೊ.ನಂ.9945957964, ಯಾದಗಿರಿ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು ಪರೀಕ್ಷೆ ಕೇಂದ್ರಕ್ಕೆ ಯಾದಗಿರಿ ಕೈ ಮಗ್ಗ ಜವಳಿ ಇಲಾಖೆ ಶ್ರೈ ಹೈದರಖಾನ್ ಮೊ.ನಂ.9041810918, ಯಾದಗಿರಿ ಪದವಿ ಪೂರ್ವ ಕಾಲೇಜು ಪರೀಕ್ಷೆ ಕೇಂದ್ರಕ್ಕೆ ಯಾದಗಿರಿ ತಾಲ್ಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಶ್ರೀ ಸಂತೋಷರೆಡ್ಡಿ ಮೊ.ನಂ.8660463377, ಗುರುಮಠಕಲ್ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಪರೀಕ್ಷೆ ಕೇಂದ್ರಕ್ಕೆ ಗುರುಮಠಕಲ್ ಪುರಸಭೆ ಮುಖ್ಯಾಧಿಕಾರಿ ಶ್ರೀ ಶರಣಪ್ಪ ಮೊ.ನಂ.9972455403, ಹುಣಸಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಪರೀಕ್ಷೆ ಕೇಂದ್ರಕ್ಕೆ ಹುಣಸಗಿ ರೈತ ಸಂಪರ್ಕ ಕೃಷಿ ಅಧಿಕಾರಿ ಶ್ರೀ ಸಿದ್ದಾರ್ಥ ಪಾಟೀಲ್

ಮೊ.ನಂ.8123207981, ಸುರಪುರ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಪರೀಕ್ಷೆ ಕೇಂದ್ರಕ್ಕೆ ಸುರಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀ ಲಾಲಸಾಬ್ ಮೊ.ನಂ.9972219600, ಸುರಪುರ ಪ್ರಭು ಪದವಿ ಪೂರ್ವ ಕಾಲೇಜು ಪರೀಕ್ಷೆ ಕೇಂದ್ರಕ್ಕೆ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ

ಶ್ರೀ ರಮೇಶ ರಾಠೋಡ ಮೊ.ನಂ.9900233857, ಶಹಾಪೂರ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಪರೀಕ್ಷೆ ಕೇಂದ್ರಕ್ಕೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀ ಮಲ್ಲಣ್ಣ ದೇಸಾಯಿ ಮೊ.ನಂ.9591611676, ಶಹಾಪೂರ ಸರ್ಕಾರಿ ಪದವಿ ಪೂರ್ವ ಕಾಲೇಜ (ಬಾಲಕಿಯರ) ಪರೀಕ್ಷೆ ಕೇಂದ್ರಕ್ಕೆ ಶಹಾಪೂರ ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕಅಭಿಯಂತರರುಶ್ರೀಸೂಗರೆಡ್ಡಿಮೊ.ನಂ.9448829768, ಈ ಪರೀಕ್ಷೆ ಕೇಂದ್ರಗಳಿಗೆ ಗ್ರೂಪ್ ಎ. ಮತ್ತು ಬಿ ಅಧಿಕಾರಿಯವರನ್ನು ಜಾಗೃತದಳ ಎಂದು ನೇಮಿಸಿದೆ ಆದೇಶಿಸಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಕಸಾಪ ದತ್ತಿ ನಿಧಿ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ

ಜಿಲ್ಲಾ, ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಪಟ್ಟಣದ ಬಿ.ಎಲ್.ಡಿ ಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಸಹಯೋಗದಲ್ಲಿ ಜಾನಪದ ಉತ್ಸವ, ಮೋಜಿನ ಆಟಗಳ ಮುಕ್ತಾಯ ಹಾಗೂ ಬಹುಮಾನ ವಿತರಣೆ ಸಮಾರಂಭ ಇಂದು ಪಟ್ಟಣದಲ್ಲಿ ಬಿ.ಎಲ್.ಡಿ.ಇ ಮಹಾವಿದ್ಯಾಲಯದಲ್ಲಿ ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ ಎಂದು ತಾಲೂಕಾ ಕಸಾಪ ಅಧ್ಯಕ್ಷ ಶಿವಾನಂದ ಈ ಡೋಣುರ ತಿಳಿಸಿದ್ದಾರೆ.

# ಐತಿಹಾಸಿಕ ಬಾವಿಗಳ ದುಸ್ಥಿತಿ ಕಾಯಕಲ್ಪಕ್ಕೆ ಸಾರ್ವಜನಿಕರ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಪಟ್ಟಣದ ಪ್ರಸಿದ್ಧ ರಾಮತೀರ್ಥ ಬಾವಿ, ಶತಮಾನಗಳ ಐತಿಹಾಸಿಕ ಹಿನ್ನಲೆ ಹೊಂದಿದ್ದು, ಆಧುನಿಕ ಈಜುಕೊಳಗಳಿಗೂ ಸಾಟಿಯಾಗುವ ರೀತಿಯಲ್ಲಿ ನಿರ್ಮಾಣಗೊಂಡಿದೆ.

ಪಟ್ಟಣದ ಮಕ್ಕಳು ಈಜು ಕಲಿಯಲು ಹಾಗೂ ಬೇಸಿಗೆಯಲ್ಲಿ ಈಜಲು ಮಕ್ಕಳಿಂದ ಹಿಡಿದು ಎಲ್ಲಾ ವಯಸ್ಸಿನವರು ಈ ಬಾವಿಗೆ ಪ್ರತಿನಿತ್ಯ ಭೇಟಿ ನೀಡುವದು ವಿಶೇಷ.

ಆದರೆ ಸೂಕ್ತ ನಿರ್ವಹಣೆಯ ಕೊರತೆಯಿಂದ ಬಾವಿ ಶಿಥಿಲಾವಸೆಗೆ ತಲುಪಿದೆ. ಗೋಡೆಗಳು ಕುಸಿಯುವ ಸ್ಥಿತಿಯಲ್ಲಿ ಇವೆ. ಬಾವಿಯೊಳಗೆ ಶಿವಲಿಂಗ, ನಂದಿ, ಚಂಡೀ ಮೂರ್ತಿ ಸೇರಿದಂತೆ ಹಲವು ಭಗ್ನವಿಗ್ರಹಗಳು ಪೂರ್ವದಲ್ಲಿ ದಾಳಿಕೋರರ ದಾಳಿಗೆ ಬಲಿಯಾಗಿವೆ.

ಐತಿಹಾಸಿಕ ಮಹತ್ವ ಹೊಂದಿರುವ ಈ ಬಾವಿಯ ಸಂರಕ್ಷಣೆ ಮತ್ತು ಪುನರುಜ್ಜೀವನಕ್ಕಾಗಿ ಸಂಬಂಧಿತ ಇಲಾಖೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ನೀರಿನ ಸಂರಕ್ಷಣೆ ಜೊತೆಗೆ ಪರಂಪರೆಯ ಉಳಿವಿಗೂ ಆದ್ಯತೆ ನೀಡಬೇಕೆಂಬುದು ಸ್ಥಳೀಯರ ಅಭಿಪ್ರಾಯವಾಗಿದೆ.



# ವಿದ್ಯುತ್ ಸಂಪರ್ಕ ಇಲ್ಲದೆ ಕತ್ತಲಲ್ಲಿ ಜೇನುಕುರುಬ ಸಮುದಾಯ



ಮಲ್ಲಮ್ಮ ನುಡಿ ವಾರ್ತೆ, ಹುಣಸೂರು

ತಾಲೂಕಿನಬಿಳಿಕೆರೆಹೋಬಳಿಯಕರೀಮುದ್ದನಹಳ್ಳಿಗ್ರಾಮ ಪಂಚಾಯತಿ ವ್ಯಾಪ್ತಿಯ ಮಾದ್ಯಯನಕಟ್ಟೆಹಾಡಿಯ ಜೇನುಕುರುಬ ಆದಿವಾಸಿ ಕುಟುಂಬಗಳಿಗೆ ಭಾಗ್ಯ ಜ್ಯೋತಿ ನೀಡದೆ 3ವರ್ಷಗಳಿಂದ ಕತ್ತಲಲ್ಲೇ ಕಾಲನೂಕಿದ್ದಾರೆ. ಮೂರು ವರ್ಷದ ಹಿಂದೆ ಕರೆಂಟ್ ಬಿಲ್ಲು ಪಾವತಿಸಿಲ್ಲ ಎಂಬ ಕಾರಣಕ್ಕೆ ಸಂಪರ್ಕ ಕಡಿತಗೊಳಿಸಲಾಗಿತ್ತು. ಸರ್ಕಾರ ಕಟ್ಟುವುದಾಗಿ ಹೇಳಿತ್ತು.

ಭಾಗ್ಯಜ್ಯೋತಿ ಎಲ್ಲರಿಗೂ ಫ್ರೀ ಆಗಿ ಇದೆಯಾದರೂ ವಿದ್ಯುತ್ ಸಂಪರ್ಕ ನೀಡದ ಕಾರಣ ಈ ಭಾಗ್ಯದಿಂದ ವಂಚಿತ ರಾಗಿದ್ದೇವೆಂದು ಹಾಡಿಜನರು ಬೇಸರ ವ್ಯಕ್ತಪಡಿಸಿದ್ದಾರೆ. ಪಂಚಾಯತಿ ಗೆ ಗ್ರಾಮಸಭೆಯಲ್ಲಿ ತಿಳುಸಿದರೂ ಉದಾಸೀನಾ ಮಾಡಲಾಗಿದೆ. ಎಂದಿದ್ದಾರೆ.

ನಿನ್ನೆ ಚೆಸ್ಕಾಂ ಇಂಜಿನಿಯರ್ಗೆ, ತಾಲೂಕು ಪರಿಶಿಷ್ಟ ಪಂಗಡದ ಕಲ್ಯಾಣ ಅಧಿಕಾರಿಗೆ, ಎ ಸಿ ಹಾಗು ತಾಸೀಲ್ದಾರರಾವರಿಗೆ ಹಾಡಿ ಯಿಂದ ಮನವಿಸಲ್ಲಿಸಿ ವಿದ್ಯುತ್ ಸಂಪರ್ಕ ನೀಡಿ ಭಾಗ್ಯ ಜ್ಯೋತಿ ಸೌಕರ್ಯ ನೀಡಬೇಕೆಂದು ಆಗ್ರಹಿಸಿದ್ದಾರೆ. ಇದು ಬಿಳಿಕೆರೆ ಭಾಗಕ್ಕೆ ಸೇರಿರುವುದರಿಂದ ಹಾಗು ಹೆ ಚ್ ಡಿ ಕೋಟೆ ಲೈನ್ ಕೊನೆ ಇರುವುದರಿಂದ ಬೀದಿದೀಪವು ಸರಿಯಾಗಿ ಬರುತ್ತಿಲ್ಲ ಎಂದು ರಾಜು, ಮಣಿ, ಪವಿತ್ರ, ಜಯಮ್ಮ ದೂರಿದ್ದಾರೆ.

# ನೈಜ ವರದಿ ಸಲ್ಲಿಸಲು ಸೂಚನೆ




• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಮಾನವ ಅಭಿವೃದ್ಧಿ ವರದಿ 2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ 2031 ವರದಿಗಳ ತಯಾರಿಕೆಗೆ ನೈಜ ಹಾಗೂ ಅಧಿಕೃತ ಅಂಕಿ ಅಂಶಗಳನ್ನು ಒದಗಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಈ ಕುರಿತು ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಉಪಸಮಿತಿಗಳ ಸಭೆ ನಡೆಸಿದ ಅವರು,ಈ ವರದಿ ತಯಾರಿಕೆಗೆ ಸಂಬಂಧಿಸಿದಂತೆ ವರದಿಯ ಮೇಲ್ವಿಚಾರಣೆ,ಸಮನ್ವಯ ಕಾರ್ಯ ಕೈಗೊಂಡು ಕರಡು ವರದಿ ತಯಾರಿಸಲು ಮೂರು ವಿಶ್ವವಿದ್ಯಾಲಯಗಳನ್ನು ಕೋರಲಾಗಿತ್ತು. ಅದರನ್ವಯ ಕಲ್ಬುರ್ಗಿ ಕೇಂದ್ರಿಯ ವಿಶ್ವವಿದ್ಯಾಲಯದವರು ಮುಂದೆ ಬಂದಿದ್ದು,ಅವರು ಕೋರುವ ಮಾಹಿತಿಯನ್ನು ಸಮಯಕ್ಕೆಸರಿಯಾಗಿ,ನಿಖರ,ನೈಜ ಅಂಕಿ ಅಂಶಗಳೊಂದಿಗೆ ಒದಗಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕರಡು ವರದಿ ತಯಾರಿಕೆಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಹಾಗೂ ಜಿಲ್ಲಾ ಮಟ್ಟದ ವಲಯವಾರು ಉಪ ಸಮಿತಿಗಳನ್ನು ರಚಿಸಲಾಗಿದೆ. ಈಗಾಗಲೇ ಹತ್ತು ಉಪಸಮಿತಿಗಳನ್ನು ರಚಿಸಲಾಗಿದೆ.

ಇಂದು ಈ ಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಕಲ್ಬುರ್ಗಿ ವಿಶ್ವ ವಿದ್ಯಾಲಯದ ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕಿ ಹಾಗೂ ಡಿಹೆಚ್ ಡಿ ಆರ್ ಹಾಗೂ ಐ ಎಸ್ ಡಿಡಿಪಿ

ನೋಡಲ್ ಅಧಿಕಾರಿಗಳಾದ ಶ್ರೀಮತಿ ಛಾಯಾ ದೇಗಾಂವಕರ್ ಅವರು ಅವಶ್ಯಕ ಮಾರ್ಗದರ್ಶನ ನೀಡಿದರು. ಕರ್ನಾಟಕ ರಾಜ್ಯ ಕಲ್ಬುರ್ಗಿ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವರು ಹಾಗೂ ಪ್ರಾಧ್ಯಾಪಕರಾದ(ಸಂಯೋಜಕರು) ಪ್ರೊ ಆರ್. ಆರ್.ಬಿರಾದರ್, ಪ್ರೊ. ನಿರಂಜನ್ ಪೂಜಾರ್ ಸಹ ಸಂಯೋಜಕರು, ಹಾಗೂ ಗಣಪತಿ ಸಿಣ್ಣೂರ ಅವರು ಈವರೆಗೆ ವಿವಿಧ ಇಲಾಖೆಗಳಿಂದ ಈವರೆಗೆ ಸಲ್ಲಿಸಲಾದ, ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಕೃಷಿ ಇಲಾಖೆ, ಪಶುಸಂಗೋಪನೆ ಇಲಾಖೆ, ನಗರ ಸ್ಥಳಿಯ ಸಂಸ್ಥೆಗಳು, ಶಿಕ್ಷಣ ಇಲಾಖೆ, ಜಿಲ್ಲಾ ಪಂಚಾಯತ್ ನ ವಿವಿಧ ಇಲಾಖೆಗಳ ಅಂಕಿ ಅಂಶಗಳನ್ನು ಪರಿಶೀಲಿಸಿದರು.

ಸಭೆಯಲ್ಲಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಪಂಚಾಯತ್ ನ ಮುಖ್ಯ ಯೋಜನಾಧಿಕಾರಿ ಶ್ರೀ ಕುಮುಲಯ್ಯ ಅವರು ಜಿಲ್ಲೆಗೆ ಅನುಕೂಲವಾಗುವ ಅಂಕಿ ಅಂಶಗಳನ್ನು ಅಧಿಕಾರಿಗಳು ಒದಗಿಸಬೇಕು. ಈ ಅಂಕಿ ಅಂಶಗಳು ನೀತಿ ಆಯೋಗಕ್ಕೂ ಹೋಗುವುದರಿಂದ ನೈಜ, ವಾಸ್ತವಿಕ ಅಂಕಿ ಅಂಶದ ವರದಿ ಸಲ್ಲಿಸುವಂತೆ ತಿಳಿಸಿ,ಜಿಲ್ಲೆಯ ಆರೂ ತಾಲೂಕಿಗೆ ಸಂಬಂಧಿಸಿದ ವರದಿ ಸಲ್ಲಿಸಲಾಗುವುದೆಂದು ಅವರು ಹೇಳಿದರು. ಸಭೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್

# ಹೊನಗೇರಾದಲ್ಲಿ ಜಾಗೃತಿ ಕಾರ್ಯಕ್ರಮ




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ತಾಲೂಕಿನ ಹೊನಗೇರಾ ಗ್ರಾಮದಲ್ಲಿ ನಡೆದ ಗ್ರಾಮ ಪಂಚಾಯತ ವಿವಿಧ ಇಲಾಖೆಗಳ ಸಹಯೋಗದಲ್ಲಿ ಸ್ವಸಹಾಯ ಸಂಘದ ಮಹಿಳೆಯರು ಹಾಗೂ ಪಂಚಾಯತ್ ಸಿಬ್ಬಂದಿಗಳಿಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಮತ್ತು ಕಾರ್ಯದರ್ಶಿಗಳಾದ ಗೌರವಾನ್ವಿತ ಮರಿಯಪ್ಪ ಅವರು ಮಾನವ ಮತ್ತು ವನ್ಯಜೀವಿಗಳ ಸಂಘರ್ಷ, ಲಿಂಗ ತಾರತಮ್ಯ, ಸರಕಾರದ ವಿವಿಧ ಯೋಜನೆಗಳು, ಬಾಲ್ಯ ವಿವಾಹ ತಡೆ, ಪೋಷಕತ್ವ ಹಾಗೂ ದತ್ತು ಯೋಜನೆಗಳ ಕುರಿತು ಮಾಹಿತಿ ನೀಡಿದರು. ಸಮಾಜದಲ್ಲಿ ಜಾಗೃತಿ ಹೆಚ್ಚಿಸುವುದು ಅತ್ಯಂತ ಅಗತ್ಯ ಎಂದು ಅವರು ತಿಳಿಸಿದರು. ಜಿಲ್ಲಾ ಸಂಯೋಜಕರಾದ ಕು. ನಾಗಪ್ಪ ಗಮಗ ಅವರು ಪೋಷಕತ್ವ ಯೋಜನೆ ಡಾನ್ ಬೋಸ್ಕೋ ಸಮಾಜ ಸೇವಾ ಕೇಂದ್ರ ಯಾದಗಿರಿ ಕುರಿತು ಮಾತನಾಡಿ, ಪೋಷಕತ್ವ ಯೋಜನೆ 44ರ ಪ್ರಕಾರ ಮಕ್ಕಳ ಪಾಲನೆ,

ಪೋಷಣೆ ಹಾಗೂ ರಕ್ಷಣೆ, ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಕಾವಲು ಸಮಿತಿಯ ಪಾತ್ರದ ಕುರಿತು ವಿವರಿಸಿದರು. ಈ ಸಂದರ್ಭದಲ್ಲಿ ವಕೀಲರಾದ ಶಿವರಾಜ್ ಅವರು ಮಾತನಾಡಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಮನೆಮನೆಗೆ ಕಾನೂನು ಸೇವೆಗಳನ್ನು ತಲುಪಿಸಲಾಗುತ್ತಿದೆ. ಸಾರ್ವಜನಿಕರು ತಮ್ಮ ಸಮಸ್ಯೆಗಳಿಗಾಗಿ ಉಚಿತ ಕಾನೂನು ಸಹಾಯವನ್ನು ಪಡೆಯಬಹುದು ಎಂದು ತಿಳಿಸಿದರು.

# ಅಸಮಾನತೆ ನೀಗಿಸಲು ಸಹಕಾರಿ: ಅಳ್ಳಳ್ಳಿ



ಮಲ್ಲಮ್ಮನುಡಿ ವಾರ್ತೆ ಯಾದಗಿರಿ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು ಹಾಗೂ ಯಾದಗಿರಿ ಜಿಲ್ಲಾ ಸಹಕಾರ ಯೂನಿಯನ್ ನಿ, ಯಾದಗಿರಿ ಹಾಗೂ ಸಹಕಾರ ಇಲಾಖೆ ಯಾದಗಿರಿ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಮದ್ದರಕಿ ಇವರುಗಳ ಸಂಯುಕ್ತಾ ಆಶ್ರಯದಲ್ಲಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮ ಜರುಗಿಸಲಾಯಿತು.

ಸಸಿಗೆ ನೀರು ಹಾಕುವ ಮುಖಾಂತರ ಸಾಮಾಜಿಕ ಹಾಗೂ ಆರ್ಥಿಕವಾಗಿ ಅಸಮಾನತೆಯನ್ನು ನೀಗಿಸಲು ಸಹಕಾರಿ ಒಂದೇ ಮಾರ್ಗ ಎಂಬ ಮಟ್ಟಕ್ಕೆ ಇಂದು ಸಹಕಾರ ಚಳುವಳಿಯು ಬೆಳೆದಿದೆ ಜನಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಬದುಕಿಗೆ ಪ್ರೇರಣೆ ನೀಡುತ್ತಾ ಜನ ಜೀವನದ ಎಲ್ಲಾ ಆಯಾಮಗಲೊಟ್ಟಿಗೆ ಸಹಕಾರ ಕ್ಷೇತ್ರ ವ್ಯಾಪಿಸಿಕೊಂಡಿದೆ ಎಂದು ಸಂಘದನಿರ್ದೇಶಕರಾದಬಸವರಾಜ ಅಳ್ಳಳ್ಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು,

ಮಹಾಮಂಡಳಮತ್ತುಯೂನಿಯನ್ ಕಾರ್ಯ ಚಟುವಟಿಕೆ ಹಾಗೂ ಸದಸ್ಯರ ಹಕ್ಕು ಕರ್ತವ್ಯ ಕುರಿತು ಶ್ರೀಮತಿ ಸುಜಾತ ಮಠ ಜಿಲ್ಲಾ ಸಹಕಾರ ಶಿಕ್ಷಕರು ಮಾಹಿತಿ ನೀಡಿದರು ಹಾಗೂ ನಿರೂಪಣೆ ಮಾಡಿದರು, ಸ್ವಾಗತವನ್ನು, ಒಕ್ಕೂಟದ ದ್ವಿತೀಯ ದರ್ಜೆ ಸಹಾಯಕರಾದ ಸಿದ್ದನಗೌಡ ಮಲ್ಲನಗೌಡ ಚಾಮನಾಳ ಮಾಡಿದರು ವೀರನಗೌಡ ಮಾಲಿ ಪಾಟೀಲ ಸಂಘದ ಕಾರ್ಯದರ್ಶಿ ಇವರು ವಂದನಾರ್ಪಣೆಯನ್ನು ಮಾಡಿದರು ಅಂಬಣ್ಣ ಬಿರಾದಾರ್ ಅತಿಥಿಗಳಾಗಿ ಭಾಗವಹಿಸಿದ್ದರು ಸಂಘದ ಸದಸ್ಯರು ಮಹಿಳೆಯರು ತರಬೇತಿಯಲ್ಲಿ ಭಾಗವಹಿಸಿದ್ದರು.

## ವಿಎ, ಆರ್‌ಐಗಳಿಗೆ 13 ಲ್ಯಾಪ್‌ಟಾಪ್‌ಗಳ ವಿತರಣೆ

# ಇಲಾಖೆಯ ಕೆಲಸ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕಂದಕೂರು ಸೂಚನೆ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಕಂದಾಯ ಇಲಾಖೆಯ ಕಾರ್ಯಗಳನ್ನು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ವಹಿಸಲು ತಂತ್ರಜ್ಞಾನ ಬಳಕೆ ಅವಶ್ಯಕವಾಗಿದೆ ಎಂದು ಶಾಸಕ ಶರಣಗೌಡ ಕಂದಕೂರು ಅಭಿಪ್ರಾಯಪಟ್ಟರು. ಪಟ್ಟಣದ ತಮ್ಮ ಜನಸಂಪರ್ಕ ಕಚೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಎ (ಗ್ರಾಮ ಆಡಳಿತಾಧಿಕಾರಿಗಳು) ಹಾಗೂ ಆರ್‌ಐ (ರಾಜಸ್ವ ಪರಿಶೀಲಕರು) ಗಳಿಗೆ ಒಟ್ಟು 13 ಲ್ಯಾಪ್‌ಟಾಪ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಇ-ಆಫೀಸ್, ಇ-ಪಾವತಿ ಸೇರಿದಂತೆ ಕಂದಾಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಗಣಕೀಕರಣದ ಮೂಲಕವೇ ನಡೆಸಬೇಕು. ಇದರಿಂದ ಸಾರ್ವಜನಿಕರ ಕೆಲಸಗಳು ತ್ವರಿತವಾಗಿ ಪೂರ್ಣಗೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ಸಾರ್ವಜನಿಕರು ಕಚೇರಿಗಳಿಗೆ ಮರುಮರು ಭೇಟಿ ನೀಡುವಂತ ಪರಿಸ್ಥಿತಿ ತಪ್ಪಿಸಲು ಅಧಿಕಾರಿಗಳು ನಿಗದಿತ ಅವಧಿಯೊಳಗೆ ಕೆಲಸಗಳನ್ನು ಮುಗಿಸಬೇಕು ಎಂದು ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ವಿದ್ಯುತ್ ಗುತ್ತಿಗೆದಾರರ ಸಂಘಕ್ಕೆ ಗಿರಿನಾಡು ಪರಿವರ್ತನ ತಂಡ ಜಯಭೇರಿ



• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ (ರಿ) ಬೆಂಗಳೂರು, 2026-2031 ನೇ ಸಾಲಿನ ಅವಧಿಗೆ ನಡೆದ ಯಾದಗಿರಿ ಜಿಲ್ಲಾ ಸಮಿತಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ಗಿರಿನಾಡು ಪರಿವರ್ತನ ತಂಡ ಭರ್ಜರಿ ಜಯಭೇರಿ ಬಾರಿಸಿತು.

ಅಧ್ಯಕ್ಷರಾಗಿ ವಿನೋದ ರೆಡ್ಡಿ ಶಾರದಳ್ಳಿ, ಉಪಾಧ್ಯಕ್ಷರಾಗಿ ಲಚ್ಮಣ್ಣ ಓಬಳಾಪುರ್ ಹಾಗೂ ಟಿಪ್ಪು ಸುಲ್ತಾನ್, ಪ್ರಧಾನ ಕಾರ್ಯದರ್ಶಿಯಾಗಿ ರಾಜಪಾಲ್, ಜಂಟಿ ಕಾರ್ಯದರ್ಶಿಯಾಗಿ ಅಶೋಕ್ ಇಟಗಿ, ಸಂಘಟನಾ ಕಾರ್ಯದರ್ಶಿ ಮಹ್ಮದ್ ಜಾಕೀರ್ ಹುಸೇನ್ ಮತ್ತು ಖಜಾಂಚಿಯಾಗಿ ಖಾಜಾಮೈನೋದ್ದೀನ್ (ಬಾಬಾ) ಅವರು ಆಯ್ಕೆಯಾಗಿದ್ದಾರೆ.

# ಕವಲೂರಿನ ದುರ್ಗಾದೇವಿ ಪಾರ್ವತಿ ಪರಮೇಶ್ವರರ ಜಾತ್ರೆ



• **ಮಲ್ಲಮ್ಮ ನುಡಿವಾರ್ತೆ ಕೊಪ್ಪಳ**

ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಕವಲೂರಿನ ಶ್ರೀ ದುರ್ಗಾದೇವಿ ಮತ್ತು ಪಾರ್ವತಿ ಪರಮೇಶ್ವರರ ಜಾತ್ರೆ ಪ್ರಾರಂಭಗೊಳ್ಳಲಿದ್ದು ನಿನ್ನೆ ರಥಕ್ಕೆ ಕಳಸಾರೋಹಣದ ಮೂಲಕ ಚಾಲನೆ ನೀಡಲಾಯಿತು. ಇಂದು ಬೆಳಿಗ್ಗೆ ದೇವಸ್ಥಾನಕ್ಕೆ ದೀಪಾಲಂಕಾರ,ದೇವರಮೂರ್ತಿಗೆ ವಿಶೇಷ ಪೂಜೆ, ಅಭಿಷೇಕ ನೈವೇದ್ಯ ಅರ್ಪಿಸಲಾಯಿತು. ಇಂದು ಸಂಜೆ ಮುಂಡರಗಿಯ ಜಗದ್ಗುರು ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳ ಅಡ್ಡಪಲ್ಲಕ್ಕಿ ಮಹೋತ್ಸವ ಜರುಗಲಿದ್ದು ಕಾರ್ಯಕ್ರಮದಲ್ಲಿಮಂಗಳವಾದ್ಯ,ಡೊಳ್ಳು, ನಂದಿಕೋಲು ಮಜಲಿನೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ಅಡ್ಡಪಲ್ಲಕ್ಕಿ ಉತ್ಸವದ ಮೆರವಣಿಗೆ ಸಾಗುವುದು ನಂತರ ಪೂಜ್ಯರ ಆಶೀರ್ವಚನ ಕಾರ್ಯಕ್ರಮ ಜರುಗುತ್ತದೆ.

ದಿನಾಂಕ ಮೇ.01ರಂದು ವಿಶೇಷ ಧಾರ್ಮಿಕ ಕಾರ್ಯಗಳೊಂದಿಗೆ ಸರಳ ಸಾಮೂಹಿಕ ವಿವಾಹಗಳು ನಡೆಯುತ್ತವೆ ಸಂಜೆ ಪಂಚಕಳಸದ ಮಹಾರಥೋತ್ಸವ ಜರುಗುವುದು. ಮರುದಿನದೇವಿಯಪಲ್ಲಕ್ಕಿಯೊಂದಿಗೆ ಅಗ್ನಿಕೊಂಡ ಹಾಯುವ ಮೂಲಕ ಜಾತ್ರೆಸಂಪನ್ನಗೊಳ್ಳುತ್ತದೆ ಎಂದು ಸಮಿತಿಯ ಅಧ್ಯಕರಾದ ತಿಮ್ಮಣ್ಣ ಸಿದ್ನೆಕೊಪ್ಪರವರು ಜಾತ್ರೆಆಮಂತ್ರಣ ಪತ್ರಿಕೆಬಿಡುಗಡೆಗೊಳಿಸಿ ತಿಳಿಸಿದ್ದಾರೆ. ಜಾತ್ರೆಯಲ್ಲಿ ನಾಡಿನ ಹರಗುರು ಶರಣರು,ಗಣ್ಯರುಭಾಗವಹಿಸಲಿದ್ದಾರೆ. ತಿಮ್ಮಣ್ಣ ಸಿದ್ನೆಕೊಪ್ಪ,ಹೊನ್ನಕೇರಪ್ಪ ಮುಕ್ಕಣ್ಣನವರ,ಮಹಾಂತೇಶ ಸಿಂದೋಗಿಮಠ,ವೆಂಕಣ್ಣಹಳ್ಳಿ,ಶರಣಪ್ಪ ಯರಾಸಿ,ಕರಿಯಪ್ಪ ಎಮ್ಮಿ,ನಾಗಪ್ಪ ಕಲಾಲ,ಲಕ್ಷ್ಮಣ ಸಿದ್ನೇಕೊಪ್ಪ,ಲಕ್ಷ್ಮಣ ಗುಡಿ,ಭೀಮಪ್ಪ,ಜಯರಾಮ್,ಸಣ್ಣ ಯಂಕಪ್ಪ,ನಾಗಪ್ಪ,ನಾಗಪ್ಪ ವಡ್ಡರ ಗ್ರಾಮದ ಹಿರಿಯರು ಯುವಕರು ಉಪಸ್ಥಿತಿ ಇದ್ದರು

# ಆಸ್ತಿಗಾಗಿ ಅಣ್ಣನ ಮಗನನ್ನೆ ಕೊಂದ ಚಿಕ್ಕಪ್ಪ





• **ಮಲ್ಲಮ್ಮ ನುಡಿ ವಾರ್ತೆ , ಸಿಂಧನೂರು**

ಆಸ್ತಿ ವಿಚಾರದಲ್ಲಿ ಸ್ವಂತ ಅಣ್ಣನ ಮಗನನ್ನೆ ಚಾಕುವಿನಿಂದ ಇರಿದು ಕೊಲೆ ಮಾಡಿ. ಅಣ್ಣನ ಹೆಂಡತಿಯನ್ನು ಮುಗಿಸಬೇಕೆಂದು ಯತ್ನಿಸಿದ ಘಟನೆ ಬುಧವಾರ ಬೆಳಗ್ಗೆ ತಾಲ್ಲೂಕಿನ ಅಲಬನೂರು ಗ್ರಾಮದಲ್ಲಿ ನಡೆದಿದ್ದು.

ನಾಗರಾಜ ಸಿದ್ದಪ್ಪ ಆಲ್ವಿ (12) ಕೊಲೆಯಾದ ಬಾಲಕನಾಗಿದ್ದು, ಅಮೃತಾ ಸಿದ್ದಪ್ಪ (42) ತೀವ್ರವಾಗಿ ಗಾಯಗೊಂಡಿದ್ದಾರೆ. ಮೃತ ವ್ಯಕ್ತಿಯ ಚಿಕ್ಕಪ್ಪ ಬಸವರಾಜ ರುದ್ರಪ್ಪ ಆಲ್ವಿ ಕೊಲೆ ಮಾಡಿದ ವ್ಯಕ್ತಿಯಾಗಿದ್ದಾನೆ.

ಮಂಗಳವಾರ ಅಲಬನೂರು ಗ್ರಾಮಕ್ಕೆ ಬಂದ ಕೊಲೆಗೈದ ವ್ಯಕ್ತಿ ಬಸವರಾಜ ತನ್ನ ತಾಯಿಯ ಮನೆಯಲ್ಲಿದ್ದು, ಬುಧವಾರ ಅದೇ ಗ್ರಾಮದ ತನ್ನ ಸಹೋದರ ಸಿದ್ದಪ್ಪನ ಮನೆಗೆ ಚಾಕು ಸಹಿತ ತೆರಳಿದ್ದಾನೆ.

4 ಎಕರೆ ಜಮೀನು ನಲ್ಲಿ ಇಬ್ಬರೂ ಪಾಲು ಬರಬೇಕಾಗಿತ್ತು. ಅಣ್ಣ ಸಿದ್ದಪ್ಪ ನಿಂಗೆ ಕೇಳಿದ್ದಿರು ಸಹ ಪಾಲು ಕೊಡದೆ

ಸಿದ್ದಪ್ಪ ಸತಾಯಿಸುತ್ತಿದ್ದನೆ ಎಂದು ತಿಳಿಯದು ಇಬ್ಬರು ನಡುವೆ ದ್ವೇಷ ಇದ್ದುದರಿಂದ ಕೊಲೆ ಪ್ರಕರಣ ಮಾಡಿದ್ದು.

ಮನೆಯಲ್ಲಿ ಸಿದ್ದಪ್ಪ ಹೆಂಡತಿ ಅಮೃತಾ, ಮಕ್ಕಳಾದ ನಾಗರಾಜ ಮತ್ತು ಧನುಷ್ ಇದ್ದು, ಅತ್ತಿಗೆ ಮತ್ತು ಮಕ್ಕಳ ಮೇಲೆ ಚಾಕುವಿನಿಂದ ಕೊಲೆ ಮಾಡಲು ಯತ್ನಿಸಿದ್ದು, ಘಟನೆಯಲ್ಲಿ ನಾಗರಾಜ ಎನ್ನುವ ಬಾಲಕ ಸಾವನ್ನಪ್ಪಿದ್ದು, ಅಮೃತಾ ಮತ್ತು ಧನುಷ್ ಎನ್ನುವವರಿಗೆ ಗಂಭೀರ ಗಾಯಗಳಾಗಿದ್ದು, ನಗರದ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗೆ ಕರೆತರಲಾಗಿದೆ.

ಘಟನಾ ಸ್ಥಳಕ್ಕೆ ಡಿವೈಎಸ್ಪಿ ಜಿ.ಚಂದ್ರಶೇಖರ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆ.

ಅಲಬನೂರು ಗ್ರಾಮದ ಚಿನ್ನಮ್ಮ ರುದ್ರಪ್ಪ ಎನ್ನುವ ಮಹಿಳೆಗೆ ಸಿದ್ದಪ್ಪ ಹಾಗೂ ಬಸವರಾಜ ಎನ್ನುವ ಇಬ್ಬರು ಪುತ್ರರಿದ್ದು, ಸಿದ್ದಪ್ಪ ಎನ್ನುವ ಅಲಬನೂರು ಗ್ರಾಮದಲ್ಲಿ ವಾಸವಿದ್ದು, ಇನ್ನೋರ್ವ ಪುತ್ರ ಬಸವರಾಜ ಎನ್ನುವವರ ಸಿರುಗುಪ್ಪ ತಾಲ್ಲೂಕಿನ ಅಳ್ಳಿಗನೂರು ಗ್ರಾಮದಲ್ಲಿ ವಾಸಿಸುತ್ತಿದ್ದಾನೆ. ಇಬ್ಬರು ಸಹೋದರರ ನಡುವಿನ ಆಸ್ತಿ ವಿಚಾರ ಹಿರಿಯ ಸಹೋದರ ಸಿದ್ದಪ್ಪನ ಮಗ ನಾಗರಾಜ ಸಾವಿನಲ್ಲಿ ಅಂತ್ಯಗೊಂಡಿದ್ದು.

# ಕಾಣೆಯಾದವರ ಪತ್ತೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ**

ಅಫಜಲಪುರದ 21 ವರ್ಷದ ನಬಿಸಾಬ ತಂದೆ ಹುಸೇನಸಾಬ ನದಾಫ ಅವರು ದಿನಾಂಕ: 23–08–2022 ರಂದು ಮಧ್ಯಾಹ್ನ 4.30 ಗಂಟೆಗೆ ಅಫಜಲಪುರದಿಂದ ಕಾಣೆಯಾಗಿದ್ದು, ಇಲ್ಲಿಯವರೆಗೆ ಪತ್ತೆಯಾಗಿರುವುದಿಲ್ಲ ಎಂದು ಅಫಜಲಪುರ ವೃತ್ತದ ಆರಕ್ಷಕ ವೃತ್ತ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅದೇ ರೀತಿ ಅಫಜಲಪುರದ 30 ವರ್ಷದ ಗುರು ತಂದೆ ಸಿದ್ದಪ್ಪ ಆಳಗಿ ಅವರು ದಿನಾಂಕ: 11–03–2023 ರಂದು ರಾತ್ರಿ 9 ಗಂ–ಟೆಗೆ ಅಫಜಲಪುರದಿಂದ ಕಾಣೆಯಾಗಿದ್ದಾರೆ. ಅಫಜಲಪುರ ತಾಲೂಕಿನ ಕೇಸಾಪುರದ 70 ವರ್ಷದ ವೃದ್ಧನಾದ ಚಂದ್ರಶ್ಯಾ ತಂದೆ ಶಿವಲಿಂಗಪ್ಪ ಪಾಟೀಲ ಅವರು ದಿನಾಂಕ: 23–10–2023 ರಂದು ಬೆಳಿಗ್ಗೆ 9.30 ಗಂಟೆಗೆ ಅಫಜಲಪುರ ತಾಲೂಕಿನ ಕೇಸಾಪುರದಿಂದ ಕಾಣೆಯಾಗಿದ್ದಾರೆ. ಅಫಜಲಪುರ ತಾಲೂಕಿನ ನಂದರ್ಗಿ ಗ್ರಾಮದ 44 ವರ್ಷದ ಚಂದ್ರಕಾಂತ ತಂದೆ ಚೆನ್ನಪ್ಪ ದೊಡ್ಡಮನಿ ಅವರು ದಿನಾಂಕ: 05–12–2022 ರಂದು ಸಂಜೆ 5 ಗಂಟೆಗೆ ನಂದರ್ಗಿ ಗ್ರಾಮದಿಂದ ಕಾಣೆಯಾಗಿದ್ದಾರೆ. ಇಲ್ಲಿಯವರೆಗೆ ಪತ್ತೆಯಾಗಿರುವುದಿಲ್ಲ.

ಈ ಮೇಲ್ಕಂಡ ಕಾಣೆಯದವರ ಬಗ್ಗೆ ಸುಳಿವು ಸಿಕ್ಕಲ್ಲಿ ಅಫಜಲಪುರ ವೃತ್ತದ ಸಿ.ಪಿ.ಐ. ಇವರ ಮೊಬೈಲ್ ಸಂಖ್ಯೆ–9480803538, ಅಫಜಲಪುರ ಪೊಲೀಸ್ ಠಾಣೆಯ ಪಿ.ಎಸ್.ಐ.–9480803567, ದೇವಲಗಾಣಗಾಪುರ ಪೊಲೀಸ್ ಠಾಣೆಯ ಪಿ.ಎಸ್.ಐ.–9480803568 ಹಾಗೂ ಕಲಬುರಗಿ ಕಂಟ್ರೋಲ್ ರೂಮ್ ನಂಬರ್ 08472–279180ಗೆ ಸಂಪರ್ಕಿಸಲು ಕೋರಲಾಗಿದೆ.

# ಕುಟುಂಬದ ಆರ್ಥಿಕ ಹೊರೆ ನೀಗಿಸಿದ ಪಂಚ ಗ್ಯಾರಂಟಿ ಯೋಜನೆ: ವೆಂಕಟೇಶ



• **ಮಲ್ಲಮ್ಮ ನುಡಿ ವಾರ್ತೆ , ಬಸವನಬಾಗೇವಾಡಿ**

> **ಇಂಡಿ ಹೋಳಿಗೆ ಬೆಂಗಳೂರನಲ್ಲಿ ಮಾರಾಟ!**
> ಶಕ್ತಿ ಯೋಜನೆಯನ್ನು ಸದುಪಯೋಗಪಡಿಸಿಕೊಂಡ ಜಿಲ್ಲೆಯ ಇಂಡಿ ತಾಲೂಕಿನ ಮಹಿಳೆಯರು ಹೋಳಿಗೆ ತಯಾರಿಸಿಕೊಂಡು ಬೆಂಗಳೂರಿಗೆ ತೆರಳಿ ಮಾರಾಟ ಮಾಡುವುದರ ಮೂಲಕ ಆರ್ಥಿಕವಾಗಿ ಸಧೃಡರಾಗಿದ್ದಾರೆ.
> **ವೆಂಕಟೇಶ ವಂದಾಲ, ಸದಸ್ಯ ಕಾರ್ಯದರ್ಶಿ, ಗ್ಯಾರಂಟಿ ಅನುಷ್ಠಾನ ಸಮಿತಿ.**

ರಾಜ್ಯ ಸರಕಾರದ ಐದು ಗ್ಯಾರಂಟಿ ಯೋಜನೆಗಳ ಫಲವಾಗಿ ಇಂದು ಅನೇಕ ಕುಟುಂಬಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ ಎಂದು ತಾಪಂ ಇಓ ಹಾಗೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಕಾರ್ಯದರ್ಶಿ ವೆಂಕಟೇಶ ವಂದಾಲ ಅಭಿಪ್ರಾಯಪಟ್ಟರು.

ತಾಲೂಕಿನ ಮುತ್ತಗಿ ಗ್ರಾಮದಲ್ಲಿ ಬುಧುವಾರ ಜಿಪಂ,ತಾಪಂ ಹಾಗೂ ತಾಲೂಕಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಹಯೋಗದಲ್ಲಿ ಆಯೋಜಿಸಿದ್ಧ ಮನೆಗೆ ಐದು ಗ್ಯಾರಂಟಿ ಮನೆಯ ಮುಂದೆ ರಂಗೋಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 3 ವರ್ಷಗಳಲ್ಲಿ ಬದಸವನಬಾಗೇವಾಡಿ ಸಾರಿಗೆ ಘಟಕಕ್ಕೆ ಸರಕಾರ ಶಕ್ತಿ ಯೋಜನೆಯಿಂದ 73 ಕೋಟಿ 87 ಲಕ್ಷ ರೂಗಳನ್ನು ಜಮಾ ಮಾಡಿದೆ. ಇದರಿಂದ ಮಹಿಳೆಯರಿಗೆ ಶಕ್ತಿ ಯೋಜನೆಯಿಂದ ಸಾಕಷ್ಟು ಉಳಿತಾಯ ಮಾಡಲು ಸಾಧ್ಯವಾಗಿದೆ. ಬಡತನದಿಂದ ಹೊರ ಬರಲು ಹಾಗೂ ಅಭಿವೃದ್ಧಿ ಹೊಂದಲು ಯೋಜನೆಗಳು ಸಹಕಾರಿಯಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಮಿತಿ ಅಧ್ಯಕ್ಷ ಮೈಬೂಬ ಲಾ ನಾಯ್ಕೋಡಿ ಮಾತನಾಡಿ, ಸರ್ಕಾರ ನುಡಿದಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದ ಸರ್ಕಾರ. ಗ್ಯಾರಂಟಿ ಜಾರಿಯಿಂದ ಸರ್ಕಾರ ದಿವಾಳಿಯಾಗದೇ ಅಭಿವೃದ್ಧಿಯತ್ತ ಸಾಗುತ್ತಿದೆ. ತಾಲೂಕಾ ಸಮಿತಿ ಇಡೀ ವಿಭಾಗ ಮಟ್ಟದಲ್ಲಿ ಅತ್ಯುತ್ತಮ ಸಮಿತಿ ಎಂಬ ಶಿಫಾರಸ್ಸಿಗೆ ಕಾರಣ ಭೂತವಾಗಿದೆ ಎಂದರು.

ಪಿಕೆಪಿಎಸ್ ಅಧ್ಯಕ್ಷ ಪ್ರೇಮಕುಮಾರ ಮ್ಯಾಗೇರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ಸಂದರ್ಭದಲ್ಲಿ ಶರಣಯ್ಯ ಕಂಬಿಮಠ, ಈರಣ್ಣ ಹಾರಿವಾಳ, ಕುಶಾಲ ಚಿಮ್ಮಲಗಿ, ಎನ್.ಆಯ್ ಸಾರವಾಡ, ಸಂಜಯ ಹಳ್ಳೂರ, ತಾಲೂಕಾ ಯೋಜನಾಧಿಕಾರಿ ಎಂಬಿ ಸೊನ್ನದ, ಆರ್.ವಿ ಸಂಕಣ್ಣನವರ, ಪಿಡಿಓ ಡಿ.ಎಂ ಬಿಳೆಕುದರಿ, ಮುಸ್ತಾಫ ಗುಂಡಬಾವಡಿ, ಸಮಿತಿ ಸದಸ್ಯರಾದ ಮಾಂತೇಶ ತಳೇವಾಡ, ಮಲ್ಲನಗೌಡ ಕೋಳೂರ, ಮಹಾದೇವಿ ಕೋಳೂರ, ಮುಖಂಡರಾದ ಶಿವಶಂಕರಗೌಡ ಬಿರಾದಾರ ಸೇರಿದಂತೆ ಆಶಾ ಹಾಗೂ ಸಂಜೀವಿನಿ ಒಕ್ಕೂಟದ ಸದಸ್ಯರು ಹಾಜರಿದ್ದರು. ನಜೀರ ದಡ್ಡಿ ನಿರೂಪಿಸಿ ವಂದಿಸಿದರು.

ಪಟ್ಟಣದ ಸಂಜೀವಿನಿ ಮಹಿಳಾ ಒಕ್ಕೂಟದ ಸದಸ್ಯರು ಹಾಗೂ ಗ್ರಾಮದ ಮಹಿಳೆಯರಿಂದ ಹಾಕಲಾದ ಹಲವು ರಂಗೋಲಿಗಳು ನೋಡುಗರ ಮನ ಸೆಳೆದವು.

# ವಿಶ್ವ ಮಲೇರಿಯಾ ದಿನಾಚರಣೆ ಕಡಿತ ಚಿಕ್ಕದು, ಭೀತಿ ದೊಡ್ಡದು

• **ಮಲ್ಲಮ್ಮ ನುಡಿ ವಾರ್ತೆ , ಸಿಂಧನೂರು**

"ವಿಶ್ವದ ಅತ್ಯಂತ ಅಪಾಯಕಾರಿ ಜೀವಿ ಸಿಂಹವಲ್ಲ, ಚಿರತೆಯೂ ಅಲ್ಲ! ಅದು ಸೊಳ್ಳೆ,!",

ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕಾರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಇಂದಿರಾ ನಗರ ಉಪಕೇಂದ್ರದ,1ಣ ಅಂಗನವಾಡಿ ಕೇಂದ್ರದಲ್ಲಿ ತಾಯಂದಿರ ಸಭೆಯಲ್ಲಿ ತಾಲೂಕಾ ಕಛೇರಿಯ ಆರೋಗ್ಯ ಶಿಕ್ಷಣಾಧಿಕಾರಿಯಾದ ಗೀತಾ ಹಿರೇಮಠ ಮಾತನಾಡಿ ಮಲೇರಿಯಾ ಡೆಂಗ್ಯೂ ಜ್ವ–ರದ ಬಗ್ಗೆ ಸಾರ್ವಜನಿಕರು ಅತಿಯಾದ ಮಾಹಿತಿ ತಿಳಿದು ಕೊಳ್ಳಬೇಕು ಇದರಿಂದ ಯಾವದೇ ರೋಗದ ಕುರಿತು ಮಾಹಿತಿ ಇದ್ದರೆ ರೋಗಲಕ್ಷಣ ಕುರಿತು ಹಾಗೂ ಕೆಳಗಿನ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳುವುದು ಬಹಳ ಮುಖ್ಯವಾಗಿದೆ ಎಂದು ಹೇಳಿದರು.

ಮನೆಯ ಸುತ್ತಮುತ್ತಲಿನ ಪರಿಸರದಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು ಹಾಗೂ ಹಳೆಯ ಟೈಯರ್, ಡಬ್ಬಿ ಮತ್ತು ಕುಂಡಳಿಗಳಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ನೀರು ಸಂಗ್ರಹಿಸುವ ತೊಟ್ಟಿಗಳನ್ನು ವಾರಕ್ಕೊಮ್ಮೆ ಕಡ್ಡಾಯವಾಗಿ ಸ್ವಚ್ಛಗೊಳಿಸಿ ಒಣಗಿಸಬೇಕು.

ಜಗತ್ತಿನಲ್ಲಿ ಅತಿ ಹೆಚ್ಚು ಮನುಷ್ಯರನ್ನು ಸಾಯಿಸುವ ಜೀವಿ ಎಂದರೆ ಅದು ಸೊಳ್ಳೆ ವಾರ್ಷಿಕ ಸುಮಾರು 7 ಲಕ್ಷಕ್ಕೂ ಹೆಚ್ಚು ಮಂದಿ ಸೊಳ್ಳೆಗಳಿಂದ ಹರಡುವ ಮಲೇರಿಯಾ ಡೆಂಗು ಮತ್ತು ಚಿಕನ್ ಗುನ್ಯಾ ದಂತಹ ಕಾಯಿಲೆಗಳಿಂದ ಮೃತಪಟ್ಟತ್ತಾರೆ ಗಾತ್ರದಲ್ಲಿ ಚಿಕ್ಕದಾದರೂ ಸಾವಿನ ಸಂಖ್ಯೆಯಲ್ಲಿ ಇದು ಶಾರ್ಕ್ ಅಥವಾ ಹಾವಿಗಿಂತ ನೂರು ಪಟ್ಟು ಹೆಚ್ಚು ಅಪಾಯಕಾರಿ, ಮಲಗುವಾಗ ಕಡ್ಡಾಯವಾಗಿ ಸೊಳ್ಳೆಪರದೆಗಳನ್ನು ಬಳಸಬೇಕು ಹಾಗೂ ಸೊಳ್ಳೆ ನಿಯಂತ್ರಣ ಕಿಟಕಿಗಳಿಗೆ ಜಾಲರಿ/ಮೆಸ್ಗಳನ್ನು ಅಳವಡಿಸಬೇಕು ಒಂದು ವೇಳೆ ಜ್ವರ ಅಥವಾ ಮಲೇರಿಯ ಲಕ್ಷಣಗಳಾದ ಚಳಿ ಕೂಡಿದ ಜ್ವರ ವಿಪರೀತ ಬೆವರು ಕೆ ಸ್ನಾಯು ಸೆಳೆತ ಬಿಟ್ಟು ಬಿಟ್ಟು ಬರುವ ಜ್ವರ 1 ರಿಂದ 14 ದಿನದ ಜ್ವರ ದಂತಹ ಲಕ್ಷಣಗಳು ಕಂಡುಬಂದಲ್ಲಿ ವಿಳಂಬ ಮಾಡದೆ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತವಾಗಿ ರಕ್ತಪರೀಕ್ಷೆ ಸಂಪೂರ್ಣ ಚಿಕಿತ್ಸೆ ಪಡೆಯಬೇಕು ತದನಂತರ ಪೌಷ್ಟಿಕ ಆಹಾರ ಗರ್ಭಿಣಿ ಬಾಣಂತಿಯರ ಆರೋಗ್ಯದ ಬಗ್ಗೆ ಮಾಹಿತಿ ನೀಡಲಾಯಿತು ಬಿಸಿಲಿನ ಅತಿಯಾದ ತಾಪಮಾನದಿಂದ ತಪ್ಪಿಸಿಕೊಳ್ಳಲು ಮುಂಜಾಗ್ರತಾ ಕ್ರಮಗಳನ್ನು ತಿಳಿಸಲಾಯಿತು.

ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಶಮಿನಬೇಗಂ ಕಊಅಔ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಗರ್ಭಿಣಿ ತಾಯಂದಿರು, ಸಾರ್ವಜನಿಕರು, ಉಪಸ್ಥಿತರಿದ್ದರು.




# ಇಂದು ಕುಂದುಕೊರತೆ ಸಭೆ

• **ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ**

ಅಖಂಡ ತಾಲೂಕಾ ಮಟ್ಟದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಕುಂದು ಕೊರತೆ ಸಭೆ ಹಮ್ಮಿಕೊಳ್ಳಬೇಕಾಗಿದೆ.

ಕಂದಾಯ ಉಪವಿಭಾಗಾಧಿಕಾರಿಗಳು, ಡಿವೈಎಸ್ಪಿ,ಪಿಐ, ತಾಲೂಕಾ ದಂಡಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳ ಸಹಯೋಗದಲ್ಲಿ ಜರುಗಲಿದೆ. ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಬೇಕೆಂದು ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

# ಜಿಲ್ಲಾಡಳಿತದಿಂದ ಮೇ1ರಂದು ಭಗವಾನ್ ಬುದ್ಧರ ಜಯಂತಿ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಭಗವಾನ್ ಬುದ್ಧರ 2570ನೇ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಮೇ.01ರ ಬೆಳಿಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ,

ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಸಿದ್ಧಾರ್ಥ ಬುದ್ಧ ವಿಹಾರ ಸಮಿತಿಯ ಅಧ್ಯಕ್ಷ ಆರ್.ರವಿಕುಮಾರ ರಾಂಪೂರು, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಬಾಗಿಯಾಗಲಿದ್ದಾರೆ. ರಾಯಚೂರು ತಾಲೂಕಿನ ಶಕ್ತಿನಗರದ ಕೆಪಿಸಿಎಲ್, ಪಂ.ಜಾತಿ/ ಪಂ.ವರ್ಗದ ನೌಕರರ ಸಂಘದ ಅಧ್ಯಕ್ಷ ಗೌತಮ ಕಟ್ಟಿಮನಿ ಅವರು ಭಗವಾನ್ ಬುದ್ಧರ ಜಯಂತಿ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಾರದರ್ಶಕ ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಿ: ಶಿವಾನಂದ

**ಮಲ್ಲಮ್ಮ ನುಡಿ ವಾರ್ತೆ, ರಾಯಚೂರು**

ಮೇ.3ರಂದು ರಾಯಚೂರು ನಗರದ 11 ಪರೀಕ್ಷಾ ಕೇಂದ್ರಗಳಲ್ಲಿ ನೀಟ್–ಯುಜಿ ಪರೀಕ್ಷೆ–2026 ಜರುಗಲಿದ್ದು, ಪಾರದರ್ಶಕವಾಗಿ ಹಾಗೂ ವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಏಪ್ರಿಲ್ 29ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಕಾನ್ಫರೇನ್ಸ್ ಸಭಾಂಗಣದಲ್ಲಿ ಜರುಗಿದ ನೀಟ್ ಪರೀಕ್ಷಾ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಿದ ಎಲ್ಲರೂ ಪರೀಕ್ಷಾ ಮಾರ್ಗಸೂಚಿಗಳನ್ನು ಪಾಲಿಸಬೇಕು. ನೀಟ್ ಪರೀಕ್ಷೆ ಬಹಳ ಸೂಕ್ಷ್ಮವಾಗಿದೆ. ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾರಿಗಳು, ಮಾರ್ಗಾಧಿಕಾರಿಗಳು, ವೀಕ್ಷಕರು, ಕೊಠಡಿ ಮೇಲ್ವಿಚಾರಕರು ತಮ್ಮ ಕರ್ತವ್ಯಗಳಲ್ಲಿ ಯಾವುದೇ ಲೋಪವಾಗದಂತೆ ಜವಾಬ್ದಾರಿಯಿಂದ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದರು.

ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು. ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿತಗೊಂಡ ಅಧಿಕಾರಿಗಳು, ಉಪನ್ಯಾಸಕರು ಪರೀಕ್ಷಾ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಕೊಠಡಿಯ ಒಳಗೆ ಶಿಸ್ತುಬದ್ಧವಾಗಿ ಪರೀಕ್ಷಾ ಪ್ರಾಧಿಕಾರದ ನಿಯಮಗಳ ಉಲ್ಲಂಘನೆಯಾಗದಂತೆ ಎಚ್ಚರಿಕೆಯಿಂದ ಕೆಲಸ ಮಾಡಬೇಕು ಎಂದರು.



ಎಲೆಕ್ಟ್ರಾನಿಕ್ ಉಪಕರಣಗಳ ನಿಷೇಧ: ಪರೀಕ್ಷಾರ್ಥಿಗಳು ಹಾಗೂ ಕೊಠಡಿಯ ಮೇಲ್ವಿಚಾರಕರಾಗಲಿ ಪರೀಕ್ಷಾ ಕೇಂದ್ರದೊಳಗೆ ಅತ್ಯಾಧುನಿಕ ಎಲೆಕ್ಟ್ರಾನಿಕ್ ಉಪಕರಣಗಳಾದ ಮೊಬೈಲ್, ಬ್ಲೂಟೂತ್, ಇಯರ್ ಫೋನ್‌ಗಳು, ಮೈಕ್ರೋಫೋನ್, ಕ್ಯಾಲಕ್ಯುಲೇಟರ್ ಹಾಗೂ ಗಡಿಯಾರಗಳನ್ನು ನಿಷೇಧಿಸಲಾಗಿದ್ದು, ಈ ಕುರಿತಂತೆ ಅಧಿಕಾರಿಗಳು ಎಚ್ಚರ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಿಸಿ ಟಿವಿ–ಜಾಮರ್: ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಕೆ, ಜಾಮರ್ ಹಾಗೂ ಕೊಠಡಿಯೊಳಗೆ ಗಡಿಯಾರ ಅಳವಡಿಕೆ ಕಡ್ಡಾಯವಾಗಿದೆ. ಪರೀಕ್ಷಾರ್ಥಿಗಳಿಗೆ ಶುದ್ಧ ಕುಡಿಯುವ ನೀರು, ಗಾಳಿ, ಬೆಳಕು, ಸೂಕ್ತ ಪೀಠೋಪಕರಣ ಒಳಗೊಂಡಂತೆ ಮೂಲಭೂತ ಸೌಕರ್ಯ ಒದಗಿಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳ ತಪಾಸಣಾ ಕಾರ್ಯಕ್ಕೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಬೇಕು. ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಬೇಕು ಎಂದು ರಾಯಚೂರಿನ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾರಾದ ದೀಪಾಶ್ರೀ ಅವರು ಸಭೆಗೆ ಮಾಹಿತಿ ನೀಡಿದರು.

11 ಪರೀಕ್ಷಾ ಕೇಂದ್ರಗಳು: ನೀಟ್ ಪರೀಕ್ಷೆಗೆ ಜಿಲ್ಲೆಯಲ್ಲಿ 3,744 ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಲಾಗಿದ್ದು, ರಾಯಚೂರು ನಗರದ 11 ಪರೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದೆ. ಮೇ.03ರ ಮಧ್ಯಾಹ್ನ 2 ರಿಂದ ಸಂಜೆ 5ಗಂಟೆಯವರೆಗೆ ಪರೀಕ್ಷೆ ನಡೆಯಲಿದ್ದು, ಪರೀಕ್ಷೆ ಕೇಂದ್ರಕ್ಕೆ ವಿದ್ಯಾರ್ಥಿಗಳು ಅಂದು ಬೆಳಿಗ್ಗೆ 11 ರಿಂದ 1.30ರೊಳಗಾಗಿ ಹಾಜರಾಗಬೇಕೆಂದು ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾರು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ರಾಯಚೂರು ವಿಭಾಗದ ನಿಯಂತ್ರಣಾಧಿಕಾರಿ ಚಂದ್ರಶೇಖರ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವೀರೇಶ ನಾಯಕ, ಕೇಂದ್ರೀಯ ವಿದ್ಯಾಲಯದ ಶಿಕ್ಷಕ ಪವನ ಪಾಂಡೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಪ್ಪ ಹೋಕ್ರಾಣಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕೆ.ಡಿ.ಬಡಿಗೇರ, ಯರಮರಸ್ ಆದರ್ಶ ವಿದ್ಯಾಲಯದ ಪ್ರಾಂಶುಪಾಲ ಮಹಮದ್ ಅಬ್ದುಲ್ ಯಾನಿಸಿ, ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಶ್ರೀದೇವಿ, ರಾಯಚೂರಿನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ವೆಂಕಣ್ಣ, ಉಪನ್ಯಾಸಕ ರವಿ ಮೇಸ್ತ್ರಿ ಸೇರಿದಂತೆ ವಿವಿಯ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಸಭೆಯಲ್ಲಿ ಇದ್ದರು.

# ಹಜ್ ಯಾತ್ರಿಗಳಿಗೆ ಸನ್ಮಾನ

• **ಮಲ್ಲಮ್ಮ ನುಡಿ ವಾರ್ತೆ, ಹುಣಸೂರು**

ಹಜ್ ಯಾತ್ರಿಗಳಿಗೆ ನಿಮ್ಮ ಪುಣ್ಯದ ದಿವಸಗಳನ್ನು ಯಾವ ರೀತಿ ಪ್ರಾರ್ಥನೆ ಮಾಡಬೇಕು ಹಾಗೂ ಸಮಯವನ್ನು ಇತ್ಯಾದಿ ಮಾಡದೆ ನೀವು ಸೂಕ್ಷ್ಮವಾದ ಸಮಯ ನೀಡಿ ಅಲಹಾ ನಲ್ಲಿ ವಿಶೇಷ ಪ್ರಾರ್ಥನೆಯಲ್ಲಿ ಸಲ್ಲಿಸಬೇಕೆಂದು ದಾವತೆ ಇಸ್ಲಾಮಿ ರಾಜ್ಯದ ಮುಖ್ಯಸ್ಥರಾದ ಸಲೀಂ ಅತ್ತಾರಿ ತಿಳಿಸಿದ್ದಾರೆ ನಗರ ಬಜಾರ್ ಜಾಮಿಯಾ ಮಸೀದಿಯಲ್ಲಿ ಸಮಿತಿ ವತಿಯಿಂದ ತಾಲೂಕಿನ ಹಜ್ ಯಾತ್ರಿಗಳಿಗೆ ಏರ್ಪಡಿಸಲಾಗಿದ್ದ ಹಜ್ ಯಾತ್ರಿಗಳಿಗೆ ತೆರಳುತ್ತಿರುವ ಯಾತ್ರಿಗಳಿಗೆ ಶಾಲು ಗುಲಾಬಿ ಹೂವಿನ ಹಾರ ಹೊದಿಸಿ ಹಾಗೂ ಯಾತ್ರಿಗಳಿಗೆ ವಿಶೇಷ ಧಾರ್ಮಿಕ ಪುಸ್ತಕವನ್ನು ನೀಡಿ ಸನ್ಮಾನಿಸಿ ಗೌರವಿಸಿ ಲಾಯಿತು ನಂತರ ಕಾರ್ಯಕ್ರಮದಲ್ಲಿ ಮಾತನಾಡಿಪ್ರತಿಯೊಬ್ಬರಿಗೂ ಕೂಡ ಅಲ್ಲಾನಲ್ಲಿ ಧ್ರುವ ಮಾಡಬೇಕು ನೀವು ತೆರಳುತ್ತಿರುವ ಪುಣ್ಯದ ಸ್ಥಳ ಈ ತಿಂಗಳು ಅತಿ ಹೆಚ್ಚು ತಾಪಮಾನ ಇಲ್ಲೇ ಇರುವುದರಿಂದ ಅಲ್ಲಿ ಇನ್ನೂ ಅತಿ ಹೆಚ್ಚು ತಾಪಮಾನ ಇರುತ್ತದೆ ಯಾರೂ ಕೂಡ ಹೆದರದೆ ತಮ್ಮ ಭಕ್ತಿ ಧೇಯಿಂದ ಅಲ್ಲ ನಲ್ಲಿ ಪ್ರತಿಯೊಬ್ಬರಿಗೂ ನಾಗರಿಕರಿಗೆ ದುವಾ ಮಾಡಿ ಎಂದರು.


**CITATION**

**IN THE COURT OF THE I ADDL, CIVIL JUDGE AND JMFC., AT HUMNABAD.**

CRL. MISC. No.2297/2026.

**Petitioners:**

1. Kaleykar Kishan S/o Kaleykar Eswar Rao, Age: 53-year, Occu: Agriculture.R/oManna-E-khelli,Tq.Chitguppa. Now at Kurmaguda Saidabad Charminar Hyderabad.

2. Narayan Kalekar S/o N Eshwar Rao Kalekar, Age: 47-year, Occu: Agriculture. R/o Manna-E-khelli, Tq. Chitguppa. Now at Kurmaguda Nab Chowni Saidabad Hyderabad.

3. D. Vijay laxmi D/o Iswar Rao W/o D. Vithal Rao, Age: 51-year, Occu: House hold. R/o Kurmaguda Himayathnagar Hyderabad.

4. Shobha D/o Iswar Rao, Age: 42-year, Occu: House hold. R/o Manna-E-khelli, Tq. Chitguppa. Dist. Bidar.

**Respondent:**

The Registrar of Birth and Death through The Tahasildar Chitguppa.

**Sub: Petition U/Sec. 13(3) of Birth and Death Registration Act-1969**

Whereas, the above mentioned petitioner has filed the petition under section 13(3) of Birth and Death Registration Act-1969 praying this Honorable Court to issue Death Certificate of Mother of petitioner No.1 to 4 Deceased by namely LATE. SHANTA BAI W/O ISHWAR RAO KALEKAR, she was died on 14.09.2019 at Manna-E-khelli. Tq. Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 29.05.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 24-04-2026.

**By order of the court**

Chief Ministerial Officer,

Prl. Civil Judge & JMFC Court,

Humnabad.



**CITATION**

**IN THE COURT OF THE PRL, CIVIL JUDGE AND JMFC., AT HUMNABAD.**

CRL. MISC. No.2292/2026.

**Petitioners:**

Mahadevi W/o Baburao. Age: 60-year, Occu: House hold. All R/o Village Dubalgundi, Tq. Humnabad. Dist. Bidar.

**Respondent:**

The Registrar of Birth and Death through The Tahasildar Humnabad.

**Sub: Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Mother in law of Petitioner by namely LATE. SUNDRAMMA W/O LATE. SHRIPATI, who was died on 11.09.2021 at Village Dubalgundi. Tq. Humnabad. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 02.06.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 24-04-2026

**By order of the court**

**Chief Ministerial Officer,**

**Prl. Civil Judge & JMFC Court,**

**Humnabad.**


# ಪರಿಹಾರ ನೀಡದ ಸಾರಿಗೆ ಇಲಾಖೆ: ಬಸ್‌ಗಳ ಜಪ್ತಿ

ಮಲ್ಲಮ್ಮನುಡಿವಾರ್ತೆ,ವಿಜಯನಗರ

ಪರಿಹಾರನೀಡದಿರುವಹಿನ್ನಲೆಯಲ್ಲಿ , ಸಾರಿಗೆ ಇಲಾಖೆಯ 2 ಬಸ್ ಗಳ ಜಪ್ತಿಮಾಡಿರುವಘಟನೆಪಟ್ಟಣದಲ್ಲಿ ಜರುಗಿದೆ. ಕಳೆದ 2019ರಲ್ಲಿ , ಸಾರಿಗೆ ಇಲಾಖೆಯ ಕೊಪ್ಪಳ ಡಿಪೋಗೆ ಸೇರಿದ ಬಸ್ , ಹಾಗೂ ಆಟೋ ನಡುವೆ ಜರುಗಿದ್ದ ಅಪಘಾತದಲ್ಲಿ. ಆಟೋದಲ್ಲಿ ಪ್ರಯಣಿಸುತ್ತಿದ್ದ , ನಾಗಪ್ಪ(50) ಮತ್ತು ನಾಗಮ್ಮ(24) ಇಬ್ಬರು ಪ್ರಯಾಣಿಕರು ತೀವ್ರ ಗಾಯಗೊಂಡುಮೃತಪಟ್ಟಿದ್ದರು.ಮೃತರ ಕುಟುಂಬದವರು ಸೂಕ್ತಪರಿಹಾರಕ್ಕಾಗಿ , ಕೂಡ್ಲಿಗಿ ನ್ಯಾಯಾಲಯದಲ್ಲಿ ಮನವಿ ಮಾಡಿದ್ದರು. ಕೂಡ್ಲಿಗಿ ಹಿರಿಯ ಶ್ರೇಣಿ

ನ್ಯಾಯಾಲಯವು,ನೊಂದಮೃತರ ಕುಟುಂಬಸ್ಥರ ಪರ ವಕೀಲರಾದ ಜಿ.ಸೀತಾರಾಮ್ ಗೌಡ ರವರ ಮನವಿಯನ್ನು ಪುರಸ್ಕರಿಸಿದ್ದು. ಓರ್ವ ಕುಟುಂಬಕ್ಕೆ 12ಲಕ್ಷ ರೂ , ಮತ್ತೋರ್ವ ಕುಟುಂಬಕ್ಕೆ 20 ಲಕ್ಷ ರೂಗಳನ್ನು. ಮೃತರ ಕುಟುಂಬಕ್ಕೆ ಪರಿಹಾರವಾಗಿ , ನಗದು ಹಣ ನೀಡುವಂತೆ. ಸಾರಿಗೆ ಇಲಾಖೆಯ ಕೊಪ್ಪಳ ಡಿಪೋ ಘಟಕಕ್ಕೆ , ಈ ಹಿಂದೆಯೇ ಆದೇಶಿಸಿದ್ದು. ಈವರೆಗೂ ಸಾರಿಗೆ ಇಲಾಖೆ , ನೊಂದ ಕುಟುಂಬಕ್ಕೆ ಪರಿಹಾರ ನೀಡುವಲ್ಲಿ ವಿನಾಕಾರಣ ಅತಿಯಾದ ವಿಳಂಬ



ನೀತಿ ತೋರಿದ್ದರ ಹಿನ್ನಲೆಯಲ್ಲಿ.

ಕಕ್ಷಿದಾರರ ಪರ ವಕೀಲರಾದ ಜಿ. ಸೀತಾರಾಮ್ ಗೌಡ ರವರು , ನ್ಯಾಯಾಲಯದಲ್ಲಿ ಸಾರಿಗೆ ಇಲಾಖೆಯ ಅನಗತ್ಯ ವಿಳಂಬ ನೀತಿಯನ್ನು ಖಂಡಿಸಿದ್ದು.

ನೊಂದಕುಟುಂಬಗಳಿಗೆತುರ್ತಾಗಿ ಪರಿಹಾರ ನೀಡುವಂತೆ ಕ್ರಮಕ್ಕಾಗಿ , ನ್ಯಾಯಾಲಯದಲ್ಲಿ ಕಕ್ಷಿದಾರರ ಪರ ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ. ಕೂಡ್ಲಿಗಿಹಿರಿಯಶ್ರೇಣಿನ್ಯಾಯಾಧೀಶರು , ಸಾರಿಗೆ ಇಲಾಖೆಯ ಕೊಪ್ಪಳ ಡಿಪೋದ 2 ಬಸ್ ಗಳನ್ನು ಜಪ್ತಿ ಮಾಡುವಂತೆ ಆದೇಶಿಸಿದ್ದಾರೆ. ನ್ಯಾಯಾಧೀಶರ ಆದೇಶದನ್ವಯ ,ನ್ಯಾಯಾಲಯದ ಸಿಬ್ಬಂದಿಯವರು ಕರ್ಥವ್ಯ ನಿರ್ವಹಿಸಿದ್ದಾರೆ.

ಎಪ್ರಿಲ್ 28 ರಂದು ಬೆಳಿಗ್ಗೆ ಎಂದಿನಂತೆ ಸಾರಿಗೆ ಇಲಾಖೆ ಕೊಪ್ಪಳ ಡಿಪೋದ ಬಸ್ ಗಳು , ಕೂಡ್ಲಿಗಿ ಬಸ್ ನಿಲ್ದಾಣ-ಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ. ಕೂಡ್ಲಿಗಿ ಬಸ್ ನಿಲ್ದಾಣದಿಂದ ಕೂಡ್ಲಿಗಿ ನ್ಯಾಯಾಲಯಕ್ಕೆ ಕರೆತರುವ ಮೂಲಕ , ನ್ಯಾಯಾಲಯದ ಆದೇಶದಂತೆ ಎರೆಡು ಬಸ್ ಗಳನ್ನು ನ್ಯಾಯಾಲಯದ ಅಮೀನ್ ಸಿಬ್ಬಂದಿಯವರಾದ ವಿ.ಚನ್ನಪ್ಪ ಹಾಗೂ ಎನ್ ವಿ ಪರಮೇಶ್ವರ ವರು ಜಪ್ತಿ ಮಾಡಿದ್ದಾರೆ.

ಈಸಂದರ್ಭದಲ್ಲಿ,ನ್ಯಾಯಾಲಯದ ಕಕ್ಷಿದಾರರಾದ ಶಿವಪುರ ಗ್ರಾಮದ ಸತ್ಯಮ್ಮ ಹಾಗೂ ಕೊಟ್ರಮ್ಮ. ಕಕ್ಷಿದಾರರ ಪರ ವಕೀಲರಾದ ಸಿತಾರಾಮ್ ಹಾಗೂ ಸಹಪಾಟಿ ವಕೀಲರಾದ ಖಲಂಧರ್ ಮತ್ತು ನ್ಯಾಯಾಲಯದ ಅಮೀನ್ ಸಿಬ್ಬಂದಿಯವರಾದ ಎನ್ ವಿ ಪರಮೇಶ್ವರ ▯▯ಗೂ ವಿ.ಚನ್ನಪ್ಪ ಇದ್ದರು.

# ನಾಗರಾಜ್ ಅವರ ಮಾಲೀಕತ್ವದ ಸರೋವರ ರೆಸಾರ್ಟ್ ಶುಭಾರಂಭ

• **ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ**

ನಗರದ ಹೊರವಲಯದಲ್ಲಿ ಅಂಕಣಗೊಂದಿ ಸಮೀಪ ನೂತನವಾಗಿ ನಿರ್ಮಾಣಗೊಂಡಿರುವ "ಸರೋವರ ರೆಸಾರ್ಟ್" ಬುಧವಾರ ಭರ್ಜ-ರಿಯಾಗಿ ಶುಭಾರಂಭಗೊಂಡಿತು. ನಗರಸಭೆಯ ಮಾಜಿ ಉಪಾಧ್ಯಕ್ಷ ಜೆ.ನಾಗರಾಜ್ ಅವರ ಮಾಲೀಕತ್ವದ ಈ ರೆಸಾರ್ಟ್,ಇಷಾ ಫೌಂಡೇಶನ್ ಸಮೀಪದಲ್ಲಿರುವುದರಿಂದ ಪ್ರವಾಸಿಗರಿಗೆ ಆಕರ್ಷಕ ತಾಣವಾಗಲಿದೆ.ಬಿಡುವಿನ ದಿನಗಳಲ್ಲಿ ಚಿಕ್ಕಬಳ್ಳಾಪುರಕ್ಕೆ ಆಗಮಿಸುವ ಪ್ರವಾಸಿಗರು ಹಾಗೂ ವಿವಿಧ ಶುಭ ಸಮಾರಂಭಗಳನ್ನು ಆಯೋಜಿಸಲು ಈ ರೆಸಾರ್ಟ್ ಉತ್ತಮ ಆಯ್ಕೆಯಾಗಲಿದೆ ಎಂದು ಮಾಲೀಕ ಜೆ. ನಾಗರಾಜ್ ತಿಳಿಸಿದ್ದಾರೆ.

ಶುಭಾರಂಭ ಕಾರ್ಯಕ್ರಮದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು,ಸಮಾಜಸೇವಕರು,ನಾಗರಾಜ್ ಅವರ ವಾರ್ಡ್ ನಿವಾಸಿಗಳು ಹಾಗೂ ಸ್ನೇಹಿತರು ಭಾಗವಹಿಸಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೆ.ನಾಗರಾಜ್,ಇಷಾ ಫೌಂಡೇಶನ್ ಸಮೀಪದಲ್ಲಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗಿದ್ದು,ಇಲ್ಲಿ ತಂಗಲು ಉತ್ತಮ ವಾತಾವರಣದೊಂದಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದರು.ಹುಟ್ಟುಹಬ್ಬ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಮತ್ತು ಇವೆಂಟ್ಸ್‌ಗಳನ್ನು ಇಲ್ಲಿ ಆಯೋಜಿಸಲು ಅವಕಾಶವಿದ್ದು,ರೆಸಾರ್ಟ್‌ನಲ್ಲಿ ಎಸಿ ಸೇರಿದಂತೆ ಎಲ್ಲಾ ಸೌಲಭ್ಯಗಳಿರುವ ಏಳು ಕೋಣೆಗಳು ಲಭ್ಯವಿವೆ ಎಂದು ಹೇಳಿದರು.ಇದಲ್ಲದೆ,ರಿಸೆಪ್ಶನ್ ಹಾಲ್ ಹಾಗೂ ಡೈನಿಂಗ್ ಹಾಲ್ ವ್ಯವಸ್ಥೆಯೂ ಇದ್ದು,ಕೈಗೆಟುಕುವ ದರದಲ್ಲಿ ಸೇವೆಗಳು ಲಭ್ಯವಿವೆ ಎಂದರು 24 ಗಂಟೆಗಳ ವಿದ್ಯುತ್ ಸಂಪರ್ಕದೊಂದಿಗೆ ಜನರೇಟರ್ ಸೌಲಭ್ಯವೂ ಇರುವುದರಿಂದ,ಕುಟುಂಬ ಸಮೇತವಾಗಿ ಬಂದು ವಿಶ್ರಾಂತಿ ಪಡೆಯಲು ಅನುಕೂಲಕರವಾಗಿದೆ ಎಂದು ಮಾಹಿತಿ ನೀಡಿದರು.




# ಕೆಎಸ್‌ಪಿಎಲ್: ಉತ್ತಮ ಫಲಿತಾಂಶ



• **ಮಲ್ಲಮ್ಮ ನುಡಿ ವಾರ್ತೆ, ವಿಜಯನಗರ**

ಕೆಎಸ್‌ಪಿಎಲ್ ಶಾಲೆಯ ವಿದ್ಯಾರ್ಥಿಗಳು ಈ ವರ್ಷ ಖ.ಖ.ಐ.ಅ ಪರೀಕ್ಷೆಯಲ್ಲಿ ಈ ಅದ್ಭುತ ಸಾಧನೆ ಮತ್ತು ವಿದ್ಯಾರ್ಥಿಗಳ ಪರಿಶ್ರಮ,ಶ್ರದ್ಧೆ,ಮತ್ತುದೃಢ ನಿಶ್ಚಯದ ಪ್ರತಿಫಲ,ಶಿಕ್ಷಕರ ಸಮರ್ಪಿತ ಸೇವೆ ಹಾಗೂ ಪೋಷಕರ ಬೆಂಬಲದಿಂದ ಸಾಧ್ಯವಾಗಿದೆ.

ಫಲಿತಾಂಶದ ಬಗ್ಗೆ ಕೆಎಸ್‌ಪಿಎಲ್ ಸಂಸ್ಥೆಯ ಕಾರ್ಯದರ್ಶಿಗಳು ಶ್ರೀಮತಿ ಖಃ ಕೃಷ್ಣ ಕುಮಾರಿ . ಅವರು ತಮ್ಮ ಸಂತಸವನ್ನು ವ್ಯಕ್ತಪಡಿಸುತ್ತಾ,ಪರೀಕ್ಷೆಯಲ್ಲಿ ಪಾಸಾದ ಎಲ್ಲಾ ವಿದ್ಯಾರ್ಥಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು. ನಿಮ್ಮ ಪರಿಶ್ರಮದಿಂದ ಈ ಶ್ರೇಷ್ಠ ಸಾಧನೆ ಸಾಧ್ಯವಾಗಿದೆ.ಈ ಯಶಸ್ಸು ನಿಮ್ಮ ಮುಂದಿನ ಜೀವನದಲ್ಲಿ ಇನ್ನಷ್ಟು ಸಾಧನೆಗಳಿಗೆ ದಾರಿ ಆಗಲಿ ಎಂದು ಹೇಳಿದರು.ಈ ಸಂದರ್ಭದಲ್ಲಿ ಅಹಿಂದ ಯುವ ವೇದಿಕೆಯಿಂದ ಶ್ರೀಮತಿ ಖ.ಃ.ಕೃಷ್ಣ ಕುಮಾರಿ ಮೇಡಮ್.ಅವರಿಗೆ ಸನ್ಮಾನ ಮಾಡಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಅಹಿಂದ ಯುವ ವೇದಿಕೆಯ ಅಧ್ಯಕ್ಷರಾದ ಕುಬೇರ ದಲ್ಲಾಲಿ ಅವರು ಮಾತನಾಡಿ

ಎಲ್ಲಾ ಮಕ್ಕಳಿಗೆ ಶಿಕ್ಷಣ ಬಹಳ ಮುಖ್ಯ. ಇದು ಪ್ರತಿಯೊಬ್ಬರ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಕ್ಷಣವು ಜೀವನದ ಮೂಲಭೂತಅಂಶಗಳನ್ನುಪಡೆಯಲು ನಮಗೆ ಒಂದು ವೇದಿಕೆಯನ್ನು ಒದಗಿಸುತ್ತದೆ. ಶಿಕ್ಷಣವನ್ನುಪಡೆಯಲು ಶಾಲೆಯು ಮೊದಲ ಹೆಜ್ಜೆಯಾಗಿದೆ. ವಿವಿಧ ವಿಷಯಗಳನ್ನು ಕಲಿಯಲು ಹೋಗುವ ವಿದ್ಯಾರ್ಥಿಗಳಿಗೆ ಇದು ಎರಡನೇ ಮನೆಯಂತಿದೆ. ಶಾಲೆಯಲ್ಲಿ ಶಿಕ್ಷಕರು ತಮ್ಮ ಒಳಿತನ್ನು ಬಯಸುವ ಸ್ನೇಹಿತರಂತೆ. ಅವರು ನಮಗೆ ಜೀವನದ ಮೌಲ್ಯಗಳು ಮತ್ತು ತತ್ವಗಳನ್ನು ಕಲಿಸುತ್ತಾರೆ. ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಎಲ್ಲಾ ರೀತಿಯ ಶೈಕ್ಷಣಿಕ ಮತ್ತು ಪಠ್ಯೇತರ ಸೌಲಭ್ಯಗಳನ್ನು ನಿರ್ವಹಿಸಬೇಕು. ಮತ್ತು ಕೆ.ಎಸ್.ಪಿ.ಎಲ್ ಶಾಲೆಯ ಕಾರ್ಯದರ್ಶಿಗಳಿಗೂ ಮತ್ತು ಎಲ್ಲಾ ಶಿಕ್ಷಕರಿಗೆ ವಂದನೆಗಳನ್ನು ಸಲ್ಲಿಸಿದರು.ಈ ಸಂದರ್ಭದಲ್ಲಿ.

ಅಹಿಂದ.ತಾಲೂಕು ಉಪಾಧ್ಯಕ್ಷರಾದ ಕೆ. ಪಂಪಣ್ಣ. ಸ್ನೇಹ ಬಳಗ ತಾಲೂಕ ಅಧ್ಯಕ್ಷರಾದ.ಗಂಟೆ ಮಾರುತೇಶ. ಅಹಿಂದ.ತಾಲೂಕು ಉಪಾಧ್ಯಕ್ಷರಾದ ಕೇಶವ.ಅಹಿಂದ ತಾಲೂಕು ಖಜಾಂಚಿ. ದಮ್ಮೂರ್ ಮಂಜುನಾಥ್.ಅಹಿಂದ.7ನೇ ವಾರ್ಡ್ ಘಟಕದ ಅಧ್ಯಕ್ಷರಾದ. ಮೇಘರಾಜ್.ನಾಗೇನಹಳ್ಳಿ.

ಅಹಿಂದ ಗ್ರಾಮ ಘಟಕದ ಅಧ್ಯಕ್ಷರಾದ ನೂರ್ ಭಾಷಾ. ದಲ್ಲಾಲಿ ರಾಮಚಂದ್ರ.ದಲ್ಲಾಲಿ ಮಹೇಶ್. ಪವನ್ ಕುಮಾರ್. ಚೌಕಿ.ಶೇಖರ್ ಕೆ. ಲೋಕೇಶ್. ಕೆ ಮಂಜುನಾಥ್ ಈ ಸಂದರ್ಭದಲ್ಲಿ ಇನ್ನಿತರಿದ್ದರು.

# ನೋಂದಣಿ ಇಲ್ಲದೆ ಕ್ಲಿನಿಕ್ ಆರಂಭಿಸಿದರೆ ದಂಡ: ಜಿಲ್ಲಾಧಿಕಾರಿ

• **ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ**

ವೈದ್ಯಕೀಯ ಪದವಿ ಪಡೆದ ನಂತರ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳದೇ ಕ್ಲಿನಿಕ್ ಅಥವಾ ಆಸ್ಪತ್ರೆಗಳನ್ನು ಆರಂಭಿಸುವ ವೈದ್ಯರ ವಿರುದ್ಧ ಕಟ್ಟುನಿಟ್ಟಿನಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ಮಂಗಳವಾರ ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಜಿಲ್ಲಾನೋಂದಣಿ ಮತ್ತು ಕುಂದುಕೊರತೆಗಳ ಸಭೆ'ಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ನೋಂದಣಿ ಕಡ್ಡಾಯ, ಉಲ್ಲಂಘಿಸಿದರೆ ದಂಡ:**

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ 2007 ಮತ್ತು 2009ರ ತಿದ್ದುಪಡಿ ನಿಯಮಗಳ ಪ್ರಕಾರ, ಯಾವುದೇ ವೈದ್ಯರು ಕ್ಲಿನಿಕ್, ಪಾಲಿ ಕ್ಲಿನಿಕ್, ನರ್ಸಿಂಗ್ ಹೋಮ್ ಅಥವಾ ಪ್ರಯೋಗಾಲಯಗಳನ್ನುಆರಂಭಿಸುವ ಮೊದಲು ಜಿಲ್ಲಾಧಿಕಾರಿಗಳಿಂದ ಕಡ್ಡಾಯವಾಗಿಕೆ.ಪಿ.ಎಂ.ಇನೋಂದಣಿ ಪ್ರಮಾಣಪತ್ರಪಡೆಯಬೇಕು.ನೋಂದಣಿ



ಮಾಡಿಕೊಳ್ಳದೆ ಅಥವಾ ನವೀಕರಣ ಮಾಡದೆ ಸಂಸ್ಥೆ ನಡೆಸುತ್ತಿದ್ದರೆ, ಅಂತಹ ಕೇಂದ್ರಗಳಿಗೆ ಪ್ರತಿ ವರ್ಷಕ್ಕೆ 25,000 ರೂ.ಗಳಂತೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಸಿದ ಅವರು, ಕಾಯ್ದೆಯ ಕಲಂ 19, 20, 21 ಹಾಗೂ 22 ರಡಿ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

*ನಕಲಿವೈದ್ಯರವಿರುದ್ಧಎಫ್‌ಐಆರ್:*

ಜಿಲ್ಲೆಯಲ್ಲಿ ಅಧಿಕೃತ ವೈದ್ಯಕೀಯ ಪದವಿ ಇಲ್ಲದೆ ಸಾರ್ವಜನಿಕರ ಆರೋಗ್ಯದೊಂದಿಗೆ ಚೆಲ್ಲಾಟವಾಡುವ ನಕಲಿ ವೈದ್ಯರ ಮೇಲೆ ತೀವ್ರ ನಿಗಾ ಇರಿಸಲಾಗಿದೆ. ಅಂತಹವರ ವಿರುದ್ಧ ನೇರವಾಗಿ ಎಫ್.ಐ.ಆರ್ ದಾಖಲಿಸಬೇಕು ಎಂದು ಆರೋಗ್ಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

*ಕಟ್ಟಡ ಮಾಲೀಕರಿಗೆ ಸೂಚನೆ:*

ತಮ್ಮ ಮನೆ ಅಥವಾ ಮಳಿಗೆಗಳನ್ನು ಆಸ್ಪತ್ರೆ, ಕ್ಲಿನಿಕ್ ಅಥವಾ ಲ್ಯಾಬ್‌ಗಳಿಗೆ ಬಾಡಿಗೆ ನೀಡುವ ಮುನ್ನ ಮಾಲೀಕರು ಎಚ್ಚರಿಕೆ ವಹಿಸಬೇಕು. ಬಾಡಿಗೆದಾರರ ಅಧಿಕೃತ ವೈದ್ಯಕೀಯ ಪ್ರಮಾಣಪತ್ರಗಳನ್ನು ಪರಿಶೀಲಿಸಿದ ನಂತರವೇ ಬಾಡಿಗೆ ಒಪ್ಪಂದ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲೆಯ ಆರೋಗ್ಯ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಮತ್ತು ಸಾರ್ವಜನಿಕರಿಗೆ ಗುಣಮಟ್ಟದ ಚಿಕಿತ್ಸೆ ಖಾತ್ರಿಪಡಿಸಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾರಮೇಶ್ ಬಾಬು ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕು ಆರೋಗ್ಯ ಅಧಿಕಾರಿಗಳು, ನೋಂದಣಿ ಮತ್ತು ಕುಂದು ಕೊರತೆ ಪರಿಹಾರ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

# ಮಾದಕ ವಸ್ತು ಸೇವನೆ, ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸಿ: ಡಿಸಿ

• **ಮಲ್ಲಮ್ಮ ನುಡಿ ವಾರ್ತೆ, ವಿಜಯಪುರ**

ಯುವ ಜನಾಂಗ ದುಶ್ಚಟಗಳಿಗೆ ಬಲಿಯಾಗದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಮಾದಕವ್ಯಸನದಿಂದಾಗುವ ದುಷ್ಪರಿಣಾಮಗಳ ಕುರಿತು ವ್ಯಾಪಕವಾಗಿ ಜಾಗೃತಿ ಮೂಡಿಸಲು ಇಲಾಖಾಧಿಕಾರಿಗಳು ಸಮನ್ವಯತೆ ಹಾಗೂ ಸಹಕಾರದಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಸೂಚನೆ ನೀಡಿದರು....

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಮಾದಕ ವಸ್ತು ನಿಯಂತ್ರಣ ಕುರಿತ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು ಮಾತನಾಡಿದರು. ಜಿಲ್ಲೆಯ ಎಲ್ಲಾ ವಸತಿ ನಿಲಯಗಳ ಮೇಲೆ ನಿಗಾ ವಹಿಸಬೇಕು. ಶೈಕ್ಷಣಿಕ ಅವಧಿ ಮುಗಿದ ನಂತರ ಮಾದಕ ವಸ್ತು ನಿಯಂತ್ರಣ ಕುರಿತ ಅಭಿಯಾನ ಜಾಗೃತಿ ಹಮ್ಮಿಕೊಳ್ಳಬೇಕು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಖಾಸಗಿ ಹಾಗೂ ಸರ್ಕಾರಿ ಶಾಲೆ ಸೇರಿದಂತೆ ಎಲ್ಲಾ ಶಾಲೆಗಳಲ್ಲಿ ಮಾದಕ ವಸ್ತು ನಿಯಂತ್ರಣ ಕೋಶ ರಚಿಸಿಕೊಳ್ಳಬೇಕು ಶಾಲಾ ಮಕ್ಕಳಿಂದ ಒಂದು ಸಮಿತಿ ರಚಿಸಿ ಮಕ್ಕಳಿಂದ ಕಾರ್ಯಕ್ರಮ ಮಾಡಿಸಿ. ಹಾಸ್ಟೆಲ್ ಕಮಿಟಿ, ಕ್ರೀಡಾ ಮತ್ತು ಸಾಂಸ್ಕೃತಿಕ ಸಮಿತಿ ಮಾದರಿಯಲ್ಲಿ ಮಾದಕ ವಸ್ತು ನಿಯಂತ್ರಣ ಕುರಿತ ಸಮಿತಿ ರಚಿಸಿಕೊಂಡು ವ್ಯಾಪಕ ತಿಳಿವಳಿಕೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು. ಮಾದಕ ವಸ್ತು ನಿಯಂತ್ರಣ ಸಮಿತಿಯು ಆಗಾಗ ಸಭೆ ಸೇರಿ ಜಾಗೃತಿ ಮೂಡಿಸಬೇಕು. ಮಾದಕ ವಸ್ತು ನಿಯಂತ್ರಣದ ಬಗ್ಗೆಯೂ ವ್ಯಾಪಕ ಪ್ರಚಾರ ಮಾಡಿ ಸಾರ್ವಜನಿಕರಿಗೆ ಈ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

ಮಕ್ಕಳು,ಮನೆಯನೆರೆಹೊರೆಯವರಿಗೂ ತಿಳಿಸುವಂತಾಗಬೇಕು ಎಂದರು. ಇನ್ನೊಂದೆಡೆ ಸಾಮಾಜಿಕ ಮಾಧ್ಯಮಗಳನ್ನು ಸಾಕಷ್ಟು ಬಳಸಿಕೊಂಡು ವ್ಯಾಪಕ ಪ್ರಚಾರ ಮಾಡಬೇಕು. ಸ್ಕಿಟ್, ನಾಟಕ ಮೂಲಕ ಜಾಗೃತಿ ಮೂಡಿಸುವ ಕ್ರಮಕ್ಕೆ ಸೂಚಿಸಲಾಯಿತು. ಆರೋಗ್ಯ ಇಲಾಖೆಯ ಆರೋಗ್ಯ ಕೇಂದ್ರಗಳಲ್ಲಿ ಕೈಗೊಂಡು, ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳು ಹಾಗೂ ಪರಿಣಾಮಗಳ ಬಗ್ಗೆ ತಿಳಿಸಿಕೊಡಬೇಕು ಎಂದು ಜಿಲ್ಲಾಧಿಕಾರಿಗಳು ಸಲಹೆ ಮಾಡಿದರು.ವಿವಿಧ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ:ಮಾದಕ ದ್ರವ್ಯಗಳ ನಿಯಂತ್ರಣ ಕೇವಲ ಪೊಲೀಸರಿಗೆ ಸೀಮಿತವಾಗದೆ,ಎಲ್ಲ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡುವಂತೆ ಸಮಿತಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಇನ್ನು ಅರಣ್ಯ ಪ್ರದೇಶಗಳಲ್ಲಿ ಗಾಂಜಾ ಬೆಳೆಯುವ ಸಾಧ್ಯತೆ



ಇರುವುದರಿಂದ, ಇಂತಹ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಲು ಸೂಚಿಸಲಾಗಿದೆ.

ಆರೋಗ್ಯ ಮತ್ತು ಶಿಕ್ಷಣ ಇಲಾಖೆ :* ಶಾಲಾ-ಕಾಲೇಜುಗಳಲ್ಲಿ ಮಾದಕ ದ್ರವ್ಯ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

*ಔಷಧ ನಿಯಂತ್ರಣ ಇಲಾಖೆ:* ವೈದ್ಯರ ಚೀಟಿ ಇಲ್ಲದೆ ಮಾದಕ ಅಂಶವಿರುವ ಔಷಧಗಳನ್ನು ಮಾರಾಟ ಮಾಡುವ ಮೆಡಿಕಲ್ ಶಾಪ್ ಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ ಎಂದರು ತಿಳಿಸಿದರು.

*ಅಬಕಾರಿ ಇಲಾಖೆ:* ಅಕ್ರಮವಾಗಿ ಮಾದಕ ದ್ರವ್ಯ ಮಾರಾಟ ಅಥವಾ ಸಂಗ್ರಹದ ಬಗ್ಗೆ ಮಾಹಿತಿ ದೊರೆತ ಕೂಡಲೇ ಪೊಲೀಸ್ ಇಲಾಖೆಗೆ ವರದಿ ಮಾಡುವಂತೆ ಅಬಕಾರಿ ಇಲಾಖೆಗೆ ತಿಳಿಸಲಾಗಿದೆ ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ಸಭೆಗೆ ವಿವರಿಸಿದರು. ಮಾದಕ ವಸ್ತು ಸೇವನೆಯ ವ್ಯಸನದಿಂದಾಗುವ ದುಷ್ಪರಿಣಾಮಗಳ ಕುರಿತ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಮಾದಕ ವ್ಯಸನಕ್ಕೆ ಒಳಗಾಗಿ ತಮ್ಮ ಸುಂದರ ಬದುಕನ್ನು ಹಾಳು ಮಾಡಿಕೊಳ್ಳದಂತೆ ಮಾದಕ ವಸ್ತು-ದ್ರವ್ಯಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಸೂಕ್ತ ತಿಳುವಳಿಕೆ-ಜಾಗೃತಿ ಮೂಡಿಸಬೇಕು. ಶಾಲೆ-ಕಾಲೇಜುಗಳಲ್ಲಿ,ವಿದ್ಯಾರ್ಥಿ ನಿಲಯಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾಗೃತಿ-ಅರಿವು ಮೂಡಿಸುವುದಲ್ಲದೇ ವಿದ್ಯಾರ್ಥಿಗಳು ತಮ್ಮ ನೆರೆ-ಹೊರೆಯವರಿಗೆ ತಿಳಿಸಿಕೊಡುವಂತೆ ಪ್ರೇರೆಪಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಅವರು ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಗಾಂಜಾ ಸೇರಿದಂತೆ ಮಾದಕ ವಸ್ತುಗಳ ಬೆಳೆ ಬೆಳೆಯದಂತೆ ಕಾನೂನು ಅರಿವು, ಜಾಗೃತಿ ಮೂಡಿಸಬೇಕು. ಬಾರ್ ರೆಸ್ಟೋರೆಂಟ್ ಆವರಣದಲ್ಲಿ ಸೂಚನಾ ಫಲಕಗಳನ್ನು ಪ್ರದರ್ಶಿಸುವಂತೆ ನೋಡಿಕೊಳ್ಳಬೇಕು. ಈ ಬಗ್ಗೆ ನಿರಂತರವಾಗಿ ಪರಿಶೀಲನೆ ನಡೆಸುವಂತೆ ಅವರು ಸೂಚನೆ ನೀಡಿದರು. ಜಿಲ್ಲಾ ಮಟ್ಟದ ಮಾದಕ ದ್ರವ್ಯಗಳ ಹಾವಳಿ ನಿಯಂತ್ರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದು,ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ನಾರ್ಕೋ ಕೋ-ಆರ್ಡಿನೇಷನ್ ಸೆಂಟರ್ ಸಮಿತಿಯು ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ನಡೆದ ಮಾದಕ ದ್ರವ್ಯ ಜಪ್ತಿ ಮತ್ತು ಕಾನೂನು ಕ್ರಮಗಳ ಬಗ್ಗೆ ಜಿಲ್ಲೆಯಾದ್ಯಂತ ಎನ್.ಡಿ.ಪಿ.ಎಸ್. ಕಾಯ್ದೆಯಡಿ ಹಲವು ಪ್ರಕರಣಗಳನ್ನು ದಾಖಲಿಸಲಾಗಿದೆ.

ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ 13 ಪ್ರಕರಣಗಳು ದಾಖಲಾಗಿದ್ದು, ಸುಮಾರು 9 ಕೆ.ಜಿ. 532 ಗ್ರಾಂ ಗಾಂಜಾವನ್ನು ಪೊಲೀಸರು ವಶಕ್ಕೆ ಪಡೆಯಲಾಗಿದ್ದು ಕೋಟ್ಪಾ ಕಾಯ್ದೆ ಪರಿಣಾಮಕಾರಿ ಜಾರಿಗೆ

**ಕಟ್ಟುನಿಟ್ಟಿನ ಸೂಚನೆ**

ಜಿಲ್ಲೆಯಾದ್ಯಂತ ಇರುವ ಶಾಲಾ-ಕಾಲೇಜ್ ಆವರಣದ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ತಂಬಾಕು ಉತ್ಪನ್ನಗಳ ಮಾರಾಟವಾಗದಂತೆ ನಿಗಾವಹಿಸಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಆನಂದ.ಕೆ ಸೂಚನೆ ನೀಡಿದರು. ಶಾಲೆಯ ಮುಖ್ಯೋಪಾಧ್ಯಾಯರು ಸೇರಿದಂತೆ ಶಾಲಾ ಅಭಿವೃದ್ಧಿ ಸಮಿತಿಯವರು ಕೊಟ್ಪಾ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡು, ಅರಿವು ಮೂಡಿಸಬೇಕು. ತಂಬಾಕು ಉತ್ಪನ್ನಗಳ ಉಪಯೋಗದಿಂದ ದುಷ್ಪರಿಣಾಮ ಹಾಗೂ ಕಾಯ್ದೆಯ ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಅವರು ಸೂಚನೆ ನೀಡಿದರು. ಶಾಲಾ ಸಮಿತಿಯೊಂದಿಗೆ ಸಭೆ ನಡೆಸಿ ಸಭೆಯ ನಡಾವಳಿಯೊಂದಿಗೆ ಸಲ್ಲಿಸುವಂತೆ ಸೂಚನೆ ನೀಡಲಾಯಿತು.

# ಶ್ರೀ ಉಡುಸಲಮ್ಮ ದೇವಿಯ ಗೋಪುರ ನಿರ್ಮಾಣಕ್ಕೆ ಪೂಜೆ ಸಲ್ಲಿಸಿದ ರೆಡ್ಡಿ



• ಮಲ್ಲಮ್ಮ ನುಡಿ ವಾರ್ತೆ, ಬಳ್ಳಾರಿ

ನಾನು, ನಮ್ಮ ಕುಟುಂಬದ ಮೇಲೆ ಶ್ರೀ ಉಡುಸಲಮ್ಮ ದೇವಿಯ ಆಶೀರ್ವಾದ ಹಾಗೂ ಬಾದನಹಟ್ಟಿಯ ಜನರ ಆಶೀರ್ವಾದ ಹೀಗೆ ಇರಲಿ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಬುಧವಾರ ಕಂಪ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಾದನಹಟ್ಟಿಯಲ್ಲಿ ಮರು ನಿರ್ಮಾಣಗೊಂಡ ಶ್ರೀ ಉಡುಸಲಮ್ಮ ದೇವಿ ದೇವಸ್ಥಾನದ ಗೋಪುರಗಳ ಉದ್ಘಾಟನೆ ಹಾಗೂ ಪೂಜೆಯಲ್ಲಿ ಭಾಗವಹಿಸಿದ ನಂತರ ಸಾರ್ವಜನಿಕರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ನಮ್ಮ ತಂದೆ ಸೂರ್ಯನಾರಾಯಣ ರೆಡ್ಡಿಯವರು ಖಾಲಿ ಕೈಯಲ್ಲಿ ಇಲ್ಲಿಗೆ ಬಂದಾಗ ಬಾದನಹಟ್ಟಿಯ ಶ್ರೀ ಉಡುಸಲಮ್ಮ, ಕುರುಗೋಡಿನ ಶ್ರೀ ದೊಡ್ಡ ಬಸವೇಶ್ವರ ಹಾಗೂ ಇಲ್ಲಿನ ಜನರ ಆಶೀರ್ವಾದ ಮತ್ತು ಪ್ರೀತಿಯಿಂದ ನಾನು ನಮ್ಮ ಕುಟುಂಬ ಈ ಹಂತಕ್ಕೆ ಬಂದಿದ್ದೇವೆ, ನಿಮ್ಮ ಆಶೀರ್ವಾದ ಹೀಗೇ ಮುಂದೆಯೂ ಇರಲಿ ಎಂದು ಕೋರಿದರು.

ನನ್ನ ತಂದೆ ಶಾಸಕರಾದಾಗ ನಮ್ಮ ಕುಟುಂಬದ ಸದಸ್ಯರೊಬ್ಬರು ಶಾಸಕರಾದರೆಂದು ನೀವೆಲ್ಲ ಸಂಭ್ರಮ ಪಟ್ಟಿದ್ದೀರಿ, ಅದೇ ರೀತಿ ನಾನು ಶಾಸಕನಾದಾಗಲೂ ಕೂಡ ನಮ್ಮ ಮನೆಯ ಮಗ ಶಾಸಕ ಆದ ಎಂದು ಸಂತೋಷಪಟ್ಟಿದ್ದೀರಿ, ನಿಮ್ಮೆಲ್ಲರ ಪ್ರೀತಿ ಅನನ್ಯವಾದುದು ಎಂದರು.

ದೇವಸ್ಥಾನದ ಮರು ನಿರ್ಮಾಣಕ್ಕೆ ಆರ್ಥಿಕವಾಗಿ ಭಕ್ತಿ ಸೇವೆ ಸಲ್ಲಿಸಿದ ಮಾಜಿ ಶಾಸಕ ಸೂರ್ಯನಾರಾಯಣ ರೆಡ್ಡಿ, ಶಾಸಕ ಭರತ್ ರೆಡ್ಡಿ, ಉದ್ಯಮಿ ಸತೀಶ್ ರೆಡ್ಡಿಯವರ ಕಾರ್ಯವನ್ನು ಗ್ರಾಮದ ಹಿರಿಯರು ಶ್ಲಾಘಿಸಿದರು. ಈ ಸಂದರ್ಭ ಮಹಾನಗರ ಪಾಲಿಕೆಯ ಮಾಜಿ ಮೇಯರ್ ಎಂ.ರಾಜೇಶ್ವರಿ ಕಾಂಗ್ರೆಸ್ ಮುಖಂಡರಾದ ಸುಬ್ಬರಾಯುಡು, ಚಾನಾಳ್ ಶೇಖರ್, ಉದ್ಯಮಿ ಸತೀಶ್ ರೆಡ್ಡಿ, ಊರಿನ ಪ್ರಮುಖರಾದ ಮೇಟಿ ಬಸಪ್ಪ, ಹನುಮಂತ ರೆಡ್ಡಿ, ತಿಮ್ಮಪ್ಪ, ಗೋವಿಂದಪ್ಪ, ಬಸಪ್ಪಯ್ಯ, ಮಣೂರು ಜಡೆಪ್ಪ, ಕರೆಣ್ಣ, ಹೆಚ್.ಈಶ್ವರಗೌಡ, ಪರಶುರಾಮ ಮತ್ತಿತರರು ಹಾಜರಿದ್ದರು.

# ಅಂಬೇಡ್ಕರ್ ಭಾವಚಿತ್ರಕ್ಕೆ ಅವಮಾನ: ತಪ್ಪಿತಸ್ಥನಿಗೆ ಕಠಿಣ ಕ್ರಮಕ್ಕೆ ಒತ್ತಾಯ

• ಮಲ್ಲಮ್ಮ ನುಡಿವಾರ್ತೆ ಕುಕನೂರ



ತಾಲೂಕಿನ ವೀರಾಪುರ ಗ್ರಾಮದಲ್ಲಿ ಏಪ್ರಿಲ್ 16ರಂದು ಡಾ. ಬಿ.ಆರ್. ಅಂಬೇಡ್ಕರ್ ಸೇರಿದಂತೆ ಇತರೆ ಮಹನೀಯರ ಭಾವಚಿತ್ರಗಳಿಗೆ ಸೆಗಣಿ ಎರಚಿದ ಘಟನೆಗೆ ಸಂಬಂಧಿಸಿದಂತೆ ಆರೋಪಿಯ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದಲಿತ ಸಂಘಟನೆಗಳು ಹಾಗೂ ಮುಖಂಡರು ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಕಾಶ್ ದೊಡ್ಡಮನಿ ಅವರು ದೂರು ದಾಖಲಿಸಿದ್ದು, ಎಸ್‌ಸಿ/ಎಸ್‌ಟಿ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ ಬಳಿಕ ಆರೋಪಿಯನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಘಟನೆ ಕುರಿತು ಬುಧವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ದಲಿತ ಸಂಘಟನೆಯ ಮುಖಂಡ ಬಸವರಾಜ ನಡುವಿನಮನಿ, ಆರೋಪಿಯನ್ನು ಬಂಧಿಸಿ ನ್ಯಾಯಾಂಗಬಂಧನಕ್ಕೆ ಒಪ್ಪಿಸಿರುವುದು ಸ್ವಾಗತಾರ್ಹವಾದರೂ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಹೇಳಿದರು. ಯಾವುದೇ ರೀತಿಯ ಜಾತಿ ವೈಷಮ್ಯಕ್ಕೆ ಅವಕಾಶ ನೀಡದೆ ತಪ್ಪಿತಸ್ಥರ ವಿರುದ್ಧ ತಕ್ಷಣ ಕಾನೂನು ಕ್ರಮ ಜರುಗಿಸಬೇಕು. ಜೊತೆಗೆ, ಈ ಘಟನೆಗೆ ಕಾರಣವಾದ ಇತರೆ ವ್ಯಕ್ತಿಗಳನ್ನೂ ಪತ್ತೆಹಚ್ಚಿ, ಇದರ ಹಿಂದೆ ಇರುವವರನ್ನು ಗುರುತಿಸಲು ಸಮಗ್ರ ತನಿಖೆ ನಡೆಸಬೇಕು ಎಂದು ಅವರು ಆಗ್ರಹಿಸಿದರು. ಘಟನೆಯ ಪ್ರಮುಖ ಆರೋಪಿ ಶಿವಕುಮಾರ್ ರಾಮಣ್ಣ ಕಡೆಮನಿ (23) ಅವರನ್ನು ಏಪ್ರಿಲ್ 23ರಂದು ಪೊಲೀಸರು ಬಂಧಿಸಿದ್ದು, ಬಳಿಕ ನ್ಯಾಯಾಂಗಬಂಧನಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ವಿಶ್ವಮಾನವತೆಯ ಪ್ರತೀಕವಾಗಿದ್ದು, ಬಸವೇಶ್ವರರು ಜಗಜ್ಯೋತಿ ಎಂದು ಖ್ಯಾತಿ ಪಡೆದ ಮಹನೀಯರು. ಇಂತಹ ಮಹನೀಯರ ಭಾವಚಿತ್ರಗಳಿಗೆ ಅವಮಾನ ಮಾಡುವುದು ಸಮಾಜದ ಮೌಲ್ಯಗಳಿಗೆ ಧಕ್ಕೆ ತರುವಂತದ್ದು. ಇಂತಹ ಕೃತ್ಯಗಳಿಗೆ ಉಗ್ರ ಶಿಕ್ಷೆ ನೀಡುವುದರ ಮೂಲಕ ಇತರರಿಗೆ ಎಚ್ಚರಿಕೆ ಸಂದೇಶ ನೀಡಬೇಕು ಎಂದು ಮುಖಂಡರು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಇಂತಹ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಮಹನೀಯರ ಮೂರ್ತಿಗಳು ಮತ್ತು ವೃತ್ತಗಳಿರುವ ಸ್ಥಳಗಳಲ್ಲಿ ಭದ್ರತೆಗಾಗಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ಒತ್ತಾಯಿಸಲಾಗಿದೆ. ಈ ಬಗ್ಗೆ ತಹಶೀಲ್ದಾರರು ಸೂಚನೆ ನೀಡಿದ್ದು, ಗ್ರಾಮ ಪಂಚಾಯತ್‌ಗಳ ಮೂಲಕ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ ಪೊಲೀಸರ ಕ್ರಮಕ್ಕೆ ಸಂಘಟನೆಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಸಂಘಟನೆಗಳ ಮುಖಂಡರಾದ ಲಕ್ಷ್ಮಣ ಕಾಳಿ, ಗಾಳೆಪ್ಪಾ ಎಂ.ಡಿ., ಹನಮಂತಪ್ಪ ಕಡೆಮನಿ, ಹಣಮಂತಪ್ಪ ಮುತ್ತಾಳ, ನೀಲಪ್ಪ ದೊಡ್ಡಮನಿ, ರವಿ ಹಿರೇಮನಿ, ಹನುಮಂತಪ್ಪ ನಿಂಗಾಪುರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಗುರುವಂದನ ಸ್ನೇಹ ಸಮ್ಮಿಲನ



• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ಜಿಲ್ಲೆಯ ಕಾರಟಗಿ ತಾಲೂಕಿನ ಬೂದುಗುಂಪ ಸರಕಾರಿ ಪ್ರೌಢಶಾಲೆಯಲ್ಲಿ ಸಂಭ್ರಮದಿಂದ ಗುರುವಂದನಾ ಹಾಗೂ ಸ್ನೇಹಸಮ್ಮಿಲನ ಕಾರ್ಯಕ್ರಮವನ್ನು 2006–2007 ಸಾಲಿನ ಎಸ್. ಎಸ್. ಎಲ್. ಸಿ ವಿದ್ಯಾರ್ಥಿಗಳು ಬಹಳ ಸಂಭ್ರಮದಿಂದ ಕಾರ್ಯಕ್ರಮವನ್ನು ಆರಂಭಿಸಿದರು,

ಶ್ರೀ ಭೀಮೇಶ ತಾತನವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀ ಸಿದ್ದೇಶ್ವರ ಸ್ವಾಮಿಗಳು ಕೊಟ್ಟೂರೇಶ್ವರ ಮಠ ಬೂದಗುಂಪ ಇವರ ಸಾನಿಧ್ಯದಲ್ಲಿ ಕಾರ್ಯಕ್ರಮ ನೆರವೇರಿತು. ನಂತರ ಮಾತನಾಡಿದ ಶ್ರೀಗಳು 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಸದ್ಯ ಹೆಚ್ಚಿನ ಜನರ ದೈನಂದಿನ ಜೀವನವು ಗಡಿಬಿಡಿ ಮತ್ತು ತೊಂದರೆಗಳಿಂದ ಸುತ್ತುವರೆದಿದೆ ಜೀವನದಲ್ಲಿ ಮನಃಶಾಂತಿ ಮತ್ತು ಆನಂದವನ್ನು ಪಡೆಯಲು ಯಾವ ಸಾಧನೆಯನ್ನು ಮಾಡಬೇಕು ಮತ್ತು ನಿರ್ದಿಷ್ಟವಾಗಿ ಹೇಗೆ ಮಾಡಬೇಕು ಎಂಬುದರ ಯಥಾರ್ಥ ಜ್ಞಾನವನ್ನು ಕೊಡುವವರೇ ಗುರುಗಳು! ಆದರೆ ಇಂದು ಸಮಾಜ ಮಾತ್ರ ಗುರುಗಳ ಮಹತ್ವವನ್ನು ಮರೆಯುತ್ತಾ ಹೋಗುತ್ತಿದೆ. ಗ್ರಂಥಗಳಲ್ಲಿ ವರ್ಣಿಸಿದ ಗುರು ಮಹಿಮೆಯನ್ನು ಓದಿದ ಜಿಜ್ಞಾಸುಗಳಿಗೆ ಮತ್ತು ಸಾಧಕರಿಗೆ ಗುರುಗಳ ಬಗ್ಗೆ ಶ್ರದ್ಧೆ ನಿರ್ಮಾಣವಾಗುವುದು.

ಶಿಷ್ಯನ ಜೀವನದಲ್ಲಿ ಗುರುಗಳ ಮಹತ್ವವು ಅಸಾಧಾರಣವಾಗಿದೆ, ಏಕೆಂದರೆ ಗುರುಗಳಿಲ್ಲದೆ ಅವನಿಗೆ ಈಶ್ವರ ಪ್ರಾಪ್ತಿಯಾಗಲು ಸಾಧ್ಯವೇ ಇಲ್ಲ. ಗುರುಗಳ ಭಕ್ತವತ್ಸಲ ರೂಪ, ದಯಾಳು ದೃಷ್ಟಿ, ಶಿಷ್ಯನ ಮೇಲೆ ಕೃಪೆ ಮಾಡುವ ಮಾಧ್ಯಮಗಳು ಮುಂತಾದ ಬೇರೆಬೇರೆ ರೀತಿಯಲ್ಲಿ ಶಿಷ್ಯನಿಗೆ ಗುರುಗಳ ಅಂತರಂಗದ ನಿಜವಾದ ದರ್ಶನವು ಈ ಗ್ರಂಥದಿಂದ ಆಗುವುದು. ಇದರಿಂದ ಗುರುಗಳ ಮೇಲಿನ ಶಿಷ್ಯನ ಭಕ್ತಿಯು ದೃಢವಾಗುವುದು ಮತ್ತು ಅವನು ಗುರುಗಳ ಅಸ್ತಿತ್ವದ ಹೆಚ್ಚೆಚ್ಚು ಲಾಭ ಪಡೆದುಕೊಳ್ಳಬಹುದು ಎಂದರು.

ಭೀಮೇಶ್ ತಾತನವರು ಮಾತನಾಡಿ ಮನೆಯಲ್ಲಿ ತಂದೆ ತಾಯಿ ಬಂಧು ಬಳಗದೊಂದಿಗೆ ಸಂಸ್ಕಾರ ಕೊಟ್ಟ–ರೆ, ಶಿಕ್ಷಕರು ಜಗತ್ತಿನ ಶಿಕ್ಷಣದ ಸಂಸ್ಕಾರವನ್ನು ಕೊಡುತ್ತಾರೆ, ಶಿಕ್ಷಣದ ಸಂಸ್ಕಾರವೇ ವಿದ್ಯಾರ್ಥಿಯ ಜೀವನದ ಮೆಟ್ಟಲು ಎಂದರು. ನಂತರದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಮಾತನಾಡಿ ತಮ್ಮ ಮನದಾಳದ ಅನಿಸಿಕೆಗಳನ್ನು ಹಂಚಿಕೊಂಡರು.

ಗುರುಗಳಿಗೆ ಸನ್ಮಾನ ಕಾರ್ಯಕ್ರಮ

ವಿಶೇಷವಾಗಿ ವಿದ್ಯಾರ್ಥಿಗಳು ಎಲ್ಲಾ ಶಿಕ್ಷಕ ಶಿಕ್ಷಕಿಯರಿಗೆ ಪಾದ ಪೂಜೆ ಮಾಡುವ ದೃಶ್ಯ ವೇದಿಕೆಗೆ ಶೋಭೆ ನೀಡಿತು.

ವಿದ್ಯಾರ್ಥಿಗಳಿಂದ ಶಿಕ್ಷಕ, ಶಿಕ್ಷಕರಿಗೆ ಪಾದಪೂಜೆ ಕಾರ್ಯಕ್ರಮ ನೆರವೇರಿಸಿ ಶಿಕ್ಷಕ ಶಿಕ್ಷಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶಿಕ್ಷಕರಾದಂತ ಶ್ರೀ ಬಸವರಾಜ ಕರಾಟೆ, ಶ್ರೀ ರಾಜಶೇಖರ್, ಶ್ರೀ ರಾಮಚಂದ್ರಪ್ಪ ಚಿತ್ರಗಾರ, ಶ್ರೀ ರಾಮರಾವ್ ಕುಲಕರ್ಣಿ, ಶ್ರೀ ವೆಂಕಟೇಶ ದೇಸಾಯಿ, ಶ್ರೀ ಸೋಮಪ್ಪ, ಶ್ರೀಮತಿ ಮಂಜುಳ, ಶ್ರೀಮತಿ ಪಾರ್ವತಿ ಭಂಡಾರಿ, ಶ್ರೀಮತಿ ಜ್ಯೋತಿ ಸೇರಿದಂತೆ ಎಲ್ಲಾ ಶಿಕ್ಷಕರನ್ನು ಗೌರವಿಸಿ ಸನ್ಮಾನಿಸಲಾಯಿತು. 2006–2007 ಸಾಲಿನ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ, ಬೂದುಗುಂಪ, ತಿಮ್ಮಾಪುರ, ಹಾಲುಸಮುದ್ರ, ಯರಡೋಣ, ಹಾಸ್ಟೆಲ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿ ಸಂಭ್ರಮದಿಂದ ಯಶಸ್ವಿಗೊಳಿಸಿದರು.

# ಸಾಮೂಹಿಕ ವಿವಾಹದಲ್ಲಿ ಮದುವೆಯಾದವರೇ ಪುಣ್ಯವಂತರು: ಶಿವಶಾಂತವೀರ ಶರಣರು

• ಮಲ್ಲಮ್ಮ ನುಡಿವಾರ್ತೆ, ಕೊಪ್ಪಳ

ತಾಲ್ಲೂಕಿನ ಬೇವಿನಹಳ್ಳಿ ಗ್ರಾಮದ ಬಸವನಗೌಡ್ರ ಪಾಟೀಲ್ ತೋಟದ ಮನೆಯ ಆವರಣದಲ್ಲಿ ಶ್ರೀ ಚಿಕ್ಕೇನಕೊಪ್ಪದ ಚನ್ನವೀರ ಶರಣರ 31ನೇ ಪುಣ್ಯ ಸ್ಮರಣೋತ್ಸವ, ತುಲಾಭಾರ, ಶತಾಯುಷಿಗಳು, ಶರಣರ ಒಡನಾಡಿಗಳು ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿ–ತು. ಕಾರ್ಯಕ್ರಮವನ್ನು ವೇದಿಕೆಯಲ್ಲಿದ್ದ ಪೂಜ್ಯರು ಹಾಗೂ ಗಣ್ಯರು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿದರು.

ಸಮಾರಂಭದ ಸಾನ್ನಿಧ್ಯವಹಿಸಿದ್ದ ಬಳಗಾನೂರಿನ ಶ್ರೀ ಶಿವಶಾಂತವೀರ ಶರಣರು ಆಶೀರ್ವಚನ ನೀಡಿ, "ದುಡಿದ ಹಣದಲ್ಲಿ ಸಮಾಜಮುಖಿ ಕಾರ್ಯ ಮಾಡುವುದು ಸಮಾಜಕ್ಕೆ ಮಾದರಿಯಾಗಿದೆ. ಬೇವಿನಹಳ್ಳಿಯ ಬಸವನಗೌಡ್ರ ಕುಟುಂಬ ಪ್ರತಿ ವರ್ಷವೂ ಬಡವರ ಕಲ್ಯಾಣ ಕಾರ್ಯಗಳ ಮೂಲಕ ಜನಮನ ಗೆದ್ದಿದೆ. ಸಾಮೂಹಿಕ ವಿವಾಹದಲ್ಲಿ ಮದುವೆಯಾದವರೇ ಪುಣ್ಯವಂತರು. ಸಂತ ಶರಣರ ತತ್ವ–ಆದರ್ಶಗಳನ್ನು ಮೈಗೂಡಿಸಿಕೊಂಡು, ಸತಿ–ಪತಿಗಳಿಬ್ಬರೂ ಒಂದಾಗಿ ಶರಣರ ಸೇವೆ ಮಾಡಿ, ಕಾಯಕದ ಮೂಲಕ ಜೀವನ ಸಾರ್ಥಕ ಮಾಡಿಕೊಳ್ಳಬೇಕು" ಎಂದು ಕರೆ ನೀಡಿದರು. ಅಕ್ಷರ ಕಲಿಸಿದ ಗುರುಗಳು, ಹಿರಿಯ ಜೀವಿಗಳು ಹಾಗೂ ಶರಣರ ಒಡನಾಡಿಗಳನ್ನು ಗುರುತಿಸಿ ಗೌರವಿಸಿದ್ದು ಶ್ಲಾಘನೀಯ ಎಂದು ನವ ಜೋಡಿಗಳಿಗೆ ಶುಭ ಹಾರೈಸಿದರು.

ಹಿರಿಯ ಸಾಹಿತಿ ಎಸ್.ವಿ.ಪಾಟೀಲ್ ಗುಂಡೂರು ಪ್ರಾಸ್ತಾವಿಕವಾಗಿ ಮಾತನಾಡಿ, ಶರಣರ ಒಡನಾಟ ಹಾಗೂ ಜೀವಿತಾವಧಿಯಲ್ಲಿ ಅವರು ಮಾಡಿದ ಲೀಲೆಗಳ ಬಗ್ಗೆ ವಿವರಿಸಿದರು. ಕಾರ್ಯಕ್ರಮದ ಆಯೋಜಕ ಶರಣ ಬಸವನಗೌಡ್ರ ಪಾಟೀಲ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶಿವಶಾಂತವೀರ ಶರಣರು ಮತ್ತು ಹೆಬ್ಬಾಳದ ನಾಗಭೂಷಣ ಶಿವಾಚಾರ್ಯ ಮಹಾಸ್ವಾಮಿಗಳ ತುಲಾಭಾರ ಕಾರ್ಯಕ್ರಮ ನೆರವೇರಿತು. ನಂತರ ಉಭಯ ಪೂಜ್ಯರು ಆಶೀರ್ವಚನ ನೀಡಿದರು.

*ಸನ್ಮಾನಿತರು:* ಶತಾಯುಷಿಗಳಾದ ಬಸಮ್ಮ ಭೂಷನೂರಮಠ, ಮರಿಯಮ್ಮ ಪೋ.ಪಾ.ದಿ., ನಿಂಗಮ್ಮ ಶ್ಯಾನಬೋಗರ, ಗುರಮ್ಮ ಮಾದಿನೂರ, ಕಲ್ಲಮ್ಮ ಹಿರೇಮಠ, ಈರಮ್ಮ, ನೀಲಮ್ಮ ಹುಲ್ಲೂರು, ನರಸಮ್ಮ ಪಟ್ಟೇದ, ಸುಶೀಲಮ್ಮ ಹಿರೇಮಠ, ಕಲ್ಲಮ್ಮ ಕರ್ಕಿಹಳ್ಳಿ, ಮಲ್ಲಮ್ಮ ತಂಗೋಡಿ;

ನಿವೃತ್ತ ಶಿಕ್ಷಕರಾದ ಶಿವನಗೌಡ ಪಾಟೀಲ್, ಸೋಮಶೇಖರ್ ಹರ್ತಿ; ಶರಣರ ಒಡನಾಡಿಗಳಾದ ಜಿ.ಲಿಂಗನಗೌಡ, ಗೊಗ್ಗ ಗವಿಸಿದ್ದಯ್ಯ, ಕೆ.ಎಂ. ಹಾಲಪ್ಪ, ರಾಮಚಂದ್ರ ಶೆಟ್ಟಿ ಅವರಿಗೆ 'ಶರಣಶ್ರೀ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ವೇದಘೋಷ ಹಾಗೂ ಅನ್ನ ಸಂತರ್ಪಣೆ ಜರುಗಿತು. ಶರಣ ಸದ್ಭಕ್ತರು, ಗ್ರಾಮಸ್ಥರು, ಸುತ್ತಮುತ್ತಲಿನ ನಾಗರಿಕರು, ಪಾಟೀಲ್ ಕುಟುಂಬಸ್ಥರು ಹಾಗೂ ಕಲಾವಿದರು ಉಪಸ್ಥಿತರಿದ್ದರು.




# ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಭಾರತ ಕಿರುಚಿತ್ರ ಸ್ಪರ್ಧೆ

• ಮಲ್ಲಮ್ಮ ನುಡಿ ವಾರ್ತೆ ಕಾರವಾರ

ನವದೆಹಲಿಯ ಭಾರತದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಓಊಖಅ) 2015 ರಿಂದ ಮಾನವ ಹಕ್ಕುಗಳ ಕುರಿತು ಕಿರುಚಿತ್ರ ಸ್ಪರ್ಧೆಯನ್ನು ನಡೆಸಿಕೊಂಡು ಬರುತ್ತಿದೆ. 2026 ರಲ್ಲಿ ಸ್ಪರ್ಧೆಯ 12 ನೇ ಆವೃತ್ತಿಗೆ, ದೇಶದ ನಾಗರಿಕರಿಂದ ಆನ್‌ಲೈನ್‌ನಲ್ಲಿ ಪ್ರವೇಶಗಳನ್ನು ಆಹ್ವಾನಿಸಿದೆ. ಮೊದಲ, ಎರಡನೇ ಮತ್ತು ಮೂರನೇ ಅತ್ಯುತ್ತಮ ಚಿತ್ರಕ್ಕೆ ಬಹುಮಾನದ ಮೊತ್ತವು ಕ್ರಮವಾಗಿ ರೂ. 2 ಲಕ್ಷ, ರೂ. 1 ಲಕ್ಷ 50 ಸಾವಿರ ಮತ್ತು ರೂ. 1 ಲಕ್ಷ ಆಗಿರುತ್ತದೆ. ಆಯೋಗವು ಮೂರು ನಗದು ಪ್ರಶಸ್ತಿಗಳು, ಪ್ರಮಾಣಪತ್ರಗಳು ಮತ್ತು ಟ್ರೋಫಿಗಳ ಜೊತೆಗೆ, ತೀರ್ಪುಗಾರರು ಶಿಫಾರಸು ಮಾಡಿದ ಗರಿಷ್ಠ ನಾಲ್ಕು (4) ಚಿತ್ರಗಳಿಗೆ ತಲಾ ರೂ. 50 ಸಾವಿರ ನಗದು ಬಹುಮಾನದೊಂದಿಗೆ 'ಪ್ರಮಾಣಪತ್ರ'ವನ್ನು ನೀಡಲಾಗುವುದು.

# ಜಾಮಿಯಾ ಮಸೀದಿಯ ಸದಸ್ಯ ಮಹಮ್ಮದ್ ಅಲಿ ಹೃದಯಾಘಾತದಿಂದ ಮೃತ

• ಮಲ್ಲಮ್ಮ ನುಡಿ ವಾರ್ತೆ, ಹುಣಸೂರು



ನಗರದ 13 ನೇ ವಾರ್ಡಿನ ನಿಜಾಂ ಮೊಹಲ್ಲ ನಿವಾಸಿ ನಗರದ. ಬಜಾರ್ ರಸ್ತೆಯಲ್ಲಿರುವ ಜಾಮಿಯಾ ಮಸೀದಿಯ ಸದಸ್ಯರು ಮಹಮ್ಮದ್ ಅಲಿ. ವಯಸ್ಸು 40 ದಿಂದ. ಹೃದಯಾಘಾತ ಇಂದ ಮಧ್ಯಾಹ್ನ ಮೃತಪಟ್ಟಿದ್ದಾರೆ

ನಗರದ ಬೈಪಾಸ್ ರಸ್ತೆಯಲ್ಲಿ. ಕುದಾ ದಾತ್ ಮಸೀದಿಯ ಮಳಿಗೆಯಲ್ಲಿ ಪಂಚರ್ ಅಂಗಡಿ ಇಟ್ಟುಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದರು ಇವರಿಗೆ ಮಧ್ಯಾಹ್ನ ಆಕಸ್ಮಿಕವಾಗಿ ನೋವು ಕಂಡು ಬಂದು. ತುರ್ತಾಗಿ ಮನೆಗೆ ಹೋಗಿ ತನ್ನ ಸಂಬಂಧಿಕರನ್ನು ದೂರವಾಣಿ ಮುಖಾಂತರ. ಕರೆ ಮಾಡಿ ನನಗೆ ಆಗುತಲ್ಲ. ಅಂದ ಸಂದರ್ಭದಲ್ಲಿ ತುರ್ತಾಗಿ ಆಸ್ಪತ್ರೆಗೆ ಸೇರಿಸಲಾಗಿತ್ತು ಚಿಕಿತ್ಸೆಯನ್ನು ನೀಡಿ ಅಲ್ಲಿ ಚಿಕಿತ್ಸೆಯನ್ನು ಫಲಕರಿಸದೆ ಮೃತಪಟ್ಟಿದ್ದಾರೆ ಎಂದು ತಿಳಿದುಕೊಂಡ. ಮುರ್ತಾಪಟ್ಟ ವ್ಯಕ್ತಿಗೆ ಎರಡು ಹೆಣ್ಣು ಮಕ್ಕಳು ಹಾಗೂ ಹೆಂಡತಿ ಅಗಲಿದ್ದಾರೆ ಎಂದು ತಿಳಿದುಬಂದಿದೆ. ನಗರದ ಶಬ್ಬೀರ್ ನಗರ ಕಬ್ರಸ್ಥಾನ್ ಜನಾಜೇಕಿ ನಮಾಜ್ ಅಂತಕ್ರಿಯೆ ನಡೆಯಿತು.

# ಮಹಿಳಾ ವಕೀಲರ ಮನೆಯ ಮೇಲೆ ಗುಂಡಿನ ದಾಳಿ ವಿರೋಧಿಸಿ ಬೃಹತ್ ಪ್ರತಿಭಟನೆ




• ಮಲ್ಲಮ್ಮ ನುಡಿ ವಾರ್ತೆ, ವಿಜಯನಗರ

ಜಿಲ್ಲೆ ಹೊಸಪೇಟೆ ಏಪ್ರಿಲ್ 27. ನಗರದಲ್ಲಿ ಅಖಿಲ ಭಾರತ ವಕೀಲರ ಸಂಘದ ವತಿಯಿಂದ ಪೋಲೀಸ್ ಇನ್ಸ್ಪೆಕ್ಟರ್ ಚಿತ್ತವಾಡಗಿ ಠಾಣೆ ಹೊಸಪೇಟೆ ಮನವಿ ಪತ್ರ ನೀಡಿ ಬೃಹತ್ ಪ್ರತಿಭಟಿಸಿ, ಬೆಳಗಾವಿ ಮಹಿಳಾ ವಕೀಲರ ಮನೆಯ ಮೇಲೆ ಗುಂಡು ಹಾರಿಸಿದ ಘಟನೆ ವಿರೋಧಿಸಿ ಪ್ರತಿಭಟನೆ ನಡೆಸುವ ಮೂಲಕ ದಿನಾಂಕ 26.4.2026 ರಂದು ಬೆಳಗಾವಿಯಲ್ಲಿ ನಸುಕಿನ ಜಾವದಲ್ಲಿ ಅಪರಿಚಿತ ವ್ಯಕ್ತಿಗಳು ಮಹಿಳಾ ವಕೀಲರ ಮನೆಯ ಮೇಲೆ ಗುಂಡು ಹಾರಿಸಿರುವ ಘಟನೆಯು ವಕೀಲರನ್ನು ಬೆಚ್ಚಿ ಬೀಳಿಸಿದೆ. ಈ ಘಟನೆಯಿಂದ ಯಾವುದೇ ಪ್ರಮಾದ ಉಂಟಾಗಿಲ್ಲವಾದರೂ ಬೆದರಿಕೆ ಸಂದೇಶ ರವಾನಿಸುವ ದಿಸೆಯಲ್ಲಿ ಈ ಘಟನೆ ವಕೀಲ ಸಮುದಾಯದ ಮೇಲಿನ ಗಂಭೀರ ಬೆದರಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ಕೆಳಕಂಡ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದಿನಾಂಕ 28.4.2026 ರಂದು ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಅಂಬೇಡ್ಕರ್ ಸರ್ಕಲ್ ಬಳಿ ಪ್ರತಿಭಟನೆ ನಡೆಸಲಾಯಿತು. ಹಾಗೂ ಮನವಿ ಪತ್ರವನ್ನು ನೀಡುವ ಮೂಲಕ ಆ ಮಹಿಳಾ ವಕೀಲರಿಗೆ ಸೂಕ್ತ ಬಂದೋಬಸ್ತ್ ನೀಡಲು ಕೋರಲಾಗಿದೆ.

ಬೇಡಿಕೆಗಳು:

1. ಘಟನೆಗೆ ಕಾರಣರಾದವರನ್ನು ತಕ್ಷಣವೇ ಬಂಧನ ಮಾಡಬೇಕು.
2. ಘಟನೆಯನ್ನು ನ್ಯಾಯಾಂಗಿಕ ಕಣ್ಗಾವಲಿನಲ್ಲಿ ತನಿಖೆ ನಡೆಸಬೇಕು.
3. ಮಹಿಳಾ ವಕೀಲರಿಗೆ ಸೂಕ್ತ ಭದ್ರತೆ ಕಲ್ಪಿಸಬೇಕು. 4. ವಕೀಲರ ಸಂರಕ್ಷಣಾ ಕಾಯ್ದೆಗೆ ತಕ್ಷಣವೇ ತಿದ್ದುಪಡಿ ಮಾಡಿ ಕಾಯ್ದೆಯಲ್ಲಿನ ಅಪರಾಧಗಳನ್ನು ಜಾಮೀನು ರಹಿತ ಅಪರಾಧಗಳನ್ನಾಗಿ ಪರಿಗಣಿಸಬೇಕು.

ಎಂದು ರಾಜ್ಯ ಸಮಿತಿ ಸದಸ್ಯರಾದ ಎ.ಕರುಣಾನಿಧಿ, ವಕೀಲರು ಹಾಗೂ ೦ಖಐಗ ರಾಜ್ಯ ಸಮಿತಿ ಸದಸ್ಯರು, ಹಾಗೂ ಸರ್ವ ನ್ಯಾಯವಾದಿಗಳು ಮರಿಯಪ್ಪ, ಬಿಸಾಟಿ ಮಹೇಶ್ ಕಟಗಿ ಜಂಬಯ್ಯ ನಾಯಕ್, ದೇವೇಂದ್ರ ಪುಷ್ಪಲತಾ ಹಾಗೂ ಅಖಿಲ ಭಾರತ ವಕೀಲರ ಸಂಘದ ನ್ಯಾಯವಾದಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು

# ಅಂಬೇಡ್ಕರ್ ಅವರ ಜಯಂತಿ ಅಜ್ಞಾನದ ದಿನವಾಗಬಾರದು ಜ್ಞಾನದ ದಿನವಾಗಬೇಕು: ಜ್ಞಾನ ಪ್ರಕಾಶ್ ಸ್ವಾಮೀಜಿ

• ಮಲ್ಲಮ್ಮ ನುಡಿ ವಾರ್ತೆ, ಪಿರಿಯಾಪಟ್ಟಣ



ಡಾ. ಬಿ ಆರ್ ಅಂಬೇಡ್ಕರ್ ರವರ ಜಯಂತಿ ಅಜ್ಞಾನದ ದಿನವಾಗಬಾರದು ಜ್ಞಾನದ ದಿನವಾಗಬೇಕು ಎಂದು ಮೈಸೂರಿನ ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಕರೆ ನೀಡಿದರು.

ಪಟ್ಟಣದ ಶಿಕ್ಷಕರ ಸಭಾಂಗಣದ ಆವರಣದ ಸಮೀಪ ಇರುವ ಖಾಸಗಿ ಜಾಗದಲ್ಲಿ ಬುಧವಾರ ನಡೆದ ಡಾ. ಬಿಆರ್ ಅಂಬೇಡ್ಕರ್ ಅವರ 135 ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇವಾಲಯಗಳ ಹೆಸರಿನಲ್ಲಿ ಕಂದಾಚಾರವನ್ನು ಪಸರಿಸಿ ಅಂಧಕಾರ ಮುಳುಗಿಸುವ ದೇವಾಲಯಗಳನ್ನು ಸುತ್ತುವುದನ್ನು ಬಿಟ್ಟು ಜ್ಞಾನದಿಂದ ಕಂಠೀರವ ಗ್ರಂಥಾಲಯಗಳ ಕಡೆ ಎಲ್ಲರೂ ಮುಖ ಮಾಡಬೇಕು ಎಂದು ಸಲಹೆ ನೀಡಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹೆಸರಿನಲ್ಲಿ ದುಂದು ವೆಚ್ಚ ಮಾಡಿ ವೈಭವಿಕರಿಸುವುದನ್ನು ಬಿಟ್ಟು ಅವರ ಸಿದ್ಧಾಂತ ಮತ್ತು ಆಲೋಚನೆಗಳು ಎಲ್ಲರ ದಾರಿದೀಪವಾಗಬೇಕು ಹಾಗೂ ಅವರು ಹಾಕಿಕೊಟ್ಟಿರುವ ಸಿದ್ಧಾಂತ ಮತ್ತು ಆದರ್ಶಗಳು ವೈಯಕ್ತಿಕ ಸಾಧನೆಗಳ ಮೂಲಕ ಗುರಿ ಮುಟ್ಟಿದಾಗ ಅವರಿಗೆ ನೀಡಿದ ಗೌರವ ಮತ್ತು ಸಾರ್ಥಕತೆ ಆಗುತ್ತದೆ ಎಂದು ಕಿವಿಮಾತು ಹೇಳಿದರು.

ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ ವೆಂಕಟೇಶ್ ಮಾತನಾಡಿ ಅಂತಹ ಮಹಾನಿಯರ ಆದರ್ಶದಿಂದ ನನ್ನ ಅಭಿವೃದ್ಧಿ ಕಾರ್ಯಗಳು ಕ್ಷೇತ್ರಕ್ಕೆ ಅತ್ಯಂತ ಪ್ರಾಮಾಣಿಕವಾಗಿ ನಡೆಸುತ್ತಿರುವುದರಿಂದಲೇ ನಿತ್ಯವೂ ನನಗೆ ನೆಮ್ಮದಿ ತಂದಿದೆ ಎಂದರು.

ಅಲ್ಲಿದೆ ರಾಜ್ಯದಲ್ಲಿ ಒಳ ಮೀಸಲಾತಿಯ ವಿವಾದ ಸಮರ್ಪಕವಾಗಿ ಬಗೆಹರಿದಿದ್ದು ಯಾವುದೇ ಗೊಂದಲಕ್ಕೆ ಅವಕಾಶ ನೀಡದಂತೆ ಎಲ್ಲರೂ ಎಚ್ಚರ ವಹಿಸಬೇಕು ಎಂದು ಕಿರು ಮಾತು ಹೇಳಿದರು.

ವಿಧಾನಪರಿಷತ ಸದಸ್ಯ ಡಾ.ಕೆ ಶಿವಕುಮಾರ್ ಮಾತನಾಡಿ ವಿಶ್ವ ಮೆಚ್ಚುವಂತಹ ಭಾರತದ ಸಂವಿಧಾನವನ್ನು ಅರ್ಪಣೆ ಮಾಡಿದಂತಹ ಮಹಾನ್ ವ್ಯಕ್ತಿಯಾದ ಡಾ. ಬಿ ಆರ್ ಅಂಬೇಡ್ಕರ್ ರವರು ನಮ್ಮೆಲ್ಲರ ಶಕ್ತಿ ಎಂದು ಬಣ್ಣಿಸಿದರು.

ಅಲ್ಲದೆ ಪಿರಿಯಾಪಟ್ಟಣದ ಡಾ. ಬಿಆರ್ ಅಂಬೇಡ್ಕರ್ ಸಮುದಾಯ ಭವನಕ್ಕೆ 15 ಲಕ್ಷ ರೂಪಾಯಿ ಮತ್ತು ಗ್ರಂಥಾಲಯಕ್ಕೆ 10 ಲಕ್ಷ ರೂ ಭರವಸೆ ನೀಡಿದ ಅವರು ಎಲ್ಲರೂ ಶಿಕ್ಷಣ ಪಡೆದು ಜಾಗೃತರಾಗಿ ಎಂದು ಸಲಹೆ ನೀಡಿದರು.

ಮೈಸೂರು ಪೇಂಟ್ ಮತ್ತು ವಾರ್ನಿಸ್ ನಿಗಮದ ಅಧ್ಯಕ್ಷ ಎಚ್ ಡಿ ಗಣೇಶ್ ಮತ್ತು ಕಾಂಗ್ರೆಸ್ ಪಕ್ಷದ ವಕ್ತಾರ ಎಂ ಲಕ್ಷ್ಮಣ್ ಮಾತನಾಡಿದರು.

ಎಪಿಎಂಸಿ ಆವರಣದಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಅವರ ಪ್ರತಿನಿತ್ಯ ಮಾಲಾರ್ಪಣೆ ಮಾಡುವ ಮೂಲಕ ಬೆಳ್ಳಿ ಮತವನ್ನು ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ ವೆಂಕಟೇಶ್ ಚಾಲನೆ ನೀಡಿದರು ವಿವಿಧ ಕಲಾತಂಡಗಳೊಂದಿಗೆ ಮುಖ್ಯ ರಸ್ತೆಯ ಮೂಲಕ ಕಾರ್ಯಕ್ರಮ ಸ್ಥಳಕ್ಕೆ ಮೆರವಣಿಗೆ ನಡೆಸಲಾಯಿತು. ಸರ್ಕಾರದ ಐದು ಗ್ಯಾರಂಟಿಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಕೆ ವಿ ನಿತಿನ್ ವೆಂಕಟೇಶ್. ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಬಿಜೆ ಬಸವರಾಜ್. ಬಲಗೈ ಸಮುದಾಯಗಳ ಒಕ್ಕೂಟದ ಮುಖಂಡರಾದ ಟಿ ಈರಯ್ಯ. ಎಸ್ ರಾಮು ಐಲಾಪುರ. ಪಿ ಮಹದೇವ್. ಚನ್ನಕಲ್ ಶೇಖರ್. ಆವೃತ್ತಿ ಸೋಮಶೇಖರ್. ಧನರಾಜ್ ಬೆಳಗಲ್. ಎಚ್ ಡಿ ರಮೇಶ್. ಮೇಲೂರು ರಾಜೇಶ್. ತಿಂಕಪುರ ಮಹಾದೇವ್. ಎಜೆ ಗಣೇಶ್. ಪಿಪಿ ಮಹದೇವ್. ಹೇಮಂತ್ ಕುಮಾರ್. ಸಿ ತಮ್ಮಣಯ್ಯ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಮತ್ತು ಸಂಘ ಸಂಸ್ಥೆಯ ಮುಖಂಡರು ಸೇರಿದಂತೆ ಸಾವಿರಾರು ಮಂದಿ ಹಾಜರಿದ್ದರು.

# ಕನ್ನಡ ಸಾಹಿತ್ಯ ಸಮ್ಮೇಳನ ಜರುಗಲಿ



**ಕಂಪ್ಲಿ:** ಇಲ್ಲಿನ ಶ್ರೀಪೇಟೆ ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಕಾದಂಬರಿ ಲೋಕಾರ್ಪಣಾ ಸಮಾರಂಭ ಮಂಗಳವಾರ ಹಮ್ಮಿಕೊಂಡಿತ್ತು. ಲೇಖಕ ಬಂಗಿ ದೊಡ್ಡ ಮಂಜುನಾಥ ರಚಿಸಿದ ಬೆಂಕಿಯ ಶೀತ ಮತ್ತು ಶೀತದ ಕಾವು ಜೋಡಿ ಕಾದಂಬರಿಗಳನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಎನ್.ವೀರಭದ್ರಗೌಡ ಸಮಾರಂಭಕ್ಕೆ ಚಾಲನೆ ನೀಡಿ, ಕೃತಿಗಳ ಶಿರೋನಾಮೆ ಆಸಕ್ತಿದಾಯಕವಾಗಿವೆ. ನಿತ್ಯ ಅನೇಕ ಕೃತಿಗಳು ಬಿಡುಗಡೆಗೊಳ್ಳುತ್ತವೆ. ಓದುಗರ ಗಮನಸೆಳೆವಂತ ಕೃತಿಗಳು ಮಾತ್ರ ಉಳಿಯುತ್ತವೆ. ಕೆಲವೇ ಕೃತಿಗಳನ್ನು ರಚಿಸಿದ ನೀರಮಾನ್ವಿ, ದೇವನೂರು ಮಹಾದೇವರಂತಹವರು ಮನದಲ್ಲಿ ಉಳಿಯುತ್ತಾರೆ. ಕೃತಿಗಳು ಸೃಜನಾತ್ಮಕವಾಗಿ ಓದುಗರ ಮನಸ್ಸು ತಲುಪುವ ಕೃತಿಗಳು ಮುಂದಿನ ಶತಮಾನದಲ್ಲೂ ಬದುಕಿ ಉಳಿಯುತ್ತವೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗುವುದೇ ಎನ್ನುವ ಗೊಂದಲ ಮೂಡಿದೆ. ನಿಷ್ಠಿ ರುದ್ರಪ್ಪರವರು ಸಾಹಿತ್ಯ ಸಮ್ಮೇಳನ ನಡೆಯಲು ಮುಂದಾಗಬೇಕು. ಕಂಪ್ಲಿಯಲ್ಲಿ ನಡೆದ 2003 ಮತ್ತು 2006ರ ಹೋಬಳಿ ಮಟ್ಟದ ಸಮ್ಮೇಳನಗಳು ಗಮನಸೆಳೆದವು. ಬೇರೆ ಭಾಷೆಯನ್ನು ವಿರೋಧಿಸಬಾರದು. ನಮ್ಮ ಮಾತೃಭಾಷೆಯನ್ನು ಬಳಸುತ್ತಲೇ ಬೇರೆ ಭಾಷೆಯನ್ನು ಕಲಿಯಬೇಕು. ರಾಜ್ಯದಲ್ಲಿ ಎಲ್ಲಾ ಹಂತದ ಶಿಕ್ಷಣದಲ್ಲೂ ಕನ್ನಡ ಪೇಪರ್ ಕಡ್ಡಾಯವಾಗುವಂತ ನಿಯಮ ತರಬೇಕು. ಮಾಧ್ಯಮ ಉಧ್ಯಮವಾಗಿದ್ದು ಪತ್ರಕರ್ತರಿಗೆ ವೇತನ ಕೊಡದೆ ವರದಿ ಮಾಡಲು ಕೊಡುತ್ತಿವೆ. ಹೀಗಾದರೆ ಪತ್ರಕರ್ತರ ಬದುಕಿನ ಸ್ಥಿತಿಯೇನು? ಪತ್ರಕರ್ತನಿಗೆ ಉತ್ತಮ ವೇತನ ನೀಡುವಂತಾಗುವ ಬದಲಾವಣೆ ಆಗಬೇಕಿದೆ ಎಂದರು.

ಗಂಗಾವತಿಯ ಎಸ್.ಕೆ.ಎನ್.ಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಮುಮ್ತಾಜ್ ಬೇಗಂ ಜೋಡಿ ಕಾದಂಬರಿಗಳನ್ನು ವಿಮರ್ಶಿಸಿ ಮಾತನಾಡಿ, ಜಿಲ್ಲಾಧ್ಯಕ್ಷ ನಿಷ್ಠಿ ರುದ್ರಪ್ಪರವರು ಬಹಳ ಕಷ್ಟಪಟ್ಟು ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ತಂದಿದ್ದು, ಉತ್ತರ ಕರ್ನಾಟಕದ ಹೆಮ್ಮೆಯಾಗಿದೆ. ಮನುಷ್ಯ ಜೀವನದ ವಿವಿದ ಸ್ತರಗಳನ್ನು ಕಾದಂಬರಿ ಕಟ್ಟಿಕೊಡುತ್ತದೆ. ಸ್ವಾತಂತ್ರಪೂರ್ವ ನಂತರದಲ್ಲೂ ಕಾದಂಬರಿಗಳ ಬೆಳವಣಿಗೆಯ ಚಲನೆ ವಿಶೇಷವಾಗಿತ್ತು. 1881ರಲ್ಲಿ ಮಹಿಳಾ ಪ್ರಧಾನ ಕಾದಂಬರಿ ಇಂದಿರಾಬಾಯಿ ಪ್ರಕಟಗೊಂಡಿತು. ಪಾಶ್ಚತ್ಯ ಪ್ರಭಾವ ಕಾದಂಬರಿ ಲೋಕದ ಮೇಲಾಗಿದೆ. ಆಗ ವ್ಯಕ್ತಿ ಮತ್ತು ಸಮಾಜದ ಸಂಘರ್ಷಗಳು ಕಾದಂಬರಿಯ ವಸ್ತುಗಳಾಗಿದ್ದವು.

ಬೆಂಕಿಯ ಶೀತ ಕುತೂಹಲ ಕಾರಿ ಶೈಲಿಹೊಂದಿದೆ. ಭಾಷಿಕ, ವಸ್ತು, ಅಭಿವ್ಯಕ್ತಿ ದೃಷ್ಟಿಕೋನದಿಂದ ಕಟ್ಟಿಕೊಡುತ್ತದೆ. ಬೆಂಕಿಯ ಶೀತದೊಂದಿಗೆ ಜ್ಞಾನದ ತಂಪು ಇದೆ. ಎರಡು ಕೃತಿಗಳು ಮನುಷ್ಯನ ಇರ್ಷ್ಯೆ, ಶೋಷಣೆ, ಮತ್ಸರ ತಾತ್ವಿಕ ಸಂಘರ್ಷ ಕಥಾವಸ್ತುವಾಗಿದೆ. ಹೆಣ್ಣನ್ನು ಸಹ ಜಿಕಾದಂಬರಿಯಲ್ಲಿ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ ಎಂದರು. ಕನ್ನಡ ಹಿತರಕ್ಷಕ ಸಂಘದ ಗೌರವಾಧ್ಯಕ್ಷ ಕ.ಮ.ಹೇಮಯ್ಯಸ್ವಾಮಿ ಜೋಡಿ ಕಾದಂಬರಿಗಳನ್ನು ಬಿಡುಗಡೆಗೊಳಿಸಿದರು. ಶ್ರೀಪೇಟೆ ಬಸವೇಶ್ವರ ದೇವಸ್ಥಾನದ ಅಧ್ಯಕ್ಷ ಡಿ.ವೀರಪ್ಪ, ನಗರಾಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೃಷ್ಣ ಎಸ್.ಪೋಳ್, ಪಿರಮಿಡ್ ಮಾಸ್ಟರ್ ಕೋನೇರು ಶ್ರೀರಾಮಕೃಷ್ಣ, ಕಸಾಪ ತಾಲೂಕು ಅಧ್ಯಕ್ಷ ಷಣ್ಮುಖಪ್ಪ ಚಿತ್ರಗಾರ, ಲೇಖಕ ಬಂಗಿ ದೊಡ್ಡ ಮಂಜುನಾಥ, ಕಸಾಪ ಪದಾಧಿಕಾರಿಗಳಾದ ಅಂಬಿಗರ ಮಂಜುನಾಥ, ಎಸ್.ಡಿ.ಬಸವರಾಜ, ಎಲಿಗಾರ ವೆಂಕಟರೆಡ್ಡಿ, ಹಾದಿಮನಿ ಕಾಳಿಂಗವರ್ಧನ, ಅಶೋಕ ಕುಕನೂರು, ಎಸ್.ಶಾಮಸುಂದರರಾವು. ಯು.ಎಂ.ವಿದ್ಯಾಶಂಕರ, ಬಡಿಗೇರ ಜಿಲಾನ್‌ಸಾಬ್ ಸೇರಿ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ಶಿಕ್ಷಕ ಜೀರು ಮಲ್ಲಿಕಾರ್ಜುನ ಕಾರ್ಯಕ್ರಮ ನಿರೂಪಿಸಿದರು.

# ದೇವಸ್ಥಾನಕ್ಕೆ ತೆರಳುವ ಬಸ್ ಪ್ರಯಾಣಿಕರಿಗೆ ದೊರಕಲಿ



**ಗಂಗಾವತಿ:** ಶ್ರೀ ಹುಲಿಗೆಮ್ಮ ದೇವಸ್ಥಾನದ ಜಾತ್ರೆ ಅಂಗವಾಗಿ ಗಂಗಾವತಿಯಿಂದ ಹುಲಿಗಿಗೆ ಹೋಗುವ ಬಸ್ಸುಗಳು ಕಡಿಮೆ ಪ್ರಮಾಣ ಬಿಟ್ಟದ್ದು ಮತ್ತು ಅಗಳಕೇರಿ ಊರಿಗೆ ಹೋಗುವ ಬಸ್ಸುಗಳು ಶಿವಪುರ ಮಾರ್ಗವಾಗಿ ಹುಲಿಗೆ ತಲುಪುವ ಬಸ್ಸುಗಳು ಅಡ್ಡ ದಾರಿಯಲ್ಲಿ ಇರುವ ಗಂಜ್ ನ ಹತ್ತಿರವೇ ನಿಲ್ಲಿಸಿ ಪ್ರಯಾಣಿಕರನ್ನು ಇಳಿಸಿ ಹೋಗುತ್ತಾರೆ. ಆದರೆ ಗಂಜಿನಿಂದ ಸುಮಾರು ಮೂರು ಕಿಲೋಮೀಟರ್ ದೂರವಾಗಿರುವುದರಕಾರಣದಿಂದ ಭಕ್ತರಿಗೆ ನಡೆದುಕೊಂಡು ಶ್ರೀ ಹುಲಿಗೆಮ್ಮ ದೇವಸ್ಥಾನದ ಸನ್ನಿಧಾನಕ್ಕೆ ತಲುಪಲು ಭಕ್ತರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ವೃದ್ಧರು ಅಂಗವಿಕಲರು ಮತ್ತು ಮಹಿಳೆಯರು ಪೂಜೆಗೆ ಬೇಕಾಗುವ ಸಾಮಗ್ರಿಗಳ ಪೆಟ್ಟಿಗೆಯನ್ನು ಹೊತ್ತುಕೊಂಡು ಮತ್ತು ತಮ್ಮ ಮಕ್ಕಳನ್ನು ಕರೆದುಕೊಂಡು ಸುಮಾರು 3 ಕಿ.ಮೀ ವರೆಗೂ ನಡೆದುಕೊಂಡೆ ಹೋಗಬೇಕು ಕಾರಣ ಕನಿಷ್ಠ ರೈಲ್ವೆ ನಿಲ್ದಾಣದವರಿಗೂ ಬಸ್ಸುಗಳು ತಲುಪಿ ಪ್ರಯಾಣಿಕರನ್ನು ಇಳಿಸಿ ಹೋಗಬೇಕು ಎಂದು ಜಿ ಹುಲುಗಪ್ಪ ಮಾಸ್ಟರ್ ದಲಿತ ಸಂಘರ್ಷ ಸಮಿತಿ ಸಂಘಟನಾ ಸಂಚಾಲಕರು ಗಂಗಾವತಿ ಇವರು ಸಾರ್ವಜನಿಕರ ಪರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಾಯಿಸಿ ಮಾಧ್ಯಮದ ಮುಖಾಂತರ ಮನವಿ ಮಾಡಿದ್ದಾರೆ. ಗಂಗಾವತಿಯಿಂದ ಶ್ರೀ ಹುಲಿಗೆಮ್ಮ ಜಾತ್ರಾ ಪ್ರಯುಕ್ತವಾಗಿ ಹೆಚ್ಚುವರಿ ಬಸ್ಸುಗಳು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಿಂದ ತೆರಳುವ ಬಸ್ಸುಗಳು ಹುಲಿಗಿ ಒಳಗಡೆ ಇರುವಂತಹ ರೈಲ್ವೆ ನಿಲ್ದಾಣದ ಹತ್ತಿರವಾದರೂ ಪ್ರಯಾಣಿಕರನ್ನು ಇಳಿಸಿ ಹೋಗಬೇಕೆಂದು ಬಸ್ ಡಿಪೋ ಮ್ಯಾನೇಜರ್ ಹಾಗೂ ವ್ಯವಸ್ಥಾಪಕ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಬಸ್ಸುಗಳಿಗೆ ಸೂಚನೆ ನೀಡಬೇಕೆಂದು ಒತ್ತಾಯ. ಒಂದು ವೇಳೆ ಈ ಬಸ್ಸುಗಳ ಸೌಲಭ್ಯಗಳನ್ನು ದೊರಕದೆ ಹೋದಲ್ಲಿ ನಮ್ಮ ಸಂಘಟನೆ ವತಿಯಿಂದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

# ಪೊಲೀಸ್ ಕ್ರಮಗಳೊಂದಿಗೆ ಉರ್ಸ್ ಶರೀಫ್‌ಗೆ ಸಿದ್ಧತೆ

- **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ಹಜ್ರತ್ ಖ್ವಾಜಾ ಬಂದಾ ನವಾಜ್ (ರಹ್) ದರ್ಗಾದ ಸಜ್ಜಾದಾ ನಶೀನ್, ಹಜ್ರತ್ ಡಾ. ಹಾಫಿಜ್ ಸಯ್ಯದ್ ಮುಹಮ್ಮದ್ ಅಲಿ ಅಲ್-ಹುಸ್ಯೆನಿ ಅವರ ಅಧ್ಯಕ್ಷತೆಯಲ್ಲಿ ಮೇ 3,4 ಹಾಗೂ 5 ನೇ ತಾರೀಖು ನಡೆಯಲಿರುವ 622ನೇ ಉರ್ಸ್ ಶರೀಫ ಭದ್ರತೆ ಮತ್ತು ವ್ಯವಸ್ಥಾಪನಾ ವ್ಯವಸ್ಥೆಗಳನ್ನು ಅಂತಿಮಗೊಳಿಸಲು ದರ್ಗಾ ಶರೀಫ್ ಮೀಟಿಂಗ್ ಹಾಲ್‌ನಲ್ಲಿ ಪೊಲೀಸ ಇಲಾಖೆಯೊಂದಿಗೆ ಇಂದು ಉನ್ನತ ಮಟ್ಟದ ಸಮನ್ವಯ ಸಭೆಯನ್ನು ನಡೆಸಲಾಯಿತು.

ನಿರೀಕ್ಷಿತ ಸಾವಿರಾರು ಭಕ್ತರಿಗೆ ಸುರಕ್ಷಿತ, ಸಂಘಟಿತ ಮತ್ತು ಆಧ್ಯಾತ್ಮಿಕವಾಗಿ ಉತ್ಕೃಷ್ಟವಾದ ಅನುಭವವನ್ನು ಖಚಿತಪಡಿಸಿಕೊಳ್ಳಲು ಸಭೆಯು ಗಮನಹರಿಸಿತು.

ಮೆಹಬೂಬ್ ಗುಲ್ಶನ್ (ಪಬ್ಲಿಕ್ ಗಾರ್ಡನ್) ನಿಂದ ಪ್ರಾರಂಭವಾಗುವ ಸ್ಯಾಂಡಲ್ ಮೆರವಣಿಗೆ ಜಗತ್ ಸರ್ಕಲ್, ಸೂಪರ್ ಮಾರ್ಕೆಟ್, ಚೌಕ್, ಕ್ಲಾತ್ ಬಜಾರ್, ಮಾರ್ಕೆಟ್ ಮಸೀದಿ, ಸುನಾರ್ ಬಜಾರ್, ಗಣೇಶ್ ಮಂದಿರ, ಸ್ಯಾಂಡಲ್ ಗಲ್ಲಿ, ನ್ಯಾಷನಲ್ ಚೌಕ್ (ಡಂಕಾ), ಲಿಲ್ಲಿ ರೋಸ್, ಪಕೀಜಾ, ಮತ್ತು ಮಸೀದಿ ಚೌಕ್ ಸೇರಿದಂತೆ ಪ್ರಮುಖ ಚೆಕ್‌ಪೋಸ್ಟ್‌ಗಳು ಹೆಚ್ಚಿನ ಪೊಲೀಸ್ ನಿಯೋಜನೆಗೆ ಸಾಕ್ಷಿಯಾಗಲಿವೆ.



ಗ್ಯಾರಾ ಸೀಡಿಯಲ್ಲಿ ವಿಶೇಷ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಲಿ ದೆ. ದರ್ಗಾ ಆವರಣ, ಖಾಜಾ ಬಜಾರ್, ಕಾಲಿ ಗುಂಬದ್ ಮತ್ತು ಪಯಾನ್ ಪ್ರದೇಶದಂತಹ ಸೂಕ್ಷ್ಮ ವಲಯಗಳಾದ್ಯಂತ ಕೇಂದ್ರೀಕೃತ ಜನಸಂದಣಿ ನಿಯಂತ್ರಣ ಕ್ರಮಗಳು. ದರ್ಗಾದ ಮುಖ್ಯ ದ್ವಾರದಲ್ಲಿ ಕಟ್ಟುನಿಟ್ಟಾದ ಪಾರ್ಕಿಂಗ್ ನಿರ್ಬಂಧಗಳನ್ನು ಜಾರಿಗೊಳಿಸಲಾಗುವುದು. ವಾಹನಗಳ ಹರಿವನ್ನು ನಿಯಂತ್ರಿಸಲು ಮತ್ತು ದರ್ಗಾದ ಕಡೆಗೆ ಆಟೋ-ರಿಕ್ಷಾ ಪ್ರವೇಶವನ್ನು ನಿರ್ಬಂಧಿಸಲು ಪ್ರಮುಖ ಮಾರ್ಗ ರಸ್ತೆಗಳಲ್ಲಿ ಬ್ಯಾರಿಕೇಡಿಂಗ್ ಅನ್ನು ಅಳವಡಿಸಲಾಗುವುದು.

ಖಾಜಾ ಬಜಾರ್‌ನಲ್ಲಿ ನಡೆಯಲಿರುವ ಅಖಿಲ ಭಾರತ ಕೈಗಾರಿಕಾ ಪ್ರದರ್ಶನದ ಕಾರಣ ವಿಶೇಷ ಸಂಚಾರ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು.

ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ತೀರ್ಥಯಾತ್ರೆಯ ದಿನಗಳಲ್ಲಿ ಕಳ್ಳತನ, ಜೇಬುಗಳ್ಳತನ ಮತ್ತು ಮೊಬೈಲ್ ಕಸಿದುಕೊಳ್ಳುವಿಕೆಯ ವಿರುದ್ಧ ಪೊಲೀಸರು ಜಾಗರೂಕತೆಯನ್ನು ತೀವ್ರಗೊಳಿಸಲಾಗಲಿದೆ. ದರ್ಗಾ ಶರೀಫ್ ನಿಯಂತ್ರಣ ಕೊಠಡಿಯಿಂದ ಸಿಸಿಟಿವಿ ಕ್ಯಾಮೆರಾಗಳ ಮೂಲಕ ನಿರಂತರ ನಿಗಾ ವಹಿಸಲಾಗುವುದು.

ತಕ್ಷಣದ ಪ್ರತಿಕ್ರಿಯೆ ಮತ್ತು ಸಹಾಯಕ್ಕೆ ಅನುಕೂಲವಾಗುವಂತೆ ಆವರಣದೊಳಗೆ ತಾತ್ಕಾಲಿಕ ಪೊಲೀಸ್ ಚೌಕಿಅನ್ನು ಸಹ ಸ್ಥಾಪಿಸಲಾಗುವುದು.

ಪೊಲೀಸ್ ಸಿಬ್ಬಂದಿ, ದರ್ಗಾ ಭದ್ರತಾ ಸಿಬ್ಬಂದಿ ಮತ್ತು ಸ್ವಯಂಸೇವಕರ ನಡುವಿನ ಸಮನ್ವಯ ಕ್ರಿಯೆ ಮಹತ್ವದ್ದಾಗಿದೆ.

ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್.ಡಿ.ಐ.ಪಿ.ಎಸ್., ಡಿ.ಸಿ.ಪಿ ಪ್ರವೀಣ ನಾಯಕ್, ಎ.ಸಿ.ಪಿ ಶಿವನಗೌಡ ಪಾಟೀಲ್ ಕಲಬುರಗಿ ಉತ್ತರ, ಎ.ಸಿ.ಪಿ ಟ್ರಾಫಿಕ್ ಡಿ.ಟಿ.ಪ್ರಭು, ಶಕೀಲ್ ಅಂಗಡಿ ಸರ್ಕಲ್ ಇನ್ಸ್ ಪೆಕ್ಟರ್ ಟ್ರಾಫಿಕ್ 1 ಪೊಲೀಸ್ ಠಾಣೆ, ದಲೀಪ್ ಸಾಗರ್ ಸರ್ಕಲ್ ಇನ್ಸ್ ಪೆಕ್ಟರ್ ರೋಜಾ ಪೊಲೀಸ್ ಠಾಣೆ, ಸಿಕಂದರ್ ಖಾನ್ ಎಎಸ್ ಐ ಜನಾಬ್ ಸಫಾ ಅಲ್, ಜನಾಬ್ ಸಫಾ ಅಲ್. ಸೈಯದ್ ಯದುಲ್ಲಾ ಹುಸೇನಿ, ಜನಾಬ್ ಸೈಯದ್ ಶಾ ತಕಿವುಲ್ಲಾ ಹುಸೇನಿ ಸಾಹೇಬ್, ಸೈಯದ್ ಅಲಿ ಜಾಕಿ ಹುಸೇನಿ ಸಾಹೇಬ್, ಸೈಯದ್ ಬಖೇರ್ ಹುಸೇನಿ, ಸೈಯದ್ ಮುರ್ತಾಜಾ ಹುಸೇನಿ ಸಾಹೇಬ್, ಸೈಯದ್ ಅಖೀಬ್ ಹುಸೇನಿ ಸಾಹೇಬ್, ಅಬ್ದುಲ್ ಬಾಸಿತ್ ಕಾರ್ಯದರ್ಶಿ ದರ್ಗಾ, ಸೈಯದ್ ವಾಜಿದ್ ಸಹಾಯಕ ಕಾರ್ಯದರ್ಶಿ ದರ್ಗಾ ಮತ್ತಿತರರು ಉಪಸ್ಥಿತರಿದ್ದರು.

# ಮಾದಿಗ ಸಮಾಜದಿಂದ ಸರ್ಕಾರಕ್ಕೆ ಅಭಿನಂದನೆ

- **ಮಲ್ಲಮ್ಮ ನುಡಿ ವಾರ್ತೆ ವಿಜಯಪುರ**

ಪರಿಶಿಷ್ಟ ಜಾತಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಜಾರಿ ಯಾಗಬೇಕೆಂದು ಕಳೆದ 35 ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದ ಮಾದಿಗ ಸಮಾಜ ಬೇಡಿಕೆಯನ್ನು ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರ ಈಡೇರಿಸಿದೆ, ದಶಕಗಳ ಕಾಲ ಹೋರಾಟ ಮಾಡುತ್ತಾ ಬಂದಿದ್ದ ಮಾದಿಗ ಸಮಾಜಕ್ಕೆ ಕೊನೆಗೂ ಒಳ ಮೀಸಲಾತಿ ಜಾರಿ ಮಾಡುವ ಮೂಲಕ ಬಹುದೊಡ್ಡ ಐತಾಶಿಕ ಕೊಡುಗೆ ನೀಡಿದ್ದಾರೆ ಎಂದು ಕಾಂಗ್ರೆಸ್ಸಿನ ಜಿಲ್ಲಾ ಎಸ್ ಸಿ ಘಟಕದ ಅಧ್ಯಕ್ಷ ರಮೇಶ ಗುಬ್ಬೆವಾಡ ಹೇಳಿದರು.

35 ವರ್ಷಕ್ಕೂ ಹೆಚ್ಚು ಕಾಲ ಅರಬೆತ್ತಲೆ ಚಳುವಳಿ, ತಮಟೆ ಚಳುವಳಿ, ಮೌನ ಮೆರವಣಿಗೆ ಸೇರಿದಂತೆ ಹಲವಾರು ವೇದದ ಹೋರಾಟಗಳನ್ನು ಮಾಡುತ್ತ ಸರ್ಕಾರದ ಮೇಲೆ ಒತ್ತಡ ಹಾಕುತ್ತ ಅತ್ಯಂತ ಶಾಂತಿ ರೀತಿಯಲ್ಲಿ ಮಾದಿಗರು ಹೋರಾಟ ಮಾಡಿದ್ದರು. ಯಾವ ಸರ್ಕಾರಗಳು ಮಾದಿಗರ



ನೋವಿನ ಕೂಗನ್ನು ಕೇಳಿಸಿಕೊಳ್ಳಲಿಲ್ಲ. ಬಿಜೆಪಿ ಪಕ್ಷವು ಚುನಾವಣೆ ಸಮಯದಲ್ಲಿ ಮಾದಿಗರಿಗೆ ಒಳ ಮೀಸಲಾತಿ ಜಾರಿ ಮಾಡುತ್ತೇವೆ ಎಂದು ತಮ್ಮ ಚುನಾವಣೆ ಪ್ರಣಾಳಿಕೆಗಳಲ್ಲಿ ಹುಸಿ ಬರವಸೆಗಳನ್ನು ನೀಡಿ ಮಾದಿಗ ಸಮಾಜದ ಮೂಗಿಗೆ ತೊಪ್ಪ ಸವರಿ ವಂಚಿಸುತ್ತಾ ಬಂದಿದೆ ಎಂದು ಆರೋಪಿಸಿದರು. ಕಳೆದ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಮಾದಿಗರಿಗೆ ಒಳ ಮೀಸಲಾತಿ ಜಾರಿ ಮಾಡುತ್ತವೆ ಎಂದು ಖಚಿತವಾಗಿ ಹೇಳಿದ್ದರು.

# ನವೋದಯ ಸಂಘದಿಂದ ಪ್ರತಿಭೆಗೆ ಪ್ರೋತ್ಸಾಹ

- **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

ತಾಲೂಕಿನ ಹಂಪಾಪಟ್ಟಣ ಗ್ರಾಮದ ನವೋದಯ ಯುವಕ ಸಂಘದ ವತಿಯಿಂದ ಜೈ ಆಂಜನೇಯ ರಂಗಮಂದಿರದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷ ಬಿ. ನಾಗರಾಜ್ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಗೆ ಅಭಿನಂದನೆ ಸಲ್ಲಿಸಿದರು. “ಶಿಕ್ಷಣವೇ ವ್ಯಕ್ತಿಯ ಬದುಕಿನ ಬೆಳವಣಿಗೆಗೆ ಮೂಲಾಧಾರವಾಗಿದ್ದು, ಸಮಾಜದ ಪ್ರಗತಿಗೂ ದಾರಿಯಿಡುತ್ತದೆ” ಎಂದು ಹೇಳಿದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತವೆ ಎಂದರು.

ವಿದ್ಯಾರ್ಥಿಗಳು ಶ್ರಮ, ನಿಯಮ ಮತ್ತು ನಿಷ್ಠೆಯಿಂದ ಗುರಿಗಳನ್ನು ಸಾಧಿಸಿ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಯುವ ಮುಖಂಡ ಬಿ. ಕುಬೇರ ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ



ಆತ್ಮವಿಶ್ವಾಸವನ್ನು ಹೆಚ್ಚಿಸಿ ಶಿಕ್ಷಣದ ಮಹತ್ವವನ್ನು ಸಮಾಜಕ್ಕೆ ತಲುಪಿಸುತ್ತವೆ ಎಂದರು. ಗ್ರಾಮ ಪಂಚಾಯತಿ ಸದಸ್ಯ ಎನ್. ನಾಗರಾಜ ಅವರು ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವಲ್ಲಿ ಇಂತಹ ಕಾರ್ಯಕ್ರಮಗಳ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಟಿ. ಮಧು ಮಾತನಾಡಿ, ನಿಯಮಿತ ಅಧ್ಯಯನ ಮತ್ತು ಶ್ರಮದಿಂದ ಉನ್ನತ ಗುರಿಗಳನ್ನು ಸಾಧಿಸಬಹುದು ಎಂದು ಸಲಹೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

# ಸಿಡಿಲು ಬಡಿದು ಕೋರಿ ಸಿದ್ದೇಶ್ವರ ಮಠದಲ್ಲಿ ಅಗ್ನಿ ಅವಘಡ

- **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**

ಸಮೀಪದ ಮುದನೂರು ಗ್ರಾಮದಲ್ಲಿ ಮಂಗಳವಾರ ತಡರಾತ್ರಿ ಗಾಳಿ ಮಿಶ್ರಿತ ಮಿಂಚು ಗುಡುಗಿನ ಆರ್ಭಟದಲ್ಲಿ ಗ್ರಾಮದ ಪ್ರಸಿದ್ಧ ಕೋರಿ ಸಿದ್ದೇಶ್ವರ ಶಾಖಾ ಮಠಕ್ಕೆ ಸಿಡಿಲು ಬಡಿದ ಪರಿಣಾಮ ಬೆಂಕಿ ಕಾಣಿಸಿಕೊಂಡು ಭೀಕರ ಅಗ್ನಿ ಅವಘಡ ಸಂಭವಿಸಿದೆ.

ಸಿಡಿಲಿನ ತೀವ್ರತೆಗೆ ಮಠದ ಒಳಗಿದ್ದ ದೇವರ ಮೂರ್ತಿಗಳು, ಪೀಠೋಪಕರಣಗಳು ಹಾಗೂ ಪೂಜಾ ಕೈಂಕರ್ಯಕ್ಕೆ ಬಳಸುತ್ತಿದ್ದ ವಸ್ತುಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿವೆ. ಘಟನೆಯ ವೇಳೆ ಸಿಡಿಲಿನ ಭಾರೀ ಸದ್ದು ಕೇಳಿಬಂದಿದ್ದು, ಗ್ರಾಮಸ್ಥರು ತೀವ್ರ ಆತಂಕಕ್ಕೊಳಗಾಗಿದ್ದರು. ಮಠದ ಆವರಣದಲ್ಲಿದ್ದ ಭಕ್ತರು ತಕ್ಷಣವೇ ಸುರಕ್ಷಿತ ಸ್ಥಳಕ್ಕೆ ಓಡಿ ಹೋಗಿದ್ದರಿಂದ ದೊಡ್ಡ ಮಟ್ಟದ ಪ್ರಾಣಾಪಾಯವೊಂದು ತಪ್ಪಿದಂತಾಗಿದೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ಹತೋಟಿಗೆ ತಂದಿದ್ದಾರೆ. ಇದರಿಂದಾಗಿ ಮಠದ ಕಟ್ಟಡಕ್ಕೆ ಆಗಬಹುದಿದ್ದ ಹೆಚ್ಚಿನ ಹಾನಿಯನ್ನು ತಡೆಯಲಾಗಿದೆ. ಪ್ರಾಥಮಿಕ ತನಿಖೆಯ ಪ್ರಕಾರ ಸಿಡಿಲು ಬಡಿದಿದ್ದೇ ಈ ಅಗ್ನಿ ಅವಘಡಕ್ಕೆ ನೇರ ಕಾರಣ ಎಂದು ತಿಳಿದುಬಂದಿದೆ.

ಕೆಂಭಾವಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಸ್ಥಳೀಯ ಕಂದಾಯ ಅಧಿಕಾರಿಗಳು ಮಠಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಹಾನಿಯ ಒಟ್ಟು ಮೊತ್ತವನ್ನು ಅಂದಾಜಿಸಲಾಗುತ್ತಿದ್ದು, ಸರ್ಕಾರದ ವತಿಯಿಂದ ಸೂಕ್ತ ಪರಿಹಾರ ಒದಗಿಸುವ ಕುರಿತು ಭರವಸೆ ನೀಡಲಾಗಿದೆ.



# ಅರಿವಿನ ದೋಣಿಯಲಿ ಸಂಸಾರವೆಂಬ ಹಳೆಯ ಹೊಳಿ ದಾಟಬೇಕು



**ತತ್ತ-ಭಾವಾರ್ಥ**
● ಬಸವರಾಜ ಶರಣರು ಬೋರಗಿ
ತಾತ್ವಿಕ ಚಿಂತಕರು

ಈಸ ಬಂದರ ನೀನೆ ಒಳಗಿಳಿಯೋ
ಬಾಳ ಖೋಡ್ಯಾದ ಸುಳಿಯೋ
ಈಸ ಬಂದರ ನೀನೆ ಒಳಗಿಳಿಯೋ ॥ಪ॥
ದಂಡಿಮ್ಯಾಗ ಹಳಸದ ಖೊಟ್ಟಿ
ಕಾಲಿಟ್ಟರ ಜ್ಯಾರತಾದ ಗಟ್ಟಿ
ಈಸ್ತಿವೆಂದೋರ್ದು ಬಾಳಾದ ಪಟ್ಟಿ
ಈಸಿದವನು ತಾ ಜಗಜಟ್ಟಿ ॥1॥
ನೀರ ಬಾಳ ಐತಿ ಆಳ
ಇಳದರ್ವೇನು ಬಂದಿಲ್ಲ ಮ್ಯಾಲ
ಹಿಂಗೆ ಹೋಗ್ಯಾವ ಎಷ್ಟೋ ಕಾಲ
ತಿಳಿದು ಇಳಿಯೋ ಇದರ ಮೂಲ ॥2॥
ಮುಳುಗಿದವರು ಉಳದೇ ಇಲ್ಲ
ಉಳಿದವರು ಮುಳುಗೇ ಇಲ್ಲ
ತಿಳಿದವರು ಕೇಳರಿ ಸೊಲ್ಲ
ಬಲ್ಲವರಿಗೆ ಇದು ಅಗಾಧವಲ್ಲ ॥3॥
ಸಂಸಾರೆಂಬೊ ಹಳಿಹೊಳಿ ತಮ್ಮ
ಈಸಿ ಈಸಿ ಬಿಡಬ್ಯಾಡ ದಮ್ಮ
ಬೋರಿಗೀಶನ ಪಾದ್ಹಿಡಿ ಸುಮ್ಮ
ದಡ ಸೇರಿಸುವಾ ಶ್ರೀಗುರು ಭೀಮ ॥4॥



ಈ ತತ್ವಪದವು ಮಾನವನ ಸಂಸಾರ ಜೀವನದ ಗಾಢ ಸತ್ಯವನ್ನು ಬಹಳ ಸರಳ ರೂಪಕಗಳ ಮೂಲಕ ತಿಳಿಸುತ್ತದೆ.

**ಭಾವಾರ್ಥ:**

"ಈಸುವುದು" (ಈಜುವುದು) ಎಂಬುದು ಪ್ರಮುಖ ರೂಪಕ. ಸಂಸಾರವೆಂಬ ಹಳೆಯ (ಎಂದಿನಿಂದಲೂ ಇರುವ) ಹೊಳಿಯನ್ನು ದಾಟಲು ಮಾನವನು ತಾನು ಶ್ರಮಿಸಬೇಕು, ಆದರೆ ಆ ಶ್ರಮವು ಜ್ಞಾನವಿಲ್ಲದೆ ನಡೆದರೆ ಅದು ಅಪಾಯಕಾರಿಯಾಗುತ್ತದೆ ಎಂಬುದನ್ನು ಇದು ಧ್ವನಿಸುತ್ತದೆ.

"ಈಸ ಬಂದರ ನೀನೆ ಒಳಗಿಳಿಯೋ" ಎಂದರೆ, ಸಂಸಾರ ಹೊಳಿಯನ್ನು ದಾಟಲು ಬಯಸುವವನು ಮೊದಲು ಅದರೊಳಗೆ ಪ್ರವೇಶಿಸಬೇಕು. ಆದರೆ “ಬಾಳ ಖೋಡ್ಯಾದ ಸುಳಿಯೋ” ಎಂದು ಹೇಳುವ ಮೂಲಕ, ಜೀವನವು ಸುಳಿಯಂತಿದೆ ಅಂದರೆ ಆಕರ್ಷಣೆ, ಮೋಹ, ಅಜ್ಞಾನ ಇವುಗಳಿಂದ ತುಂಬಿದ ಅಪಾಯಕಾರಿ ಪ್ರವಾಹ. ಹೀಗಾಗಿ ಯಾರು ಬೇಕಾದರೂ ಅಜಾಗರೂಕತೆಯಿಂದ ಇದರಲ್ಲಿ ಇಳಿದರೆ ಮುಳುಗುವ ಸಾಧ್ಯತೆ ಅಧಿಕವಾಗಿದೆ.

ಮೊದಲನೆಯ ಚರಣದಲ್ಲಿ ಸಂಸಾರವನ್ನು “ಹಳಸದ ಖೊಟ್ಟಿ” ಮತ್ತು “ಜ್ಯಾರತಾದ ಗಟ್ಟಿ” ಎಂದು ಹೋಲಿಸಲಾಗಿದೆ. ಗಟ್ಟಿಯಾದ ಕಲ್ಲಿನಂತೆ ಅದು ದೃಢವಾಗಿ ಕಾಣಿಸಿದರೂ ಹಳಸಿನಿಂದ ದುರ್ಬಲವಾಗಿದೆ. ಅಜ್ಞಾನಿಗಳ ಜೀವನವು ಬಲಿಷ್ಠವೆಂದು ಕಾಣಬಹುದು, ಆದರೆ ಅದು ಸ್ಥಿರವಲ್ಲ. "ಈಸಿದವನು ತಾ ಜಗಜಟ್ಟಿ" ಎಂದರೆ, ಜ್ಞಾನದಿಂದ ಈಜುವವನೇ ಜಗತ್ತಿನಲ್ಲಿ ನಿಜವಾದ ಸಾಧಕನಾಗಿದ್ದಾನೆ.

ಎರಡನೆಯ ಚರಣವು ಸಂಸಾರದ ಆಳವನ್ನು ವಿವರಿಸುತ್ತದೆ. "ನೀರ ಬಾಳ ಐತಿ ಆಳ" ಜೀವನವು ಬಹಳ ಆಳವಾದ ಹೊಳಿ. ಅದರ ಮೂಲವನ್ನು ತಿಳಿಯದೇ ಅದರಲ್ಲಿ ಇಳಿದರೆ ಅಪಾಯ ತಪ್ಪದು. ಅಂದರೆ, ಆತ್ಮಜ್ಞಾನವಿಲ್ಲದೆ ಬದುಕಿನಲ್ಲಿ ಮುಳುಗಿದರೆ, ಅದು ದುಃಖಕ್ಕೆ ಕಾರಣವಾಗುತ್ತದೆ.

**ಮೂರನೆಯ ಚರಣದಲ್ಲಿ ಅತ್ಯಂತ ಗಂಭೀರ ತತ್ವವಿದೆ** "ಮುಳುಗಿದವರು ಉಳದೇ ಇಲ್ಲ, ಉಳಿದವರು ಮುಳುಗೇ ಇಲ್ಲ"

ಇದು ದ್ವಂದ್ವದ ಮಾತು. ಅಜ್ಞಾನದಲ್ಲಿ ಮುಳುಗಿದವರು ಮೋಕ್ಷವನ್ನು ಪಡೆಯಲಾರರು; ಜ್ಞಾನಿಗಳಾದವರು ಸಂಸಾರದಲ್ಲಿ ಸಿಲುಕುವುದಿಲ್ಲ. "ತಿಳಿದವರು ಕೇಳರಿ ಸೊಲ್ಲ" ಎಂದರೆ, ಈ ರಹಸ್ಯವನ್ನು ಅರಿತವರು ಮಾತ್ರ ಇದರ ಅರ್ಥವನ್ನು ಗ್ರಹಿಸಬಲ್ಲರು ಎಂದರ್ಥ.

ನಾಲ್ಕನೆಯ ಚರಣವು ಪರಿಹಾರವನ್ನು ನೀಡುತ್ತದೆ.

ಸಂಸಾರವೆಂಬ ಹೊಳೆಯಲ್ಲೇ ಈಜುತ್ತಾ ಶ್ರಮಿಸದೆ, "ಬೋರಿಗೀಶನ ಪಾದ ಹಿಡಿ" ಅಂದರೆ, ಪರಮಾತ್ಮನ ಶರಣಾಗತಿ ಮತ್ತು ಗುರುಕೃಪೆಯೇ ನಿಜವಾದ ಮಾರ್ಗ. "ದಡ ಸೇರಿಸುವಾ ಶ್ರೀಗುರು ಭೀಮ" ಎಂದರೆ, ಸದ್ಗುರುವಿನ ಮಾರ್ಗದರ್ಶನದಿಂದಲೇ ಜೀವನು ಸಂಸಾರ ಹೊಳಿಯನ್ನು ದಾಟಿ ಮೋಕ್ಷದಡವನ್ನು ಸೇರುತ್ತಾನೆ.

**ತಾತ್ಪರ್ಯ:**

ಈ ತತ್ವಪದವು ಸಂಸಾರವನ್ನು ಹೊಳಿಗೆ ಹೋಲಿಸಿ, ಅದರಲ್ಲಿ ಅಜ್ಞಾನದಿಂದ ಮುಳುಗದೆ, ಜ್ಞಾನ ಮತ್ತು ಗುರುಭಕ್ತಿಯಿಂದ ದಾಟಬೇಕು ಎಂಬ ಸಂದೇಶವನ್ನು ನೀಡುತ್ತದೆ. ಜೀವನದಲ್ಲಿ ಕೇವಲ ಶ್ರಮ ಮಾತ್ರ ಸಾಕಾಗುವುದಿಲ್ಲ; ಸರಿಯಾದ ದಿಕ್ಕು, ಜ್ಞಾನ, ಮತ್ತು ಗುರುಕೃಪೆ ಅವಶ್ಯಕ. ಅದುವೇ ಮಾನವನನ್ನು ಮೋಕ್ಷದ ಮಾರ್ಗಕ್ಕೆ ಕೊಂಡೊಯ್ಯುತ್ತದೆ.

ಇದು ತುಂಬಾ ಗಾಢವಾದ ಶರಣರ ತತ್ವ ಸರಳ ಪದಗಳಲ್ಲಿ ಮಹತ್ತರ ಜೀವನ ಸತ್ಯವನ್ನು ಹೇಳುವ ಕಾವ್ಯವಾಗಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)